# ಯುಗಶ್ರಿ

- ಎಂ.ಟಿ.ಎ. ಅಲ್‌ಅರಬಿಯ್ಯ ಚಾನೆಲ್ العربية
- ಜಿಹಾದ್ ಎಂದರೇನು?
- ಈಸಾ ಮಸೀಹರ ಪ್ರಾಯ
- ಧರ್ಮದ ನಾಮದಲ್ಲಿ ರಕ್ತಪಾತ

ಡಿಸೆಂಬರ್ 2007

ತ್ರೈಮಾಸಿಕ
ಬೆಲೆ ರೂ.5/-

"ಅಲ್ಲಾಹನು ನಿಮ್ಮಲ್ಲಿ ಕೆಲವರನ್ನು ಬೇರೆ ಕೆಲವರಿಗಿಂತ ಜೀವನಾಧಾರದಲ್ಲಿ ಶ್ರೇಷ್ಠರನ್ನಾಗಿ ಮಾಡಿರುವನು. ಆದರೆ ಶ್ರೇಷ್ಠತೆಯನ್ನು ಪಡೆದವರು ತಮ್ಮ ಸಂಪತ್ತನ್ನು ಅವರ ಅಧೀನದಲ್ಲಿರುವವರಿಗೆ ಅವರೆಲ್ಲರೂ ಸಮಾನರಾಗುವಂತೆ ಬಿಟ್ಟುಕೊಡಲಾರರು. ಹಾಗಾದರೆ ಅವರು ಅಲ್ಲಾಹನ ಅನುಗ್ರಹವನ್ನು ನಿರಾಕರಿಸುತ್ತಾರೋ?"

ಪವಿತ್ರ ಖುರ್‌ಆನ್ (16 : 72)

# ಯುಗರಶ್ಮಿ

## ತ್ರೈಮಾಸಿಕ

10 - 23 - 1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/- ವಾರ್ಷಿಕ ಚಂದಾ : ರೂ.20/- ಅಂಚೆ ಮೂಲಕ : ರೂ.30/-

ವಿಷಯ ಸೂಚಿಕೆ

| ವಿಷಯ | ಪುಟ |
|---|---|
| ★ ಹಜ್ಜ್ ಕರ್ಮಾನುಷ್ಠಾನ | 1 |
| ★ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ★ ಎಂ.ಟಿ.ಎ. ಅಲ್‌ಅರಬಿಯ್ಯ ಚಾನೆಲ್ | 3 |
| ★ ಜಿಹಾದ್ ಎಂದರೇನು? | 9 |
| ★ ಈಸಾ ಮಸೀಹರ ಪ್ರಾಯ | 16 |
| ★ ಇಸ್ಲಾಮಿನ ಪ್ರಾಥಮಿಕ ಪಾಠಗಳು | 20 |
| ★ ಇಸ್ಲಾಮ್ ಧರ್ಮದ ಪ್ರಚಾರ - ನಮ್ಮ ಹೆಗ್ಗುರುತು | 21 |
| ★ ಸಂಪಾದಕರಿಗೆ ಪತ್ರ | 22 |
| ★ ಪುಸ್ತಕ ವಿಭಾಗ : ಧರ್ಮದ ನಾಮದಲ್ಲಿ ರಕ್ತಪಾತ | 23 |




New MTA channel featuring Arabic television content 24 hours a day.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 24 | ಡಿಸೆಂಬರ್ 2007 | ಫತಹ್ 1386 | ಸಂಚಿಕೆ : 4 |
| --- | --- | --- | --- | --- |


# ಹಜ್ಜ್ ಕರ್ಮಾನುಷ್ಠಾನ

ಪ್ರತಿಯೊಂದು ಮೊಹಲ್ಲಾದ ಜನರು ತಮ್ಮ ಮೊಹಲ್ಲಾದ ಮಸೀದಿಗಳಲ್ಲಿ ದಿನಂಪ್ರತಿ ಐದು ಹೊತ್ತು ಒಟ್ಟು ಸೇರಬೇಕೆಂದು ಅಲ್ಲಾಹನು ಆಜ್ಞಾಪಿಸುತ್ತಾನೆ. ಅದರ ನಂತರ ಪಟ್ಟಣದ ಜನರೆಲ್ಲರೂ ಏಳನೆಯ ದಿವಸ ಶುಕ್ರವಾರ ವಿಶಾಲವಾದ ಜುಮಾ ಮಸೀದಿಯಲ್ಲಿ ಜಮಾಯಿಸಬೇಕೆಂದು ಅಲ್ಲಾಹನು ಆದೇಶಿಸುತ್ತಾನೆ. ಆ ಬಳಿಕ ವರ್ಷದಲ್ಲಿ ಒಮ್ಮೆ ಪಟ್ಟಣದಲ್ಲಿ ಮತ್ತು ಅದರ ಸುತ್ತುಮುತ್ತಲ ಸ್ಥಳಗಳಲ್ಲಿರುವ ಜನರು ಈದ್‌ಗಾಹ್‌ನಲ್ಲಿ ಒಟ್ಟುಗೂಡಬೇಕೆಂದು ನಿರ್ದೇಶಿಸುತ್ತಾನೆ. ಅನಂತರ ಕನಿಷ್ಠ ಪಕ್ಷ ಜೀವಮಾನದಲ್ಲಿ ಒಮ್ಮೆಯಾದರೂ ಲೋಕದೆಲ್ಲೆಡೆ ಇರುವ ಜನರು ಪುಣ್ಯಭೂಮಿ ಮಕ್ಕದಲ್ಲಿ ಸಮ್ಮೇಳಿಸಬೇಕೆಂದೂ ಆಜ್ಞಾಪಿಸುತ್ತಾನೆ. ಹಾಗೆ ಅಲ್ಲಾಹನು ಸ್ವಲ್ಪ ಸ್ವಲ್ಪವಾಗಿ ಸಮುದಾಯದ ಒಗ್ಗೂಡುವಿಕೆಯನ್ನು ಹಜ್ಜ್ ಸಂದರ್ಭದಲ್ಲಿ ಅದರ ಪರಿಪೂರ್ಣತೆಗೆ ತಲಪಿಸುತ್ತಾನೆ. ಮೊದಲಿಗೆ ಮುಸ್ಲಿಮರು ಒಟ್ಟು ಸೇರಲಿಕ್ಕಾಗಿ ಚಿಕ್ಕ ಚಿಕ್ಕ ಸಂದರ್ಭಗಳನ್ನು ಏರ್ಪಡಿಸಲಾಗುತ್ತದೆ. ನಂತರ ಲೋಕದಲ್ಲೆಲ್ಲೂ ಇರುವ ಮುಸ್ಲಿಮರನ್ನು ಒಂದು ಸ್ಥಳದಲ್ಲಿ ಸಮ್ಮೇಳಿಸುವ ವ್ಯವಸ್ಥೆ ಉಂಟಾಗುತ್ತದೆ. ದೈವಿಕ ಗ್ರಂಥಗಳಲ್ಲಿ ಕಾಣಲ್ಪಡುವ ಸರ್ವಕಾಲದ ಸಂಪ್ರದಾಯ ಇದೇ ಆಗಿದೆ. ಮನುಷ್ಯ ಕುಲದ ಏಕತೆಗಿರುವ ವೃತ್ತವನ್ನು ಸ್ವಲ್ಪ ಸ್ವಲ್ಪವಾಗಿ ಅದರ ಪರಿಪೂರ್ಣತೆಗೆ ತಲಪಿಸಲು ಅಲ್ಲಾಹನು ಇಚ್ಛಿಸುತ್ತಾನೆ. ಮೊದಲಿಗೆ ಸಣ್ಣ ಸಣ್ಣ ವೃತ್ತಗಳಲ್ಲಿ ಒಟ್ಟುಗೂಡಲು ಏರ್ಪಾಡು ಉಂಟಾಗುತ್ತದೆ. ಕೊನೆಗೆ ಹಜ್ಜ್ ಸಂದರ್ಭದಲ್ಲಿ ಎಲ್ಲರನ್ನೂ ಒಂದುಗೂಡಿಸಿಕೊಂಡು ಐಕ್ಯವನ್ನು ಅದರ ಪರಿಪೂರ್ಣತೆಗೆ ತಲಪಿಸಲಾಗುತ್ತದೆ. ಇದು ಸಹ ಹಜ್ಜ್ ಕರ್ಮದ ಉದ್ದೇಶ ಲಕ್ಷ್ಯಗಳಲ್ಲಿ ಒಂದಾಗಿದೆ. ಇದರ ಬಗ್ಗೆ ಅಲ್ಲಾಹನು ಹೇಳುತ್ತಾನೆ: "ಕಹಳೆಯಲ್ಲಿ ಊದಲ್ಪಡುವಾಗ ನಾವು ಎಲ್ಲ ಜನರನ್ನು ಜಮಾಯಿಸುವೆವು." ಹಾಗೆ ಅಂತ್ಯ ಕಾಲದಲ್ಲಿ ಅಲ್ಲಾಹನು ತನ್ನ ಶಬ್ದದ ಮೂಲಕ ಸಾತ್ವಿಕರಾದ ಜನರನ್ನು ಒಂದುಗೂಡಿಸುವನು. ಆರಂಭದಲ್ಲಿ ಒಂದೇ ಧರ್ಮದ ಅಧೀನದಲ್ಲಿ ಎಲ್ಲರೂ ಒಟ್ಟು ಸೇರಿದಂತೆ ಆದಿ ಮತ್ತು ಅಂತ್ಯ ಪರಸ್ಪರ ಸಂಬಂಧ ಹೊಂದುವುದು. (ಚಶ್ಮಯೆ ಮಅ್‌ರಿಫತ್ - ಪುಟ 145, 146)

**ಹಜ್ರತ್ ಮಿರ್ಜಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

* ಹುತಾತ್ಮನ ಸಾಲ ಹೊರತು ಅವನ ಎಲ್ಲ ಪಾಪಗಳು ಕ್ಷಮಿಸಲ್ಪಡುವುವು. (ಬುಖಾರಿ)

* ಪುನರುತ್ಥಾನ ದಿನದಂದು ಮೂವರೊಂದಿಗೆ ಅಲ್ಲಾಹು ಮಾತನಾಡಲಾರನು; ಅವರನ್ನು ನೋಡಲಾರನು; ಅವರನ್ನು ಸಂಸ್ಕರಿಸಲಾರನು. ಅವರಿಗೆ ಯಾತನಾಮಯವಾದ ಶಿಕ್ಷೆಯಿದೆ. ಅವರು ನಷ್ಟ ಹೊಂದಿದವರೂ ಪರಾಜಿತರೂ ಆಗಿದ್ದಾರೆ. ಅವರು ಯಾರೆಂದರೆ, ಉಡುಪನ್ನು ತಗ್ಗಿಸಿ ಉಟ್ಟು ನೆಲದಲ್ಲಿ ಎಳೆದುಕೊಂಡು ಹೋಗುವವನು; ದಾನ ಧರ್ಮ ಮಾಡಿದ್ದನ್ನು ಹೇಳುವವನು ಮತ್ತು ಸುಳ್ಳು ಆಣೆ ಹಾಕಿ ವಸ್ತುಗಳನ್ನು ಮಾರುವವನು. (ಮುಸ್ಲಿಂ)

* ಯಾರಾದರೂ ತನ್ನ ಧನವನ್ನು ಸಂರಕ್ಷಿಸುವ ಮಾರ್ಗದಲ್ಲಿ ವಧಿಸಲ್ಪಟ್ಟರೆ ಅವನು ಹುತಾತ್ಮನಾಗುತ್ತಾನೆ. (ಮುಸ್ಲಿಂ)

* ಒಬ್ಬ ಸತ್ಯವಿಶ್ವಾಸಿಯನ್ನು ಒಂದು ಬಿಲದಿಂದ ಎರಡು ಸಲ ಹಾವು ಕಚ್ಚದು. (ಬುಖಾರಿ, ಮುಸ್ಲಿಂ)

* ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನಾಣೆ - ನಾನು ಅರಿತಿರುವುದನ್ನು ನೀವು ಅರಿತಿದ್ದರೆ ನೀವು ಅಳುವನ್ನು ಹೆಚ್ಚಿಸಿ ನಗುವನ್ನು ಕಮ್ಮಿ ಮಾಡುತ್ತಿದ್ದಿರಿ. (ಬುಖಾರಿ)

* ನೀವು ಜನರಿಗೆ ಉಪಕಾರ ಮಾಡಿರಿ; ಉಪದ್ರ ಮಾಡಬೇಡಿರಿ. ಸಂತೋಷ ವಾರ್ತೆಯನ್ನು ತಿಳಿಸಿರಿ; ಕೋಪಗೊಳಿಸದಿರಿ. (ಬುಖಾರಿ)

* ಒಬ್ಬ ಮುಸ್ಲಿಂ ಏನಾದರೂ ನೆಟ್ಟು ಬೆಳೆಸಿದರೆ ಅಥವಾ ಕೃಷಿ ಮಾಡಿದರೆ, ಅದರಿಂದ ಪಕ್ಷಿಯಾಗಲಿ ಮನುಷ್ಯನಾಗಲಿ ಮೃಗವಾಗಲಿ ಏನಾದರೂ ತಿಂದರೆ ಖಂಡಿತವಾಗಿಯೂ ಅದು ಅವನ ದಾನವಾಗುತ್ತದೆ. (ಬುಖಾರಿ)

* ಯಾರಾದರೂ ತಪ್ಪು ಮಾಡುವುದನ್ನು ನೀವು ಕಂಡರೆ ಶಕ್ತಿ ಪ್ರಯೋಗಿಸಿ ಅದನ್ನು ತಡೆಯಬೇಕು. ಅದು ಸಾಧ್ಯವಾಗದಿದ್ದರೆ ಉಪದೇಶಿಸಿ ತಡೆಯಬೇಕು. ಅದು ಕೂಡ ಸಾಧ್ಯವಾಗದಿದ್ದರೆ ಹೃದಯದಲ್ಲಾದರೂ ಅದನ್ನು ದ್ವೇಷಿಸಬೇಕು. ಇದು ಬಹಳ ದುರ್ಬಲವಾದ ವಿಶ್ವಾಸವಾಗಿದೆ. (ಮುಸ್ಲಿಂ)

* ನಿನ್ನ ಸಹೋದರ ಅಕ್ರಮಕ್ಕೆ ಗುರಿಯಾದರೆ ಮತ್ತು ಅವನು ಅಕ್ರಮ ಮಾಡುವಾಗ ನೀನು ಅವನಿಗೆ ಸಹಾಯ ಮಾಡಬೇಕು. (ಆಗ ಒಬ್ಬನು ಕೇಳಿದನು: ಪ್ರವಾದಿಯವರೇ, ಅವನು ಅಕ್ರಮಕ್ಕೆ ಗುರಿಯಾದರೆ ನಾನು ಅವನಿಗೆ ಸಹಾಯ ಮಾಡಬಹುದು. ಆದರೆ ಅವನು ಅಕ್ರಮ ಮಾಡುವಾಗ ನಾನು ಹೇಗೆ ಅವನಿಗೆ ಸಹಾಯ ಮಾಡುವುದು?) ಪ್ರವಾದಿ(ಸ) ಹೇಳಿದರು: ನೀನು ಅವನನ್ನು ಅಕ್ರಮ ಮಾಡುವುದರಿಂದ ತಡೆಯಬೇಕು. ನೀನು ಅವನಿಗೆ ಮಾಡುವ ಸಹಾಯ ಅದೇ ಆಗಿದೆ. (ಬುಖಾರಿ, ಮುಸ್ಲಿಂ)

* ಒಬ್ಬ ಮನುಷ್ಯನು ತನ್ನ ಸಹೋದರನನ್ನು ಕಾಣುವಾಗ (ಸಲಾಂ ಹೇಳದೆ) ಪರಸ್ಪರ ಮುಖ ತಿರುಗಿಸಿ ನಡೆದುಕೊಂಡು ಮೂರು ದಿವಸಗಳಿಗಿಂತ ಹೆಚ್ಚು ಕಾಲ ಇರಬಾರದು. ಆ ಸಂದರ್ಭದಲ್ಲಿ ಮೊದಲು ಸಲಾಂ ಹೇಳುವವನು ಅವರ ಪೈಕಿ ಉತ್ತಮನು. (ಬುಖಾರಿ, ಮುಸ್ಲಿಂ)

# ಎಂ.ಟಿ.ಎ. 3 ಅಲ್‌ಅರಬಿಯ್ಯ ಚಾನೆಲ್

**ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು 23-03-2007ರಂದು ಮಾಡಿದ ಜುಮುಅಃ ಖುತ್‌ಬದ ಕನ್ನಡಾನುವಾದ.**

ಇಂದು ಮಾರ್ಚ್ ದಿನಾಂಕ 23. ನಮಗೆ ತಿಳಿದಂತೆ, ಇಂದಿನ ದಿನಕ್ಕೆ ಅಹ್ಮದಿಯಾ ಚರಿತ್ರೆಯಲ್ಲಿ ದೊಡ್ಡ ಮಹತ್ವವಿದೆ. ಕಾರಣವೇನೆಂದರೆ, ಇಂದಿಗೆ 118 ವರ್ಷ ಮುಂಚೆ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಂ) ಅಲ್ಲಾಹನ ಆಜ್ಞಾನುಸಾರ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಸ್ವೀಕರಿಸಲು ತೊಡಗಿದರು. ಹಾಗೆ ಅಹ್ಮದಿಯಾ ಜಮಾಅತ್ ಸ್ಥಾಪಿಸಲ್ಪಟ್ಟಿತು. ಇಸ್ಲಾಮಿನ ಎರಡನೆಯ ಪ್ರಾದುರ್ಭಾವಕ್ಕೆ ಅಸ್ತಿಭಾರ ಹಾಕಿದ್ದು ಈ ದಿನವಾಗಿದೆ.

ಆದ್ದರಿಂದ ಇಸ್ಲಾಮಿನ ಅಂದಿನ ಸ್ಥಿತಿಯ ಕುರಿತು, ಅದರ ಹಿನ್ನೆಲೆಯ ಬಗ್ಗೆ ಸ್ವಲ್ಪ ವಿವರಿಸುತ್ತೇನೆ. ಆ ಕಾಲದ ಮುಸ್ಲಿಮರ ಅವಸ್ಥೆ ಕಂಡು, ಇಸ್ಲಾಮಿಗೋಸ್ಕರ ನೊಂದಿದ್ದ ಮುಸ್ಲಿಮರು ಅಸ್ವಸ್ಥರಾಗಿದ್ದರು. ಏಷ್ಯಾ ಭೂಖಂಡದಲ್ಲಿ ಆರ್ಯ ಸಮಾಜದವರೂ ಪಾದ್ರಿಗಳೂ ಇಸ್ಲಾಮಿನ ಮೇಲೆ ಶಕ್ತಿಯುತವಾದ ಆಕ್ರಮಣ ಮಾಡುತ್ತಿದ್ದ ಕಾಲವಾಗಿತ್ತು ಅದು. ಉಲಮಾಗಳಿಗಾದರೋ, ಅದನ್ನು ಕಂಡು ನೋಡಿ ನಿಲ್ಲಲಿಕ್ಕೆ ಮಾತ್ರ ಸಾಧ್ಯವಾಗಿತ್ತು. ಅವರ ಆರೋಪಣೆಗಳಿಗೆ ಉತ್ತರ ಹೇಳಲು ಅವರ ಬಳಿ ಏನೂ ಇರಲಿಲ್ಲ. ಉತ್ತರ ನೀಡಲು ಸಾಧ್ಯವಾಗದ ಕಾರಣದಿಂದ ಅನೇಕ ಮಂದಿ ಇಸ್ಲಾಮನ್ನು ತ್ಯಜಿಸಿ ಕ್ರೈಸ್ತರ ಬಲೆಗೆ ಬಿದ್ದರು. ಹಲವು ಜನರು ಇಸ್ಲಾಮಿನ ಸಂಬಂಧವನ್ನು ಮುರಿದರು. ಆ ಸಂದರ್ಭದಲ್ಲಿ ಕ್ರೈಸ್ತರನ್ನೂ ಇತರ ಮತಸ್ಥರನ್ನೂ ಎದುರಿಸಲಿಕ್ಕಾಗಿ ಯಾರಾದರೂ ಎದ್ದು ನಿಂತಿದ್ದರೆ, ಅದು ಅಲ್ಲಾಹನ ಈ ಪಹಿಲ್ವಾನರಾಗಿದ್ದರು. ಅಂದರೆ, ಹಝ್ರತ್ ಮಿರ್ಝಾ ಗುಲಾಂ ಅಹ್ಮದ್.[ಅ] ಆ ಕಾಲದಲ್ಲಿ ಇಸ್ಲಾಂ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ರವರ ಮೇಲೆ ಬರಹ ಮತ್ತು ಭಾಷಣ ಮೂಲಕ ಶಕ್ತಿಯುತವಾದ ಆಕ್ರಮಣ ಮಾಡಿದ್ದ ಆರ್ಯ ಸಮಾಜದವರಿಗೂ ಬ್ರಹ್ಮ ಸಮಾಜದವರಿಗೂ ಕ್ರೈಸ್ತರಿಗೂ ಅವರು "ಬರಾಹೀನೆ ಅಹ್ಮದಿಯಾ" ಎಂಬ ತನ್ನ ಜ್ಞಾನಭರಿತ ಗ್ರಂಥ ಮೂಲಕ ಅವರನ್ನು ನಿರುತ್ತರರನ್ನಾಗಿ ಮಾಡುವಂತೆ ಉತ್ತರ ನೀಡಿದರು. ಆ ಗ್ರಂಥದ ಒಂದನೇ ಮತ್ತು ಎರಡನೇ ಭಾಗ 1880ರಲ್ಲೂ ಮೂರನೇ ಭಾಗ 1882ರಲ್ಲೂ ನಾಲ್ಕನೇ ಭಾಗ 1884ರಲ್ಲೂ ಪ್ರಕಟಿಸಲ್ಪಟ್ಟವು. ಈ ಗ್ರಂಥದಲ್ಲಿ ಅವರು ಪವಿತ್ರ ಖುರ್‌ಆನ್ ದೈವಿಕ ಗ್ರಂಥವೆಂದೂ ಅದು ಅತುಲ್ಯವೆಂದೂ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಸತ್ಯವಾದಿಯೆಂದೂ ಖಂಡಿಸಲಸಾಧ್ಯವಾದ ಪುರಾವೆಗಳನ್ನು ನೀಡಿದ್ದರು. ತಾನು ನೀಡಿದ ಈ ಸಾಕ್ಷ್ಯಗಳ 1/3 ಅಂಶವಾಗಲಿ, 1/4 ಅಂಶವಾಗಲಿ, 1/5 ಅಂಶವಾಗಲಿ ಯಾರಾದರೂ ಖಂಡಿಸುವುದಾದರೆ, 10000/- ರೂಪಾಯಿಗಳನ್ನು ಬಹುಮಾನ ನೀಡಲಾಗುವುದೆಂದು ಅವರು ಘೋಷಿಸಿದರು. ಆ ಕಾಲದಲ್ಲಿ ಅದು ಒಂದು ದೊಡ್ಡ ಮೊತ್ತವಾಗಿತ್ತು.

ಈ ಗ್ರಂಥ ಮುಸ್ಲಿಮರಲ್ಲಿ ಆವೇಶವನ್ನುಂಟುಮಾಡಿತು. ಅದು ಆರೋಪಿಸುವವರ ಗೂಢ ತಂತ್ರಗಳನ್ನು ವಿಫಲಗೊಳಿಸಿತು. ಇಸ್ಲಾಮಿಗೋಸ್ಕರ ಹಝ್ರತ್ ಅಹ್ಮದ್‌ರವರ[ಅ] ಆವೇಶ ಕಂಡು, ಅವರ ಸಂಬಂಧವಿರಿಸಿಕೊಂಡಿದ್ದ ಕೆಲವು ಸಾತ್ವಿಕರು ತಮ್ಮ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಸ್ವೀಕರಿಸಲು ಆ ಮಹಾತ್ಮರೊಡನೆ ಅಪೇಕ್ಷಿಸಿದರು. ಆದರೆ ಬೈಅತ್ ಸ್ವೀಕರಿಸಲಿಕ್ಕೆ ಅಲ್ಲಾಹನಿಂದ ಆದೇಶ ಸಿಗುವವರೆಗೆ ಅವರು ಅವರ ಬೇಡಿಕೆಯನ್ನು ನಿರಾಕರಿಸಿದರು. ಆಜ್ಞೆ ಲಭಿಸಿದಾಗ ಹಝ್ರತ್ ಮಸೀಹ್ ಮೌಊದ್[ಅ] 1888 ಡಿಸೆಂಬರ್ 1ರಂದು, 'ತಬ್ಲೀಗ್' ಎಂಬ ಹೆಸರಿನಲ್ಲಿ ಒಂದು ವಿಜ್ಞಾಪನೆಯನ್ನು ಪ್ರಕಟಿಸಿದರು. ಅದರಲ್ಲಿ ಅವರು ಹೀಗೆ ಹೇಳಿದರು: "ನಾನು ಇಲ್ಲಿ ಮನುಷ್ಯ ವಂಶಕ್ಕೆ ಸಾಮಾನ್ಯವಾಗಿಯೂ ಮುಸ್ಲಿಮರಿಗೆ ವಿಶಿಷ್ಟವಾಗಿಯೂ ಇನ್ನೊಂದು ಸಂದೇಶವನ್ನು ಸಹ ತಲುಪಿಸುತ್ತೇನೆ. ನನಗೆ ಆಜ್ಞೆ ನೀಡಲಾಗಿದೆ. ಏನೆಂದರೆ, ಸತ್ಯಾನ್ವೇಷಿಗಳಾದ ಜನರು, ಸತ್ಯವಾದ ವಿಶ್ವಾಸ, ವಿಶ್ವಾಸಪರವಾದ ಯಥಾರ್ಥ ಪರಿಶುದ್ಧಿ ಮತ್ತು ದೇವಪ್ರೀತಿಯ ಮಾರ್ಗವನ್ನು ಕಲಿಯಲಿಕ್ಕೂ ಮಲಿನ ಜೀವಿತ, ಆಲಸ್ಯ ಮತ್ತು ವಂಚನೆಗಳನ್ನು ವರ್ಜಿಸಲಿಕ್ಕೂ ಬೇಕಾಗಿ ನನಗೆ ಬೈಅತ್ ಮಾಡಬೇಕಾಗಿದೆ. ಇದಕ್ಕೆ ಸಿದ್ಧರಿರುವವರು ನನ್ನ ಸಮೀಪಕ್ಕೆ ಬರಬೇಕಾದುದು ಕಡ್ಡಾಯವಾಗಿದೆ. ನಾನು ಅವರೊಡನೆ ಅನುಕಂಪವುಳ್ಳವನಾಗಿದ್ದೇನೆ. ಅವರ ಭಾರವನ್ನು ಹಗುರಗೊಳಿಸಲು ನಾನು ಪ್ರಯತ್ನಿಸುವೆನು. ಅವರು ದೇವಾಜ್ಞೆಗಳನ್ನು ಪೂರ್ಣವಾಗಿ ಅನುಸರಿಸಲು ಸಿದ್ಧರೆಂದಾದರೆ ನನ್ನ ಪ್ರಾರ್ಥನೆ ಮತ್ತು ನನ್ನ ಗಮನ ಮೂಲಕ ಅವರು ಅನುಗ್ರಹೀತರಾಗುವರು. ಇದು ಅಲ್ಲಾಹನ ಆಜ್ಞೆಯಾಗಿದೆ. ಅದನ್ನು ನಾನು ಇಂದು ತಲುಪಿಸಿದ್ದೇನೆ. ಈ ಬಗ್ಗೆ ಅರಬಿ ಭಾಷೆಯಲ್ಲಿ ನನಗೆ ಲಭಿಸಿದ ದೇವ ಸಂದೇಶ ಹೀಗಿದೆ:

اِذَا عَزَمْتَ فَتَوَكَّلْ عَلَى اللّٰهِ ـ وَاصْنَعِ الْفُلْكَ

بِاَعْيُنِنَا وَوَحْيِنَا ـ اَلَّذِيْنَ يُبَايِعُوْنَكَ اِنَّمَا يُبَايِعُوْنَ اللّٰهَ ـ يَدُ اللّٰهِ فَوْقَ اَيْدِيْهِمْ"

"ನೀನು ಈ ಸೇವೆಗಾಗಿ ಮನೋನಿರ್ಧಾರ ಮಾಡಿದರೆ ಅಲ್ಲಾಹನ ಮೇಲೆ ಭರವಸೆಯನ್ನಿಡು. ನಮ್ಮ ಮೇಲ್ನೋಟದಲ್ಲೂ ನಮ್ಮ ಆಜ್ಞಾನುಸಾರವಾಗಿಯೂ ಈ ನೌಕೆಯನ್ನು ನಿರ್ಮಿಸು. ನಿನ್ನೊಡನೆ ಬೈಅತ್ ಮಾಡುವವರು ನಿನ್ನೊಡನೆಯಲ್ಲ; ಬದಲು, ಅಲ್ಲಾಹನೊಡನೆ ಬೈಅತ್ ಮಾಡುತ್ತಾರೆ. ಅವರ ಕೈಗಳ ಮೇಲೆ ಅಲ್ಲಾಹನ ಕೈಯಿರುವುದು."

ಅನಂತರ ಅವರು 1889 ಜನವರಿ 12ರಂದು 'ತಕ್‌ಮೀಲೆ ತಬ್ಲೀಗ್' ಎಂಬ ಶೀರ್ಷಿಕೆಯಲ್ಲಿ ಒಂದು ವಿಜ್ಞಾಪನೆಯನ್ನು ಪ್ರಕಟಿಸಿದರು.. 1888 ಡಿಸೆಂಬರ್ 1ರಂದು ಪ್ರಕಟಿಸಿದ ಕರಪತ್ರ ಉದ್ಧರಿಸಿ ಬೈಅತಿನ 10 ನಿಬಂಧನೆಗಳನ್ನು ಬರೆದರು. ಬೈಅತಿನ ಆ ನಿಬಂಧನೆಗಳು ನಮಗೆಲ್ಲ ತಿಳಿದಿವೆ. ಆದರೆ ನೆನಪಿಸಲಿಕ್ಕೂ ಅಹ್ಮದಿಯರು ಇದರ ಪ್ರಯೋಜನ ಪಡೆಯಲಿಕ್ಕೂ ಎಂ.ಟಿ.ಎ. ಪ್ರೋಗ್ರಾಮ್ ವ್ಯಾಪಕವಾದ ರೀತಿಯಲ್ಲಿ ಅಹ್ಮದಿಯೇತರರೂ ನೋಡುವುದರಿಂದ ಅವರು ಸಹ ಈ ನಿಬಂಧನೆಗಳು ಯಾವ್ಯಾವೆಂದು ತಿಳಿಯಲಿಕ್ಕೂ ನಾನು ಅದನ್ನು ಓದಿ ಹೇಳುತ್ತೇನೆ:

1. ಜೀವಾಂತ್ಯದ ವರೆಗೆ ಶಿರ್ಕ್ (ಬಹುದೇವಾರಾಧನೆ)ನಿಂದ ದೂರವಿರಬೇಕು.

2. ಸುಳ್ಳು, ವ್ಯಭಿಚಾರ, ದುರ್ನೋಟ, ಎಲ್ಲ ವಿಧ ದುಷ್ಕೃತ್ಯಗಳು, ಮೋಸ, ಪರಪೀಡನೆ ವಿಶ್ವಾಸಘಾತ, ಶಾಂತಿಭಂಗ, ದೇಶದ್ರೋಹ ಮುಂತಾದ ದುರ್ಮಾರ್ಗಗಳಿಂದ ದೂರವಿರಬೇಕು ಹಾಗೂ ಶರೀರೇಚ್ಛೆಯ ದಾಸ್ಯಕ್ಕೆ ಎಂದಿಗೂ ಒಳಗಾಗಬಾರದು.

3. ಅಲ್ಲಾಹನ ಮತ್ತು ಪ್ರವಾದಿಯ(ಸ) ಆಜ್ಞಾನುಸಾರ ಐದು ಹೊತ್ತು ನಮಾಝುನ್ನು ತಪ್ಪದೆ ನಿರ್ವಹಿಸಬೇಕು ಹಾಗೂ ಸಾಧ್ಯವಾಗುವಷ್ಟರ ಮಟ್ಟಿಗೆ ತಹಜ್ಜುದ್ ನಮಾಝ್ ಅನುಷ್ಠಿಸಬೇಕು. ದಿನಾಲೂ ಪ್ರವಾದಿಯವರ(ಸ) ಮೇಲೆ ಸಲಾತ್ ಮತ್ತು ಸಲಾಂ ಹೇಳಬೇಕು ಹಾಗೂ ತನ್ನ ತಪ್ಪಿಗಾಗಿ ಅಲ್ಲಾಹನೊಡನೆ ಕ್ಷಮೆಯಾಚಿಸಬೇಕು(ಇಸ್ತಿಗ್‌ಫಾರ್). ದೇವಾನುಗ್ರಹಗಳ ಕುರಿತು ಸದಾ ಹೃತ್ಪೂರ್ವಕವಾಗಿ ಸ್ಮರಿಸಬೇಕಲ್ಲದೆ ದೇವಸ್ಮರಣೆ (ದಿಕ್ರೆ ಇಲಾಹಿ) ಮತ್ತು ದೇವ ಸ್ತೋತ್ರ (ಹಮ್ದ್) ನಿತ್ಯವೂ ಮಾಡುತ್ತಲಿರಬೇಕು.

4. ಭಾವೋದ್ರೇಕಕ್ಕೆ ಒಳಗಾಗಿ ದೇವಸೃಷ್ಟಿಗಳಲ್ಲಿ ಯಾರಿಗೂ - ವಿಶೇಷವಾಗಿ ಮುಸ್ಲಿಮರಿಗೆ - ನಾಲಗೆಯಿಂದಾಗಲಿ, ಕೈಯಿಂದಾಗಲಿ, ಬೇರಾವುದೇ ರೀತಿಯಲ್ಲಾಗಲಿ ಅನ್ಯಾಯವಾಗಿ ಯಾವುದೇ ಕ್ಲೇಶವನ್ನುಂಟುಮಾಡಬಾರದು.

5. ಸಂತಾಪ ಮತ್ತು ಸಂತೋಷ ವೇಳೆಗಳಲ್ಲಿ ಸುಖ-ದುಃಖಗಳಲ್ಲಿ, ಅನುಗ್ರಹ ಲಬ್ಧಿಯ ಸಂದರ್ಭಗಳಲ್ಲಿ ಮತ್ತು ಆಪತ್ಕಾಲದಲ್ಲಿ - ಎಲ್ಲ ಅವಸ್ಥೆಗಳಲ್ಲೂ ಅಲ್ಲಾಹನೊಡನೆ ನಿಷ್ಠೆಯಿಂದ ಇದ್ದುಕೊಂಡು ದೇವೇಚ್ಛೆಗೆ ಶಿರಬಾಗಿ ಸಮಾಧಾನಪಟ್ಟುಕೊಳ್ಳಬೇಕು. ದೇವಮಾರ್ಗದಲ್ಲಿ ಎಲ್ಲ ವಿಧ ಮಾನಹಾನಿ ಮತ್ತು ಕ್ಲೇಶಗಳನ್ನು ಸಹಿಸಲಿಕ್ಕೆ ಸಿದ್ಧನಿರಬೇಕು. ವಿಪತ್ತು ಎದುರಾಗುವಾಗ ಮುಖ ತಿರುಗಿಸದೆ ಮುಂದಕ್ಕೆ ಹೆಜ್ಜೆ ಇಡಬೇಕು.

6. ಎಲ್ಲ ವಿಧ ದುರಾಚಾರಗಳಿಂದಲೂ ದುರಾಗ್ರಹಗಳಿಂದಲೂ ಸ್ವಯಂ ದೂರವಿದ್ದು ಪವಿತ್ರ ಖುರ್‌ಆನಿನ ಎಲ್ಲ ಆಜ್ಞೆಗಳಿಗೆ ಪೂರ್ಣ ರೀತಿಯಲ್ಲಿ ವಿಧೇಯನಾಗಿರಬೇಕಲ್ಲದೆ, ಎಲ್ಲ ಚಲನವಲನಗಳು ದೇವವಚನಗಳಿಗೂ ಪೈಗಂಬರರ(ಸ) ನುಡಿಗಳಿಗೂ ಅನುಸಾರವಾಗಿರಬೇಕು.

7. ಅಹಂಭಾವ, ದುರಭಿಮಾನ ಇತ್ಯಾದಿಗಳನ್ನು ಪೂರ್ಣವಾಗಿ ತ್ಯಜಿಸಿ ವಿನಯ, ಸರಳ, ಪ್ರಸನ್ನ, ಶಾಂತ, ನಿರಾಡಂಬರ ಜೀವನವನ್ನು ನಡೆಸಬೇಕು.

8. ಧರ್ಮವನ್ನೂ ಧರ್ಮದ ಪ್ರತಿಷ್ಠೆಯನ್ನೂ ಇಸ್ಲಾಮಿನ ಹಿತವನ್ನೂ ಸ್ವಂತ ಜೀವಕ್ಕಿಂತಲೂ ಸಂಪತ್ತಿಗಿಂತಲೂ ಮಾನಕ್ಕಿಂತಲೂ ಸಂತಾನಕ್ಕಿಂತಲೂ ಪ್ರಿಯವಾದ ಎಲ್ಲಕ್ಕಿಂತಲೂ ಹೆಚ್ಚು ಪ್ರೀತಿಯುಳ್ಳದ್ದಾಗಿ ಗಣಿಸಬೇಕು.

9. ಅಲ್ಲಾಹನ ಎಲ್ಲ ಸೃಷ್ಟಿಗಳೊಡನೆ ಪ್ರಾಮಾಣಿಕವಾದ ಸಹಾನುಭೂತಿಯನ್ನು ತೋರಿಸಬೇಕಲ್ಲದೆ ಅಲ್ಲಾಹನು ನೀಡಿದ ಶಕ್ತಿ ಸಾಮರ್ಥ್ಯ ಮತ್ತು ಅನುಗ್ರಹಗಳ ಮೂಲಕ ಮನುಷ್ಯ ಕುಲಕ್ಕೆ ಉಪಕಾರಗಳನ್ನು ಮಾಡುತ್ತಲಿರಬೇಕು.

10. ಒಳ್ಳೆಯ ಕಾರ್ಯಗಳಲ್ಲಿ (ಮಅ್‌ರೂಫ್) ಅನುಸರಣೆ ಮಾಡುವುದಾಗಿ ಒಪ್ಪುವುದರೊಂದಿಗೆ ಕುಟುಂಬ ಸಂಬಂಧಗಳಲ್ಲಾಗಲಿ, ಭೌತಿಕವಾದ ಇತರ ಸಂಬಂಧಗಳಲ್ಲಾಗಲಿ, ಸೇವಕ ಭಾವಗಳಲ್ಲಾಗಲಿ ಕಾಣಿಸಲ್ಪಡದ ಒಂದು ರೀತಿಯ ಸುದೃಢ, ಸಾಹೋದರ್ಯ ಸಂಬಂಧವನ್ನು ದೇವಮಾರ್ಗದಲ್ಲಿ ಈ ವಿನೀತನೊಂದಿಗೆ (ಹಝ್ರತ್ ಅಹ್ಮದ್‌ರೊಂದಿಗೆ) ಸ್ಥಾಪಿಸಬೇಕಲ್ಲದೆ ಅದನ್ನು ಮರಣದವರೆಗೆ ನೆಲೆನಿಲ್ಲಿಸಬೇಕಾಗಿದೆ. ಇನ್‌ಶಾಅ್ ಅಲ್ಲಾಹ್. ("ಇಶ್ತಿಹಾರ್ ತಕ್ಮೀಲೆ ತಬ್ಲೀಗ್", ಜನವರಿ 12, 1889)

ಇಂದು ಅಹ್ಮದಿಯಾ ಜಮಾಅತಿಗೆ ಖಿಲಾಫತಿನೊಂದಿಗೆ ಸಂಬಂಧ ನೆಲೆನಿಂತಿರುವುದು ಸಹ ಈ ಬೈಅತಿನ ಆಧಾರದಲ್ಲಾಗಿದೆ. ಈ ಏಣಿಯ ಮೆಟ್ಟಿಲುಗಳ ಮೇಲೆ ಕಾಲುಗಳನ್ನಿಟ್ಟು ಮುಂದಕ್ಕೆ ಏರುವಾಗ, ಪ್ರವಾದಿಯವರೊಂದಿಗೆ(ಸ) ಮತ್ತು ಅಲ್ಲಾಹನೊಂದಿಗೆ ಸಂಬಂಧವೇರ್ಪಡುತ್ತದೆ. ಈ ಕಾಲದ ಇಮಾಮನ್ನು ನಿರಾಕರಿಸಿ ಹಲವಿಧ ವಿಷಮತೆಯಲ್ಲಿ ಮುಳುಗಿರುವ ಇಂದಿನ ಮುಸ್ಲಿಮರು ಆ ವಿಷಮತೆಯಿಂದ ವಿಮುಕ್ತರಾಗಲು ಈ ವಿಚಾರವನ್ನು ಮನಗಂಡಿದ್ದರೆ ಎಷ್ಟು ಚೆನ್ನಾಗಿತ್ತು!

ಹಝ್ರತ್ ಮಸೀಹ್ ಮೌಊದರ(ಅ) ದೌತ್ಯದ ಉದ್ದೇಶ, ನಾನು ಆರಂಭದಲ್ಲಿ ಹೇಳಿದ ಪ್ರಕಾರ, ಪ್ರವಾದಿಯವರ(ಸ) ಅಧ್ಯಾಪನವನ್ನು ಲೋಕದಲ್ಲಿ ಸ್ಥಾಪಿಸುವುದು ಮತ್ತು ಪವಿತ್ರ ಖುರ್‌ಆನಿನ ಸತ್ಯತೆಯನ್ನು ರುಜುಗೊಳಿಸುವುದಾಗಿದೆ. ಈ ಉದ್ದೇಶಾರ್ಥ ಅವರು ಒಂಬು ಪವಿತ್ರ ಜಮಾಅತನ್ನು ಅಲ್ಲಾಹನ ಆಜ್ಞಾನುಸಾರ ಸ್ಥಾಪಿಸಿದರು. ಅವರು ಜನರಿಂದ ಬೈಅತ್ ಸ್ವೀಕರಿಸಿದರು. ಪೈಗಂಬರರ(ಸ) ಮೇಲೆ ಅವರಿಗಿದ್ದ ಪ್ರೀತಿ ಪರಾಕಾಷ್ಠೆಯನ್ನು ತಲುಪಿತ್ತು. ಪೈಗಂಬರರ(ಸ) ಯಥಾರ್ಥವಾದ ಸ್ಥಾನವನ್ನು ಅವರು ಗುರುತಿಸಿದ್ದರು. ಹಾಗಲ್ಲ, ಯಾರಿಗಾದರೂ ಪೈಗಂಬರರ(ಸ) ಬಗ್ಗೆ ತಿಳುವಳಿಕೆ ಇದ್ದಿದ್ದರೆ, ಅದು ಹಝ್ರತ್ ಮಸೀಹ್ ಮೌಊದ್‌ರವರಿಗೆ(ಅ) ಮಾತ್ರವಾಗಿತ್ತೆಂದು ಹೇಳಬೇಕಾಗಿದೆ. ಅವರು ಒಮ್ಮೆ ಹಝ್ರತ್ ಪೈಗಂಬರರ(ಸ) ಸ್ಥಾನವನ್ನು ವಿವರಿಸುತ್ತಾ ಹೀಗೆ ಹೇಳಿದರು:

"ನಾನು ಯಾವಾಗಲೂ ಅದ್ಭುತ ದೃಷ್ಟಿಯಿಂದ ನೋಡುತ್ತಿದ್ದೇನೆ. ಮುಹಮ್ಮದ್ ಎಂಬ ಹೆಸರಿನ ಈ ಅರಬಿ ಪ್ರವಾದಿ (ಸಾವಿರ ಸಾವಿರ ಸಲಾತ್ ಮತ್ತು ಸಲಾಂ ಅವರ ಮೇಲೆ ವರ್ಷಿಸಲಿ) ಎಷ್ಟು ಉತ್ಕೃಷ್ಟ ಪದವಿ ಗಳಿಸಿದ ಪ್ರವಾದಿಯಾಗಿದ್ದಾರೆ! ಅವರ ಉನ್ನತಿಯ ಸೀಮೆ ಕಂಡು ಹಿಡಿಯಲು ಅಸಾಧ್ಯವೇ ಸರಿ. ಅವರ ದಿವ್ಯಶಕ್ತಿಯ ಪ್ರಭಾವವನ್ನು ಅಂದಾಜುಮಾಡುವುದು ಮನುಷ್ಯ ಶಕ್ತಿಗೆ ಸಾಧ್ಯವಿಲ್ಲ. ಅಹೋ ಕಷ್ಟ! ಅವರ ಯಥಾರ್ಥ ಪದವಿ ಅದಕ್ಕರ್ಹವಾದ ರೀತಿಯಲ್ಲಿ ಅಂಗೀಕರಿಸಲ್ಪಡಲಿಲ್ಲ. ಲೋಕದಿಂದ ಕಣ್ಮರೆಯಾಗಿದ್ದ ಆ 'ತೌಹೀದ್' ಅಥವಾ ಏಕದೇವ ವಿಶ್ವಾಸವನ್ನು ಪುನಃ ಈ ಲೋಕಕ್ಕೆ ಮರಳಿ ತಂದ ವೀರಾತ್ಮ ಅವರಾಗಿದ್ದಾರೆ. ಅವರು ಅಲ್ಲಾಹನೊಡನೆ ಅತ್ಯಂತ ಪ್ರೀತಿ ತೋರಿಸಿದರು. ಮನುಷ್ಯ ಕುಲದೊಡನಿರುವ ಸಹಾನುಭೂತಿಯಲ್ಲಿ ಅವರು ಆತ್ಮಾರ್ಪಣೆ ಮಾಡಿದರು. ಆದ್ದರಿಂದ ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠತೆಯನ್ನು ಅಲ್ಲಾಹನು ಅವರಿಗೆ ದಯಪಾಲಿಸಿದನು. ಅವರ ಇಚ್ಛೆಗಳು ಅವರ ಜೀವಮಾನದಲ್ಲಿ ಅವರಿಗೆ ಸಿದ್ಧಿಸುವಂತೆ ಮಾಡಿದನು. ಪ್ರತಿಯೊಂದು ಅನುಗ್ರಹದ ಉದ್ಭವ ಅವರಿಂದಲೇ ಆಗಿದೆ. ಆ ಮಹಾಪುರುಷರನ್ನು ಅಂಗೀಕರಿಸದೆ, ಆ ಮಹಾತ್ಮರಿಂದ ಪ್ರಯೋಜನ ಪಡೆಯದೆ ಅವರ ಯಾವುದಾದರೂ ಮೇಲ್ಮೆಯ ಬಗ್ಗೆ ವಾದಿಸುವವನು ಮನುಷ್ಯನಲ್ಲ. ಬದಲು, ಶೈತಾನನ ಸಂತಾನವಾಗಿದ್ದಾನೆ. ಕಾರಣವೇನೆಂದರೆ ಪ್ರತಿಯೊಂದು ಶ್ರೇಷ್ಠತೆಯ ಕೀಲಿಗೈ ಅವರಿಗೆ ನೀಡಲ್ಪಟ್ಟಿದೆ. (ಹಕೀಕತುಲ್ ವಹ್ಯ್ - ರೂಹಾನಿ ಖಝಾಇನ್, ಸಂಪುಟ 22 ಪುಟ 118-119)

"ಆ ಮನುಷ್ಯನು ತನ್ನ ವ್ಯಕ್ತಿತ್ವದಿಂದ, ತನ್ನ ಸ್ವಭಾವದಿಂದ, ತನ್ನ ಕರ್ಮದಿಂದ, ತನ್ನ ವರ್ತನೆಯಿಂದ, ತನ್ನ ಆಧ್ಯಾತ್ಮಿಕ ಮತ್ತು ಪರಿಶುದ್ಧ ಶಕ್ತಿಗಳ ಬಲಯುತವಾಗಿ ಹರಿಯುವ ನದಿಯಿಂದ ಸಂಪೂರ್ಣತೆಯ ಮಾದರಿಯನ್ನು ಬೋಧನೆ, ಕರ್ಮ, ಸತ್ಯ ಮತ್ತು ದೃಢತೆಯಿಂದ ಪ್ರತ್ಯಕ್ಷಪಡಿಸಿ ಪರಿಪೂರ್ಣ ಮನುಷ್ಯನೆಂದು ಕರೆಯಲ್ಪಟ್ಟರು.

"ಎಲ್ಲ ಮನುಷ್ಯರ ಪೈಕಿ ಪರಿಪೂರ್ಣನೂ ಪ್ರವಾದಿಗಳ ಪೈಕಿ ಸಂಪೂರ್ಣನೂ ಆಗಿದ್ದ ಅವರು ಸಕಲ ಅನುಗ್ರಹಗಳನ್ನು ಹೊಂದಿದ್ದರು. ಅದರಿಂದ ಉಂಟಾದ ಆಧ್ಯಾತ್ಮಿಕ ಕ್ರಾಂತಿಯಿಂದ ಒಂದನೆಯ ಖಿಯಾಮತ್ ಉಂಟಾಯಿತು. ಸತ್ತುಬಿದ್ದಿದ್ದ ಒಂದು ಲೋಕವೇ ಅವರ ಆಗಮನದಿಂದ ಪುನರ್ಜೀವ ಪಡೆಯಿತು. ಆ ಅನುಗ್ರಹೀತ ಪ್ರವಾದಿ, ಖಾತಮುಲ್ ಅಂಬಿಯಾಅ್, ಇಮಾಮುಲ್ ಅಸ್‌ಫಿಯಾಅ್, ಖಾತಮುಲ್ ಮುರ್ಸಲೀನ್, ಫಖ್ರುನ್ನಬಿಯ್ಯೀನ್ ಜನಾಬ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಆಗಿದ್ದಾರೆ. ನನ್ನ ಪ್ರಿಯ ಅಲ್ಲಾಹನೇ, ಈ ಪ್ರೀತಿಯ ಪ್ರವಾದಿಯ ಮೇಲೆ ಲೋಕಾರಂಭ ಮೊದಲ್ಗೊಂಡು ಯಾರಿಗೂ ನೀಡದ ರೀತಿಯಲ್ಲಿರುವ ಅನುಗ್ರಹಗಳನ್ನೂ ಕಾರುಣ್ಯವನ್ನೂ ನೀನು ವರ್ಷಿಸು." (ಇತ್ಮಾಮುಲ್ ಹುಜ್ಜತ್ - ರೂಹಾನಿ ಖಝಾಇನ್, ಸಂಪುಟ 8, ಪುಟ 308)

ಪವಿತ್ರ ಖುರ್‌ಆನ್ ಮತ್ತು ಪೈಗಂಬರರ[ಸ] ಮೇಲೆ ಯಥಾರ್ಥ ಪ್ರೀತಿ ತನ್ನ ಜಮಾಅತಿನವರಿಗೆ ಉಂಟಾಗಬೇಕೆಂದು ಹಝ್ರತ್ ಮಸೀಹ್ ಮೌಊದ್[ಅ] ಇಚ್ಛಿಸಿದ್ದರು. ಆದ್ದರಿಂದ ಬೈಅತಿನ ನಿಬಂಧನೆಯಲ್ಲಿ, ಪವಿತ್ರ ಖುರ್‌ನಿನ ಅಧ್ಯಾಪನೆಗಳನ್ನು ಜಾರಿಗೆ ತರಲಿಕ್ಕಾಗಿ ಮತ್ತು ಪೈಗಂಬರರ[ಸ] ಮೇಲೆ ಸಲಾತ್ ಹೇಳಲಿಕ್ಕಾಗಿ ವಿಶೇಷವಾದ ಒತ್ತು ನೀಡಲಾಗಿದೆ. ಒಂದೆಡೆ ಅವರು ಹೀಗೆ ಹೇಳಿದರು: "ನಿಮಗೆ ಅಗತ್ಯ ಬೇಕಾದ ಪಾಠವೇನೆಂದರೆ, ಪವಿತ್ರ ಖುರ್‌ಆನನ್ನು ಬೆನ್ನ ಹಿಂದೆ ಬಿಸಾಡಬಾರದೆಂದಾಗಿದೆ. ನಿಮ್ಮ ಜೀವಿತ ಇದರಲ್ಲೇ 'ಇದೆ. ಪವಿತ್ರ ಖುರ್‌ಆನನ್ನು ಗೌರವಿಸುವವರು ದೇವಸನ್ನಿಧಿಯಲ್ಲಿ ಗೌರವಿಸಲ್ಪಡುವರು. ಯಾರು ಹದೀಸುಗಳಿಗಿಂತಲೂ ಇತರ ಮಹಾತ್ಮರ ಮಾತುಗಳಿಗಿಂತಲೂ ಖುರ್‌ಆನಿಗೆ ಆದ್ಯತೆ ನೀಡುತ್ತಾರೋ ಅವರಿಗೆ ದೇವಸನ್ನಿಧಿಯಲ್ಲಿ ಗೌರವ ನೀಡಲ್ಪಡುವುದು.

"ಮನುಷ್ಯ ವಂಶಕ್ಕೆ ಭೂಮಿಯಲ್ಲಿ ಪವಿತ್ರ ಖುರ್‌ಆನ್ ಹೊರತು ಬೇರೊಂದು ದೈವಿಕ ಗ್ರಂಥವಿಲ್ಲ. ಆದಂ ಸಂತತಿಗಳಿಗೆಲ್ಲ ಮುಹಮ್ಮದ್ ಮುಸ್ತಫಾ[ಸ] ಹೊರತು ಬೇರೊಬ್ಬ ರಸೂಲ್ ಮತ್ತು ಶಫೀಅ್ (ಶಿಫಾರಸುಗಾರ) ಇಲ್ಲ. ಆದ್ದರಿಂದ ಪ್ರತಾಪಶಾಲಿಯಾದ ಈ ನಬಿಯೊಂದಿಗೆ ನೀವು ನಿಜವಾದ ಸ್ನೇಹ ಸಂಬಂಧವನ್ನು ಸ್ಥಾಪಿಸಿರಿ. ಆಕಾಶದಲ್ಲಿ ನೀವು ಮೋಕ್ಷ ಪ್ರಾಪ್ತಿಗೋಸ್ಕರ ಗಣಿಸಲ್ಪಡಲಿಕ್ಕಾಗಿ ನೀವು ಅವರಿಗಿರುವುದಕ್ಕಿಂತ ಹೆಚ್ಚು ಹಿರಿಮೆ ಬೇರ್‍ಯಾರಿಗೂ ನೀಡದಿರಿ. ಮೋಕ್ಷವೆಂದರೆ ಮೃತಪಟ್ಟ ನಂತರ ಮಾತ್ರ ಲಭಿಸುವಂತಹದ್ದಲ್ಲ ಎಂದು ನೆನಪಿಡಿರಿ. ಬದಲು, ಯಥಾರ್ಥವಾದ ಮೋಕ್ಷ ಈ ಲೋಕದಲ್ಲೇ ಅದರ ಬೆಳಕನ್ನು ತೋರಿಸುವುದು. ಮೋಕ್ಷ ಗಳಿಸಿದವರು ಯಾರು? ಅಲ್ಲಾಹನು ಸತ್ಯವೆಂದೂ ಮುಹಮ್ಮದ್ ಪೈಗಂಬರ್[ಸ] ಅವನ ಮತ್ತು ಅವನ ಸೃಷ್ಟಿ ಜಾಲದ ಮಧ್ಯೆ ಇರುವ ಶಿಫಾರಸುಗಾರರೆಂದೂ ಆಕಾಶದ ಕೆಳಗೆ ಪೈಗಂಬರರಿಗೆ ಸಮಾನವಾಗಿ ಯಾವ ಪ್ರವಾದಿಯೂ ಇಲ್ಲವೆಂದೂ ಖುರ್‌ಆನಿಗೆ ತುಲ್ಯವಾಗಿ ಬೇರೊಂದು ದೈವಿಕ ಗ್ರಂಥ ಇಲ್ಲವೆಂದೂ ಚಿರಂಜೀವಿಯಾಗಿ ಜೀವಿಸಲು ಅವನು ಯಾರ ವಿಚಾರದಲ್ಲೂ ಇಚ್ಛಿಸುವುದಿಲ್ಲವೆಂದೂ ಈ ವರಿಷ್ಠ ಪ್ರವಾದಿ[ಸ] ಎಲ್ಲ ಕಾಲದಲ್ಲೂ ಜೀವಿಸಿರುವ ಪ್ರವಾದಿಯೆಂದೂ ದೃಢವಾಗಿ ನಂಬುವವರೇ ಮೋಕ್ಷಾರ್ಹರಾಗಿದ್ದಾರೆ." (ಕಿಶ್ತೀ ನೂಹ್- ರೂಹಾನಿ ಖಝಾಇನ್ ಸಂಪುಟ 19, ಪುಟ 13-14)

ಹಝ್ರತ್ ಮಸೀಹ್ ಮೌಊದರ[ಅ] ಕೆಲಸ ಹಝ್ರತ್ ಮುಹಮ್ಮದ್ ಮುಸ್ತಫಾರ[ಸ] ಸ್ಥಾನವನ್ನು ಮುಸ್ಲಿಮರಿಗೆ ಮನವರಿಕೆ ಮಾಡಿಕೊಡುವುದು, ಇತರ ಧರ್ಮಗಳ ಆಕ್ರಮಣಗಳಿಂದ ಇಸ್ಲಾಮನ್ನು ಸಂರಕ್ಷಿಸುವುದು; ಅಷ್ಟೇ ಅಲ್ಲ, ಇಸ್ಲಾಮಿನ ಮನೋಹರವಾದ ಅಧ್ಯಾಪನೆಗಳನ್ನು ಲೋಕದಲ್ಲೆಡೆ ಪ್ರಚಾರಮಾಡುವುದಾಗಿತ್ತು. ಶರೀಅತ್ ತಂದ ಕೊನೆಯ ಪ್ರವಾದಿ ಎಂಬ ನೆಲೆಯಲ್ಲಿ ಪೈಗಂಬರರಿಗೆ[ಸ] ಅವತೀರ್ಣವಾದ ಆ ಹಿದಾಯತ್ ಅಥವಾ ಸನ್ಮಾರ್ಗವನ್ನು ಇತರರಿಗೆ ತಿಳಿಸಿಕೊಡುವುದಾಗಿತ್ತು. ಈ ಬಗ್ಗೆ ಅಂತ್ಯಕಾಲದಲ್ಲಿ ಮಸೀಹ್ ಮತ್ತು ಮಹ್‌ದಿ ಆಗಮಿಸಿ ಈ ಕೆಲಸ ನಿರ್ವಹಿಸುವರೆಂದೂ ಎಲ್ಲ ಧರ್ಮಗಳ ಮೇಲೆ ಇಸ್ಲಾಮಿಗೆ ವಿಜಯ ಉಂಟಾಗುವುದೆಂದೂ ಹದೀಸುಗಳಲ್ಲಿ ಉಲ್ಲೇಖವಿದೆ. ಅವರು, ಬರಬೇಕಾದ ಮಸೀಹ್ ಮತ್ತು ಮಹ್‌ದಿ ತಾನೆಂದು ವಾದಿಸಿದರು. ತನ್ನ ವಾದಕ್ಕೆ ಸಾಕ್ಷ್ಯವಾಗಿ ಅನೇಕ ಭವಿಷ್ಯವಾಣಿಗಳನ್ನು ಅವರು ನುಡಿದರು. ಅವೆಲ್ಲ ಉತ್ತಮ ರೀತಿಯಲ್ಲಿ ನೆರವೇರಿದವು. ಅವುಗಳಲ್ಲಿ ಭೂಕಂಪ, ಪ್ಲೇಗ್ ಮತ್ತು ಇತರ ಭವಿಷ್ಯ ನುಡಿಗಳಿವೆ. ಇವು ಹಾಗೂ ಆಕಾಶ ಮತ್ತು ಭೂಮಿಯಿಂದ ಉಂಟಾಗುವ ವಿಪತ್ತುಗಳಿಗೆ ಸಂಬಂಧಿಸಿದ ಇತರ ಭವಿಷ್ಯೋಕ್ತಿಗಳೂ ಆ ಮಹಾತ್ಮರ ಸತ್ಯತೆಯನ್ನು ಬಹಿರಂಗಪಡಿಸುತ್ತಾ ಸ್ಪಷ್ಟವಾಗಿ ಈಡೇರಿದವು.

ಹಝ್ರತ್ ಮುಹಮ್ಮದ್ ಪೈಗಂಬರರು[ಸ] ತನ್ನ ಮಹ್‌ದಿಗೆ ಎರಡು ದೃಷ್ಟಾಂತಗಳು ಗೋಚರಿಸುವುವೆಂದು ಭವಿಷ್ಯ ನುಡಿದಿದ್ದರು. ಸೂರ್ಯನಿಗೆ ಮತ್ತು ಚಂದ್ರನಿಗೆ ನಿರ್ದಿಷ್ಟ ದಿನಾಂಕಗಳಂದು ಗ್ರಹಣಗಳು ಉಂಟಾಗುವುವೆಂದು. ಒಂದು ದೃಷ್ಟಾಂತವೆಂಬ ರೀತಿಯಲ್ಲಿ ಅದರ ಮುಂಚೆ ಒಮ್ಮೆಯೂ ಹಾಗೆ ಗ್ರಹಣ ಉಂಟಾಗಲಿಲ್ಲ. ವಾದಿಸುವ ಒಬ್ಬ ವ್ಯಕ್ತಿ ಜೀವಿಸಿರುವಾಗ, ಅವರ ವಾದವನ್ನು ಸತ್ಯಪಡಿಸುತ್ತಾ ನಿರ್ದಿಷ್ಟ ದಿನಾಂಕಗಳಲ್ಲಿ ಗ್ರಹಣ ಉಂಟಾಗುವ ರೀತಿಯಲ್ಲಿರುವ ದೃಷ್ಟಾಂತ ಅದಕ್ಕಿಂತ ಮುಂಚೆ ಒಮ್ಮೆಯೂ ಸಂಭವಿಸಲಿಲ್ಲ. ಆ ಸರಿಯಾದ ಕಾಲದಲ್ಲೇ, ಆಗಮಿಸಲಿದ್ದ ಮಹ್‌ದಿ ಮತ್ತು ಮಸೀಹ್ ತಾನೆಂದೂ ಶಾಂತಿ ಸಮಾಧಾನ ಬಯಸುವವರು ನನ್ನ ಕ್ಷೇಮದ ಕೋಟೆಯೊಳಗೆ ಪ್ರವೇಶಿಸಿರಿ ಎಂದೂ ಓರ್ವ ವ್ಯಕ್ತಿ ವಾದಿಸಿದರು. ಇವೆಲ್ಲ ಆಕಸ್ಮಿಕವಲ್ಲ. ಇದು ಬುದ್ಧಿಶಾಲಿಗಳೂ ವಿವೇಕಶಾಲಿಗಳೂ ಚಿಂತನೆಮಾಡಬೇಕಾದ ಸ್ಥಾನವಾಗಿದೆ. ಅಹ್ಮದಿಗಳು ಭಾಗ್ಯಶಾಲಿಗಳು. ಅಲ್ಲಾಹನು ಅವರಿಗೆ ಈ ವಾಗ್ದತ್ತ ಪುರುಷರ ಜಮಾಅತಿನಲ್ಲಿ ಸೇರಲು ಸೌಭಾಗ್ಯ ನೀಡಿದನು.

ಹಝ್ರತ್ ಮಸೀಹ್ ಮೌಊದ್‌ರ[ಅ] ಜಮಾಅತಿನಲ್ಲಿ ಸೇರಿದ ಬಳಿಕ ನಾವು ಅವರ ಸಂದೇಶವನ್ನು ಲೋಕದಲ್ಲಿ ಹರಡಿಸಬೇಕಾಗಿದೆ. ಅಲ್ಲಾಹನ ತೌಹೀದನ್ನು ಲೋಕದಲ್ಲಿ ಸ್ಥಾಪಿಸಲಿಕ್ಕೂ ಪೈಗಂಬರರ[ಸ] ಪತಾಕೆಯನ್ನು ಲೋಕದಲ್ಲೆಲ್ಲ ಹಾರಿಸಲಿಕ್ಕೂ ನಾವು ಪ್ರಯತ್ನಿಸಬೇಕಾಗಿದೆ. ಇದು ಅಲ್ಲಾಹನ ಕೆಲಸವಾಗಿದೆ. ಇದು ಈಡೇರಬೇಕಾಗಿದೆ. ನಾವು ಈ ಕಾರ್ಯದಲ್ಲಿ ಸ್ವಲ್ಪ ಶ್ರಮ ವಹಿಸಿ ಪ್ರತಿಫಲ ಸಂಪಾದಿಸುತ್ತೇವಷ್ಟೆ. ನಮ್ಮ ಹೆಸರು ಇರುತ್ತದೆಯಷ್ಟೆ. ಸದ್‌ಸ್ವಭಾವಿಗಳಾದ ಜನರನ್ನು ಏಕದೇವ ಸಿದ್ಧಾಂತವನ್ನು ನೆಲೆನಿಲ್ಲಿಸಲಿಕ್ಕೂ ಪೈಗಂಬರರ[ಸ] ಉಮ್ಮತಿಯಲ್ಲಿ ಸೇರಿಸಲಿಕ್ಕೂ ಅಲ್ಲಾಹನು ತೀರ್ಮಾನ ಮಾಡಿರುವನು. ಆದುದರಿಂದ ತನ್ನ ಮಸೀಹ್ ಮತ್ತು ಮಹ್‌ದಿಯನ್ನು ಅವನು ಕಳುಹಿಸಿದನು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಭೂಮಿಯ ವಿವಿಧ ಕಡೆಗಳಲ್ಲಿ ವಾಸಿಸುವ ಆತ್ಮಗಳನ್ನು, ಅವರು ಯುರೋಪಿನಲ್ಲಿರಲಿ ಅಥವಾ ಏಷ್ಯಾದಲ್ಲಿರಲಿ, ಸುಸ್ವಭಾವಿಗಳಾದ ಎಲ್ಲರನ್ನೂ ಏಕದೇವ ಸಿದ್ಧಾಂತದೆಡೆಗೆ ತರಲಿಕ್ಕೂ ತನ್ನ ದಾಸರನ್ನು ಒಂದೇ ಒಂದು ಧರ್ಮದಲ್ಲಿ ಒಂದು

ಗೂಡಿಸಲಿಕ್ಕೂ ಅಲ್ಲಾಹನು ಇಚ್ಛಿಸುತ್ತಾನೆ. ಇದೇ ಅಲ್ಲಾಹನ ಉದ್ದೇಶ. ಇದಕ್ಕೋಸ್ಕರ ನಾನು ಕಳುಹಿಸಲ್ಪಟ್ಟಿದ್ದೇನೆ. ಆದುದರಿಂದ ನೀವು ಈ ಉದ್ದೇಶವನ್ನು ಹಿಂಬಾಲಿಸಿರಿ. ಆದರೆ ಅದು ಮೃದು ಭಾವನೆ, ಸದ್‌ಸ್ವಭಾವ ಮತ್ತು ಪ್ರಾರ್ಥನೆಯಲ್ಲಿ ಶಕ್ತಿ ಹೆಚ್ಚಿಸಿಕೊಂಡಾಗಿರಬೇಕು." (ಅಲ್‌ವಸಿಯ್ಯತ್ - ರೂಹಾನಿ ಖಝಾಇನ್, ಸಂಪುಟ 20 ಪುಟ 306,307)

ಲೋಕದಲ್ಲಿ ತನ್ನ ಪವಿತ್ರ ಪ್ರವಾದಿಯ ಆಳ್ವಿಕೆ ಸ್ಥಾಪಿಸುವುದು ಅಲ್ಲಾಹನ ಇಚ್ಛೆಯಾಗಿದೆ. ಆದರೆ ಇಂದಿನ ಲೋಕದ ಅವಸ್ಥೆ ಕಂಡರೆ ಇದು ಬಹಳ ದುಷ್ಕರವೆಂದು ತೋಚಬಹುದು. ಆದರೆ ಪಂಜಾಬಿನ ಒಂದು ಚಿಕ್ಕ ಸ್ಥಳವಾದ ಖಾದಿಯಾನಿನಲ್ಲಿ ಆ ವ್ಯಕ್ತಿ ಒಬ್ಬಂಟಿಗನಾಗಿದ್ದರು ಎಂದು ನಾವು ನೆನಪಿಡಬೇಕು. ವಾಗ್ದತ್ತ ಮಸೀಹರಾಗಿದ್ದ ಆ ಮಹಾತ್ಮರ ಜೀವಮಾನದಲ್ಲೇ ಲಕ್ಷಗಟ್ಟಲೆ ವಿಶ್ವಾಸಿಗಳನ್ನು ಅವರಿಗೆ ಅಲ್ಲಾಹನು ತೋರಿಸಿಕೊಟ್ಟನು. ಮಾತ್ರವಲ್ಲ, ಯುರೋಪ್ ಮತ್ತು ಅಮೇರಿಕದಲ್ಲೂ ಅವರ ಹೆಸರು ಮತ್ತು ವಾದ ಪ್ರಸಿದ್ಧಿ ಗಳಿಸಿತು. ಆ ಮಹಾಪುರುಷರನ್ನು ನಂಬುವವರು ಜನ್ಮ ತಾಳಿದರು. ಹಝ್ರತ್ ಮಸೀಹ್ ಮೌಊದ್‌ರವರ(ಅ) ಜಮಾಅತಿನ ಮೇಲೆ ಉದಿಸುವ ಪ್ರತಿಯೊಂದು ದಿನವೂ ಅಭಿವೃದ್ಧಿಯ ಹೊಸ ಮಾರ್ಗಗಳನ್ನು ನಮಗೆ ತೋರಿಸಿಕೊಡುತ್ತಾ ಇದೆ.

ಹಝ್ರತ್ ಮಸೀಹ್ ಮೌಊದ್‌ರವರ(ಅ) ಜಮಾಅತ್ ಇಂದು 185 ರಾಷ್ಟ್ರಗಳಲ್ಲಿ ಸ್ಥಾಪಿತವಾದುದು ಲೋಕವನ್ನೆಲ್ಲ ಒಂದೇ ಒಂದು ಧರ್ಮದಲ್ಲಿ ಒಗ್ಗೂಡಿಸಲಿಕ್ಕೋಸ್ಕರ ಆಗಮಿಸಿದ ಸತ್ಯವಂತನಾದ ಮಸೀಹ್ ಮಹ್‌ದಿ ಅವರೇ ಆಗಿದ್ದಾರೆಂಬುದಕ್ಕೆ ಸ್ಪಷ್ಟವಾದ ಪುರಾವೆಯಾಗಿದೆ. ಲೋಕದ ಎಲ್ಲ ಭೂಖಂಡಗಳ ಹೆಚ್ಚಿನ ದೇಶಗಳಲ್ಲಿ ಅಲ್ಲಾಹನ ಇಚ್ಛಾನುಸಾರದ ಚಟುವಟಿಕೆಗಳನ್ನು ನಾವು ಬೈಅತಿನ ರೂಪದಲ್ಲಿ ಕಾಣುತ್ತಿದ್ದೇವೆ. ಇಂದು ಇಸ್ಲಾಮಿಗೋಸ್ಕರ ಅದರ ಶತ್ರುಗಳನ್ನು ಯಾರಾದರೂ ಪ್ರತಿರೋಧಿಸುವುದಿದ್ದರೆ ಹಝ್ರತ್ ಮಸೀಹ್ ಮೌಊದ್‌ರ(ಅ) ಪಾಠಗಳಿಂದ ಅನುಗ್ರಹ ಗಳಿಸಿದ ಅವರ ವಿಶ್ವಾಸಿಗಳೇ ಅದನ್ನು ಮಾಡುತ್ತಿದ್ದಾರೆ.

ಇಂದು ಅರಬಿ ಲೋಕ ಸಹ ಇದಕ್ಕೆ ಸಾಕ್ಷಿಯಾಗಿದೆ. ಕ್ರೈಸ್ತರ ಕೈಗಳಿಂದ ಕಳೆದ ಹಲವು ವರ್ಷಗಳಿಂದ ಅರೇಬಿಯನ್ ಮುಸ್ಲಿಮರು ಎಷ್ಟರ ಮಟ್ಟಿಗೆ ಸಂಕಟಪಡುತ್ತಿದ್ದಾರೆ! ಈ ಸಂದರ್ಭದಲ್ಲೂ ಅಲ್ಲಾಹನು ಕಳುಹಿಸಿದ ಮಸೀಹರಿಂದ ಶಿಕ್ಷಣ ಪಡೆದವರೇ ಲೋಕದಲ್ಲೆಡೆ ಇರುವ ಕ್ರೈಸ್ತರನ್ನು ಎದುರಿಸುತ್ತಿದ್ದಾರೆ. ಕಾರಣವೇನೆಂದರೆ, ಇಂದು ಅಲ್ಲಾಹನ ಬೆಂಬಲ ಮತ್ತು ಸಹಾಯದಿಂದ ಖಂಡಿಸಲಾಗದ ಪುರಾವೆಗಳನ್ನು ಪೂರ್ಣವಾಗಿ ಮುಂದಿಟ್ಟಿರುವುದು ಹಝ್ರತ್ ಮಸೀಹ್ ಮೌಊದ್(ಅ) ಮಾತ್ರ. ಆ ಮೂಲಕ ಅಲ್ಲಾಹನ ಏಕತ್ವ ಸ್ಥಾಪಿಸಲಿಕ್ಕೂ ಲೋಕದ ತಪ್ಪಾದ ವಿಶ್ವಾಸಗಳ ಬಾಯಿಮುಚ್ಚಿಸಲಿಕ್ಕೂ ಸಾಧ್ಯವಾಗುತ್ತದೆ. ಇಂದು ಹಝ್ರತ್ ಮಸೀಹ್ ಮೌಊದ್(ಅ) ನೀಡಿದ ಸಾಕ್ಷ್ಯಗಳ ಮುಂದೆ ಎಷ್ಟು ಬೇಗ ನಿರರ್ಥಕವಾದ ವಿಶ್ವಾಸಾದರ್ಶಗಳ ಮಿಥ್ಯೆಗಳು ಬಹಿರಂಗಗೊಳ್ಳುತ್ತವೆ! ವಿವಿಧ ಮಾರ್ಗಗಳನ್ನು ಇದಕ್ಕೋಸ್ಕರ ನಾವು ಉಪಯೋಗಿಸುತ್ತೇವೆ. ಇದು ಸಹ ಅಲ್ಲಾಹನ ವಾಗ್ದಾನದ ಅನುಸಾರವಾಗಿದೆ. ಅಂದರೆ, ಹಝ್ರತ್ ಮಸೀಹ್ ಮೌಊದ್‌ರೊಡನೆ(ಅ) ಅಲ್ಲಾಹನು ಹೇಳಿದನು: "ನಾನು ನಿನ್ನ ಸಂದೇಶವನ್ನು ಲೋಕದ ಎಲ್ಲೆಗಳವರೆಗೆ ತಲುಪಿಸುವೆನು." ಇಂದು ಎಷ್ಟು ಸುಲಭವಾಗಿ "ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ" ಮೂಲಕ ನಾವು ಆ ಸಂದೇಶವನ್ನು ಲೋಕದ ಎಲ್ಲೆಗಳವರೆಗೆ ತಲುಪಿಸುತ್ತಿದ್ದೇವೆ! ಇದು ಸಹ ಒಂದು ಸಾಕ್ಷ್ಯವಾಗಿದೆ.

ಇದು ಚಿಕ್ಕ ಒಂದು ಜಮಾಅತಾಗಿದೆ. ಅವರ ಕೈಯಲ್ಲಿ ತೈಲ ಸಂಪತ್ತಿಲ್ಲ. ಬೇರೆ ಭೌತಿಕ ಮಾರ್ಗಗಳು ಕೂಡ ಇಲ್ಲ. ಆಧುನಿಕ ಉಪಕರಣಗಳ ಮೂಲಕ ಲೋಕದಲ್ಲಿ ಇಸ್ಲಾಮಿನ ಪ್ರಚಾರ ನಡೆಸಲು ಸಾಧ್ಯವಾಗುವುದೆಂದು ಅವರಿಗೆ ಆಲೋಚಿಸಲು ಕೂಡ ಸಾಧ್ಯವಿರಲಿಲ್ಲ. ಇದು ಸಹ ನಾನು ಹೇಳಿದಂತೆ ಹಝ್ರತ್ ಮಸೀಹ್ ಮೌಊದ್‌ರ(ಅ) ಸತ್ಯಕ್ಕಿರುವ ಪುರಾವೆಯಾಗಿದೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರೊಂದಿಗೆ(ಅ) ಮಾಡಿದ ವಾಗ್ದಾನ ಇಂದು ನಾವು ಹೊಸತರಲ್ಲಿ ಹೊಸತಾದ ರೂಪದಲ್ಲಿ ಈಡೇರುವುದನ್ನು ಕಾಣುತ್ತಿದ್ದೇವೆ.

ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಲಭಿಸಿದ ಇಲ್‌ಹಾಂ (ದಿವ್ಯ ಸಂದೇಶ) ಬೇರೊಂದು ತೇಜೋವಿಲಾಸದೊಂದಿಗೆ ಈಡೇರುವುದನ್ನು ಇಂದು ನಾವು ಕಾಣುತ್ತಿದ್ದೇವೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದರ(ಅ) ಜಮಾಅತಿಗೆ ಇಂದು ಹೊಸತೊಂದು ಸ್ಯಾಟಲೈಟ್ ಮೂಲಕ - ಇದು ಅರಬ್ ಲೋಕಕ್ಕೆ ಮಾತ್ರ ಉಳ್ಳದ್ದಾಗಿದೆ - ಒಂದು ಹೊಸ ಚಾನೆಲ್ "MTA 3 ಅಲ್‌ಅರಬಿಯ್ಯ"ದ ಪ್ರಸರಣ ತೊಡಗಲು ಸೌಭಾಗ್ಯ ನೀಡಿದ್ದಾನೆ. ಇದು 24 ಗಂಟೆ ಕಾಲ ಅರಬಿ ಭಾಷೆಯಲ್ಲಿ ಕಾರ್ಯಕ್ರಮಗಳನ್ನು ಬಿತ್ತರಿಸುವುದು. ಇದು ಅರಬ್ ಲೋಕದ ಸದ್‌ಸ್ವಭಾವಿಗಳಾದ ಜನರು ಹಝ್ರತ್ ಮಸೀಹ್ ಮೌಊದ್(ಅ) ವಿತರಣೆ ಮಾಡಿದ ಆ ಜ್ಞಾನದ ಭಂಡಾರಗಳಿಂದ ಫಲ ಪಡೆಯಲಿಕ್ಕೋಸ್ಕರವಾಗಿದೆ. ಈ ಚಾನೆಲ್ ಕಾರಣದಿಂದ ವಿರೋಧ ಸಹ ಆರಂಭವಾಗಿದೆ. ನಾವು ಒಪ್ಪಂದ ಮಾಡಿದ ಸ್ಯಾಟಲೈಟ್ ಕಂಪೆನಿಗೆ ಶತ್ರುಗಳಿಂದ ಬೆದರಿಕೆ ಬಂದಿದೆ. ಆದರೆ, ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ ಪ್ರಕಾರ, ಈ ಸಂದೇಶ ಈಗ ಅವರಿಗೆ ತಲಪಬೇಕೆಂದು ಅಲ್ಲಾಹನು ಇಚ್ಛಿಸಿದ್ದಾನೆ. ಆದ್ದರಿಂದ ಅಲ್ಲಾಹನ ಇಚ್ಛೆಯಂತೆ ಈ ಸಂದೇಶ ಅಲ್ಲಿಗೆ ತಲಪುವುದು. ಅದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಇನ್‌ಶಾಅಲ್ ಅಲ್ಲಾಹ್. ನೀವು ಪ್ರಾರ್ಥಿಸಿರಿ. ಅಲ್ಲಾಹನು ಈ ಸಂದೇಶ ತಲಪಿಸಲು ನಮಗೆ ಸಹಾಯ ನೀಡುವ ಇವರನ್ನೂ ಎಲ್ಲ ಉಪದ್ರವಗಳಿಂದ ಕಾಪಾಡಲಿ. ತಮ್ಮ ಒಪ್ಪಂದದಲ್ಲಿ ದೃಢವಾಗಿ ನಿಲ್ಲಲಿಕ್ಕೂ ಅಲ್ಲಾಹನು ಅವರಿಗೆ ಭಾಗ್ಯ ನೀಡಲಿ. ಭಾಗ್ಯಶಾಲಿಗಳಾದ ಆತ್ಮಗಳಿಗೆ ಈ ಆಧ್ಯಾತ್ಮಿಕ ಭಕ್ಷ್ಯ ಪಾತ್ರೆಯ ಪ್ರಯೋಜನ ಪಡೆಯಲು ಭಾಗ್ಯ ನೀಡಲಿ. ಮುಸ್ಲಿಮರ ಬಹುಸಂಖ್ಯಾತ ಜನರು ಈ ಸಂದೇಶವನ್ನು ಸ್ವೀಕರಿಸುವರೆಂಬುದರಲ್ಲಿ ನಮಗೆ ಏನೂ ಸಂಶಯವಿಲ್ಲ. ಇದು ಸಹ ಮಸೀಹ್ ಮೌಊದರೊಡನೆ(ಅ) ಅಲ್ಲಾಹನು ಮಾಡಿದ ವಾಗ್ದಾನವಾಗಿದೆ. ಅಲ್ಲಾಹನಿಂದ ಅವರಿಗೆ ಲಭಿಸಿದ ಒಂದು ಇಲ್‌ಹಾಂ ಈ ರೀತಿಯಾಗಿದೆ.

"اِنِّیْ مَعَکَ یَا ابْنَ رَسُوْلِ اللّٰہِ۔ سب مسلمانوں کو جو روئے زمین پر ہیں جمع کرو عَلٰی دِیْنٍ وَّاحِدٍ"

"ರಸೂಲುಲ್ಲಾಹರ ಮಗನೇ, ನಾನು ನಿನ್ನೊಂದಿಗಿದ್ದೇನೆ. ಭೂಲೋಕದಲ್ಲಿರುವ ಎಲ್ಲ ಮುಸ್ಲಿಮರನ್ನು ಒಂದೇ ಒಂದು ಧರ್ಮದಲ್ಲಿ ಒಗ್ಗೂಡಿಸು." (ತದ್‌ಕಿರಃ ಪುಟ 490)

ಈ ಬಗ್ಗೆ ಅವರು ಹೇಳಿದರು: "ಭೂಲೋಕದಲ್ಲಿರುವ ಎಲ್ಲ ಮುಸ್ಲಿಮರನ್ನು ಒಂದುಗೂಡಿಸು ಎಂಬ ಆಜ್ಞೆ - 'ಅಲಾ ದೀನಿನ್ ವಾಹಿದ್' -

ಇದೊಂದು ವಿಶೇಷ ತರದ ಆಜ್ಞೆಯಾಗಿದೆ." ಅವರು ಹೇಳಿದರು: "ಆದೇಶಗಳು ಮತ್ತು ಆಜ್ಞೆಗಳು ಎರಡು ವಿಧದಲ್ಲಿವೆ. ಒಂದು ನಿಯಮಗಳ ರೂಪದಲ್ಲಾಗಿದೆ. ಅಂದರೆ, ನಮಾಝ್ ಮಾಡು, ಝಕಾತ್ ಕೊಡು, ಯಾರನ್ನೂ ಕೊಲ್ಲದಿರು ಇತ್ಯಾದಿ.... ಇಂತಹ ಆಜ್ಞೆಗಳಲ್ಲಿ ಒಂದು ಭವಿಷ್ಯೋಕ್ತಿ ಸಹ ಅಂತರ್ಲೀನವಾಗಿದೆ. ಅದೇನೆಂದರೆ, ಇದಕ್ಕೆ ವಿರುದ್ಧವಾಗಿ ಕೆಲವರಿರುವರು. ಒಟ್ಟಾರೆ, ಈ ಸಂಗತಿ ನಿಯಮಪರವಾದುದು... ಎರಡನೆಯ ವಿಚಾರ 'ಕೂನಿ' ಅಥವಾ ಆಜ್ಞೆಯಾಗಿದೆ. 'ಖುಲ್‌ನಾ ಯಾನಾರೂ ಕೂನೀ ಬರ್ದನ್ ವ ಸಲಾಮಾ' ಆಗ ಅದು ಪೂರ್ಣವಾದ ರೀತಿಯಲ್ಲಿ ಜಾರಿಯಾಯಿತು. ತಣ್ಣಗಾಗಲು ಬೆಂಕಿಯೊಡನೆ ಆಜ್ಞಾಪಿಸಿದಾಗ ಅದು ತಣ್ಣಗಾಯಿತು.

"ಭೂಮಿಯಲ್ಲಿರುವ ಎಲ್ಲ ಮುಸ್ಲಿಮರನ್ನು ಒಂದೇ ಒಂದು ದೀನಿನಲ್ಲಿ ಒಂದುಗೂಡಿಸಲು ಅಲ್ಲಾಹನು ಇಚ್ಛಿಸುತ್ತಾನೆ ಎಂಬ ನನ್ನ ಇಲ್‌ಹಾಮ್‌ನಲ್ಲಿರುವ ಈ ಆಜ್ಞೆ ಸಹ ಅದು ಈಡೇರಿಯೇ ತೀರುವುದೆಂಬ ರೀತಿಯಲ್ಲಿದೆಯೆಂದು ಮನವರಿಕೆಯಾಗುತ್ತದೆ. ಇದರ ತಾತ್ಪರ್ಯ ಇದರಲ್ಲಿ ಯಾವುದೇ ರೀತಿಯ ವ್ಯತ್ಯಾಸ ಉಂಟಾಗಲಾರದೆಂದಲ್ಲ. ವ್ಯತ್ಯಾಸ ಉಂಟಾಗುವುದು. ಆದರೆ ಅದು ಹೇಳುವಷ್ಟರ ಮಟ್ಟಿನದ್ದಲ್ಲ." (ಅಲ್‌ಹಕಂ - ಸಂಪುಟ 9 ಸಂಚಿಕೆ 42/30-11-1905 ಪುಟ 2)

ಈ ಕರೆಗೆ ಲಬ್ಬೈಕ್ ಹೇಳಿಕೊಂಡು, ಒಂದೇ ಒಂದು ಧರ್ಮದಲ್ಲಿ ಸಂಘಟಿಸಲು ಅಲ್ಲಾಹನು ಮುಸ್ಲಿಮರಿಗೆ ಸೌಭಾಗ್ಯ ನೀಡಲಿ. ನಮಗೆ ನಮ್ಮ ಜೀವಮಾನದಲ್ಲೇ ಈ ದೃಶ್ಯಗಳನ್ನು ಕಾಣುವ ಭಾಗ್ಯ ಉಂಟಾಗಲಿ.

ಇಂದು "ಎಂ.ಟಿ.ಎ.3 ಅಲ್‌ಅರಬಿಯ್ಯ"ದ ಉದ್ಘಾಟನೆ ನಡೆಯುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್‌ರವರ[ಅ] ಮಾತುಗಳಲ್ಲಿ, ಅವರು ಅರಬಿಗಳನ್ನು ಸಂಬೋಧಿಸಿ ನೀಡಿದ ಸಂದೇಶದ ಕೆಲವು ಭಾಗಗಳನ್ನು ನಾನು ಓದಿ ಹೇಳುವೆನು. ಅಲ್ಲಾಹನು ಶೀಘ್ರವಾಗಿ ಅರಬ್ ಲೋಕದ ಹೃದಯವನ್ನು ತೆರೆಯಲಿ. ಕಾಲದ ಇಮಾಮನ್ನು ಗುರುತಿಸಲು ಅವರಿಗೆ ಸೌಭಾಗ್ಯ ನೀಡಲಿ. ತನ್ನ ಸಂದೇಶದಲ್ಲಿ ಅವರು ಅರಬ್ ಲೋಕದೊಡನೆ ಹೇಳುತ್ತಾರೆ:

"ಅಸ್ಸಲಾಮು ಅಲೈಕುಂ, ಅರೇಬಿಯಾದ ದೇವಭಕ್ತರೂ ಪರಿಶುದ್ಧರೂ ಆಗಿರುವ ಜನರೇ, ಅಸ್ಸಲಾಮು ಅಲೈಕುಂ. ಎಲೈ ಪ್ರವಾದಿತ್ವದ ರಾಜ್ಯದಲ್ಲಿ ವಾಸಿಸುವವರೇ, ಅಲ್ಲಾಹನ ಮಹತ್ತರ ಗೃಹದ ಪರಿಸರದಲ್ಲಿ ವಾಸಿಸುತ್ತಿರುವವರೇ, ನೀವು ಇಸ್ಲಾಮಿನ ಜನವರ್ಗದಲ್ಲಿ ಉತ್ತಮರಾದ ಜನವರ್ಗದವರಾಗಿದ್ದೀರಿ. ನೀವು ಅತ್ಯುನ್ನತನಾದ ಅಲ್ಲಾಹನಿಂದ ಎಲ್ಲರಿಗಿಂತ ಆರಿಸಲ್ಪಟ್ಟ ಸಂಘವಾಗಿದ್ದೀರಿ. ನಿಮಗಿರುವ ಮಹತ್ವದ ಮಟ್ಟಕ್ಕೇರಲು ಯಾವ ಜನತೆಗೂ ಸಾಧ್ಯವಾಗಲಾರದು. ನೀವು ಮಾನ್ಯತೆಯಲ್ಲೂ ಶ್ರೇಷ್ಠತೆಯಲ್ಲೂ ಸ್ಥಾನದಲ್ಲೂ ಪದವಿಯಲ್ಲೂ ಎಲ್ಲರನ್ನೂ ಮೀರಿಸಿದ್ದೀರಿ. ಅಲ್ಲಾಹನು ದಿವ್ಯಸಂದೇಶದ (ವಹ್ಯ್) ಆರಂಭವನ್ನು ಹಝ್ರತ್ ಆದಮ್‌ರಿಂದ ತೊಡಗಿ ನಿಮ್ಮ ಪೈಕಿಯ ಓರ್ವ ಪ್ರವಾದಿಯಲ್ಲಿ ಪರಿಪೂರ್ಣಗೊಳಿಸಿದನು ಎಂಬುದು ಮಾತ್ರ ಸಾಕು ನಿಮ್ಮ ಘನತೆಗೆ. ನಿಮ್ಮದೇ ಆಗಿತ್ತು ಅವರ ನಾಡು, ಜನ್ಮ ಸ್ಥಳ ಮತ್ತು ವಾಸಸ್ಥಳ. ಆ ಪ್ರವಾದಿಯ ತೇಜೋವಿಲಾಸ ಎಂಥದ್ದೆಂದು ನಿಮಗೇನು ಗೊತ್ತು? ಅವರು ಮುಹಮ್ಮದ್ ಮುಸ್ತಫಾ[ಸ] ಆಗಿದ್ದಾರೆ; ಪುಣ್ಯಾತ್ಮರುಗಳ ನೇತಾರರಾಗಿದ್ದಾರೆ. ಪ್ರವಾದಿಗಳ ಅಭಿಮಾನವಾಗಿದ್ದಾರೆ; ರಸೂಲರಲ್ಲಿ ಶ್ರೇಷ್ಠರಾಗಿದ್ದಾರೆ; ಲೋಕದ ಇಮಾಮರಾಗಿದ್ದಾರೆ. ಅವರ ಔದಾರ್ಯ ಎಲ್ಲ ಮನುಷ್ಯರ ಮೇಲಿದೆ. ಕಳೆದ ಕಾಲದ ಎಲ್ಲ ದೃಷ್ಟಾಂತಗಳೂ ದೈವಿಕ ಜ್ಞಾನಗಳೂ ಎಲ್ಲರಿಗೂ ಮನವರಿಕೆಮಾಡಲು ಸಾಧ್ಯವಾಗದ ಉನ್ನತವಾದ ತತ್ವಗಳೂ ಅವರ ವಹ್ಯ್‌ಯಲ್ಲಿ ಅಂತರ್ಲೀನವಾಗಿದೆ. ನಿರ್ಜೀವಗೊಂಡಿದ್ದ ದೈವಿಕ ಜ್ಞಾನಗಳನ್ನೂ ಸ್ವರ್ಗೀಯ ಮಾರ್ಗಗಳನ್ನೂ ಅವರ ಧರ್ಮ ಜೀವಂತಗೊಳಿಸಿತು.

"ಓ ಅಲ್ಲಾಹ್, ಭೂಮಿಯಲ್ಲಿರುವ ನೀರಿನಲ್ಲಿ ಎಷ್ಟು ಹನಿಗಳಿವೆಯೋ ಅಷ್ಟು, ಎಷ್ಟು ಮರಳ ಹರಳುಗಳಿವೆಯೋ ಅಷ್ಟು, ಜೀವಂತವಾಗಿರುವವರೂ ಮೃತಪಟ್ಟವರೂ ಎಷ್ಟು ಜನರಿದ್ದಾರೋ ಅಷ್ಟು, ಏನೆಲ್ಲ ಆಕಾಶದಲ್ಲಿದೆಯೋ, ಏನೆಲ್ಲ ಬಾಹ್ಯವೂ ಮರೆಯಾಗಿಯೂ ಇವೆಯೋ ಅವಕ್ಕೆಲ್ಲ ಸಮವಾಗಿರುವಷ್ಟು ಕಾರುಣ್ಯವೂ ಸಮಾಧಾನವೂ ಅನುಗ್ರಹವೂ ಪೈಗಂಬರರ ಮೇಲೆ ವರ್ಷಿಸು. ಆಕಾಶದ ಎಲ್ಲೆಗಳ ತನಕ ತುಂಬಿಕೊಂಡಿರುವಷ್ಟು ಸಲಾಂ ನಮ್ಮಿಂದ ಆ ಪ್ರವಾದಿಗೆ ತಲಪಿಸು.

"ಮುಹಮ್ಮದ್ ಪೈಗಂಬರರ[ಸ] ಅನುಸರಣೆಯ ನೊಗವನ್ನು ತಮ್ಮ ಮೇಲೆ ಹೇರಿಕೊಂಡ ಜನತೆ ಭಾಗ್ಯಶಾಲಿ. ಆ ಮಹಾಪುರುಷರ ವರೆಗೆ ತಲಪಿ ಆ ಪುಣ್ಯಪುರುಷನಲ್ಲಿ ತನ್ನನ್ನು ಲೀನಗೊಳಿಸಿ ಅವರೊಡನಿರುವ ಪ್ರೀತಿಯಲ್ಲಿ ತನ್ನನ್ನು ತಲ್ಲೀನನನ್ನಾಗಿ ಮಾಡಿದ ಹೃದಯ ಸಹ ಅನುಗ್ರಹೀತವಾಗಿದೆ.

"ಎಲೈ ಹಝ್ರತ್ ಮುಹಮ್ಮದ್ ಮುಸ್ತಫಾರವರ[ಸ] ಅನುಗ್ರಹೀತ ಕಾಲಹೆಜ್ಜೆಗಳು ಸ್ಪರ್ಶಿಸಿದ ಭೂಮಿಯಲ್ಲಿ ವಾಸಿಸುವವರೇ, ಅಲ್ಲಾಹನು ನಿಮ್ಮ ಮೇಲೆ ಕರುಣೆ ಸುರಿಸಲಿ; ನಿಮ್ಮನ್ನು ಇಷ್ಟಪಡಲಿ; ನಿಮ್ಮಲ್ಲಿ ತೃಪ್ತನಾಗಲಿ.

"ಎಲೈ ಅಲ್ಲಾಹನ ದಾಸರೇ, ನನಗೆ ನಿಮ್ಮ ಕುರಿತು ಸದ್ಭಾವನೆಯಿದೆ. ನನ್ನ ಆತ್ಮ ನಿಮ್ಮನ್ನು ಕಾಣಲು ದಾಹಿಸುತ್ತದೆ. ನಿಮ್ಮ ನಾಡನ್ನೂ ಅನುಗ್ರಹೀತರಾದ ನಿಮ್ಮನ್ನೂ ಕಾಣಲಿಕ್ಕೆ ನಾನು ಕಾತುರನಾಗಿದ್ದೇನೆ. ಲೋಕೋತ್ತಮನಾದ ಪೈಗಂಬರರ[ಸ] ಕಾಲಹೆಜ್ಜೆಗಳು ಸ್ಪರ್ಶಿಸಿದ ಆ ಭೂಮಿಯನ್ನು ಸಂದರ್ಶಿಸಲು ಮತ್ತು ಆ ಮಣ್ಣನ್ನು ನನ್ನ ಕಣ್ಣಿಗೆ ಸುರ್ಮಾ ಮಾಡಲಿಕ್ಕೂ ನಾನು ಬಯಸುತ್ತೇನೆ. ನಾನು ಮಕ್ಕವನ್ನೂ ಅಲ್ಲಿಯ ಸಾಲಿಹಿಗಳನ್ನೂ ಅಲ್ಲಿರುವ ಪವಿತ್ರ ಸ್ಥಳಗಳನ್ನೂ ಅಲ್ಲಿಯ ಧರ್ಮಪಂಡಿತರನ್ನೂ ಕಾಣಲು ಬಯಸುತ್ತೇನೆ. ನನ್ನ ಕಣ್ಣುಗಳು ಅಲ್ಲಿಯ ಔಲಿಯಾಗಳನ್ನೂ ಅಲ್ಲಿಯ ಮಹತ್ತರ ದೃಶ್ಯಗಳನ್ನೂ ಕಂಡು ತಣ್ಣಗಾಗಲಿಕ್ಕೋಸ್ಕರವಾಗಿದೆ ಇದು.

"ನಾನು ಅಲ್ಲಾಹನೊಡನೆ ಪ್ರಾರ್ಥಿಸುತ್ತೇನೆ ತನ್ನ ಅಪಾರವಾದ ಅನುಗ್ರಹದಿಂದ ನಿಮ್ಮ ನಾಡನ್ನು ಸಂದರ್ಶಿಸಲು ಅಲ್ಲಾಹನು ನನಗೆ ಸೌಭಾಗ್ಯ ನೀಡಲಿ. ನಿಮ್ಮನ್ನು ಕಂಡು ಸಂತೋಷಪಡಲು ನನಗೆ ಸಂದರ್ಭ ಒದಗಿಸಲಿ.

"ನನ್ನ ಸಹೋದರರೇ, ನನಗೆ ನಿಮ್ಮ ಮೇಲೆ ಮತ್ತು ನಿಮ್ಮ ನಾಡಿನ ಮೇಲೆ ಅತ್ಯಂತ ಪ್ರೀತಿಯಿದೆ. ನಿಮ್ಮ ಮಾರ್ಗದ ಮಣ್ಣನ್ನೂ ನಿಮ್ಮ ಬೀದಿಯ ಕಲ್ಲುಗಳನ್ನೂ ನಾನು ಪ್ರೀತಿಸುತ್ತೇನೆ. ಲೋಕದ ಎಲ್ಲ ವಸ್ತುಗಳಿಗಿಂತ ನಾನು ನಿಮಗೆ ಆದ್ಯತೆ ನೀಡುತ್ತೇನೆ.

"ಅರೇಬಿಯಾದ ಪ್ರಿಯ ಮಕ್ಕಳೇ, ಅಲ್ಲಾಹನು ನಿಮ್ಮನ್ನು ವಿಶಿಷ್ಟವಾದ ರೀತಿಯಲ್ಲಿ ಅಮಿತ ಅನುಗ್ರಹಗಳ ಮತ್ತು ಅಸಂಖ್ಯಾತ ವೈಶಿಷ್ಟ್ಯಗಳ ವಾರಸುದಾರರನ್ನಾಗಿ ಮಾಡಿದ್ದಾನೆ. ಯಾವ ಕಾರಣದಿಂದ ನಗರಗಳ ಮಾತೆಗೆ

(ಮಕ್ಕ ಪಟ್ಟಣಕ್ಕೆ) ಅನುಗ್ರಹ ನೀಡಲಾಗಿದೆಯೋ, ಆ ದೇವಗೃಹವಿರುವುದು ನಿಮ್ಮ ನಾಡಿನಲ್ಲಾಗಿದೆ. ಏಕದೇವ ತತ್ವವನ್ನು ಲೋಕದ ಎಲ್ಲ ರಾಜ್ಯಗಳಲ್ಲೂ ಪ್ರಚಾರಪಡಿಸಿ ಅಲ್ಲಾಹನ ಪ್ರತಾಪವನ್ನು ಬಹಿರಂಗಪಡಿಸಿದ ಆ ಅನುಗ್ರಹೀತ ಪ್ರವಾದಿಯ 'ರೌಝ'(ಸಮಾಧಿ) ಇರುವುದು ನಿಮ್ಮ ಮಧ್ಯದಲ್ಲಾಗಿದೆ. ಪೂರ್ಣ ಪ್ರಜ್ಞೆ ಮತ್ತು ತಿಳುವಳಿಕೆಯಿಂದ ಅಲ್ಲಾಹ್ ಮತ್ತು ಅವನ ಪ್ರವಾದಿಗೆ ಸಹಾಯವಿತ್ತದ್ದು ನಿಮ್ಮ ಪೈಕಿಯವರು. ಅಲ್ಲಾಹನ ದೀನ್ ಮತ್ತು ಅವನ ಪವಿತ್ರ ಗ್ರಂಥದ ಪ್ರಚಾರಕ್ಕಾಗಿ ತಮ್ಮ ಧನ ಮತ್ತು ಜೀವವನ್ನು ಅವರು ಬಲಿಯರ್ಪಿಸಿದರು. ನಿಸ್ಸಂಶಯವಾಗಿ, ಈ ಸದ್ಗುಣಗಳು ನಿಮ್ಮ ಮಾತ್ರ ವೈಶಿಷ್ಟ್ಯಗಳಾಗಿವೆ. ನಿಮ್ಮನ್ನು ಉಚಿತವಾದ ರೀತಿಯಲ್ಲಿ ಆದರಿಸದೆ, ಗೌರವಿಸದೆ ಇರುವವರು ಖಂಡಿತವಾಗಿಯೂ ಅನ್ಯಾಯ ಮತ್ತು ಅಕ್ರಮ ಮಾಡುವವರಾಗಿದ್ದಾರೆ.

"ನನ್ನ ಸಹೋದರರೇ, ಘಾಸಿಗೊಂಡ ಹೃದಯದಿಂದ ಮತ್ತು ಹರಿಯುವ ಕಣ್ಣೀರಿನಿಂದ ಈ ಪತ್ರವನ್ನು ನಿಮಗೋಸ್ಕರ ನಾನು ಬರೆಯುತ್ತಿದ್ದೇನೆ. ಆದ್ದರಿಂದ ನಾನು ಹೇಳುವುದನ್ನು ಕೇಳಿರಿ. ಅಲ್ಲಾಹನು ನಿಮಗೆ ಇದಕ್ಕೆ ಮಹತ್ತರ ಪ್ರತಿಫಲ ನೀಡಲಿ." (ಆಈನಾ ಕಮಾಲಾತೆ ಇಸ್ಲಾಂ - ರೂಹಾನಿ ಖಝಾಇನ್ ಸಂಪುಟ 5, ಪುಟ 419-422)

ಅವರು ಮತ್ತೂ ಹೇಳುತ್ತಾರೆ: "ಎಲೈ ಅರೇಬಿಯಾದ ಮಹನೀಯರೇ ಮತ್ತು ಉನ್ನತ ಕುಲಜಾತರೇ, ನಾನು ಪೂರ್ಣ ಮನಸ್ಸಿನಿಂದಲೂ ಆತ್ಮದಿಂದಲೂ ನಿಮ್ಮೊಂದಿಗಿದ್ದೇನೆ. ನನಗೆ ನನ್ನ ರಬ್ಬ್ ಅರಬಿಗಳ ಬಗ್ಗೆ ಸುವಾರ್ತೆ ನೀಡಿದ್ದಾನೆ. ನಾನು ಅವರಿಗೆ ಸಹಾಯ ಮಾಡಬೇಕೆಂದೂ ಅವರಿಗೆ ಅವರ ಸರಿಯಾದ ಮಾರ್ಗ ತೋರಿಸಿಕೊಡಬೇಕೆಂದೂ ಅವರನ್ನು ಉತ್ತಮಗೊಳಿಸಬೇಕೆಂದೂ ಇಲ್‌ಹಾಂ ಮೂಲಕ ಅವನು ನನ್ನೊಡನೆ ಹೇಳಿದ್ದಾನೆ. ಈ ಕಾರ್ಯ ನಿರ್ವಹಿಸುವುದರಲ್ಲಿ ಇನ್‌ಶಾಲ್ ಅಲ್ಲಾಹ್ ನೀವು ನನ್ನನ್ನು ವಿಜಯಿ ಮತ್ತು ಭಾಗ್ಯವಂತನಾಗಿ ಕಾಣುವಿರಿ.

"ಎಲೈ ಸ್ನೇಹಿತರೇ, ಅತ್ಯುನ್ನತನೂ ಅನುಗ್ರಹದಾತನೂ ಆದ ಅಲ್ಲಾಹನು ಇಸ್ಲಾಮನ್ನು ರಕ್ಷಿಸಲಿಕ್ಕೂ ಅದನ್ನು ಪರಿಷ್ಕರಿಸಲಿಕ್ಕೂ ನನಗೆ ತನ್ನ ವಿಶಿಷ್ಟ ಪ್ರಕಾಶವನ್ನು ನೀಡಿದ್ದಾನೆ. ತನ್ನ ಅನುಗ್ರಹದ ಮಳೆಯನ್ನು ನನ್ನ ಮೇಲೆ ವರ್ಷಿಸಿದ್ದಾನೆ. ನನಗೆ ಹಲವಿಧ ಅನುಗ್ರಹಗಳನ್ನು ದಯಪಾಲಿಸಿದ್ದಾನೆ. ಇಸ್ಲಾಂ ಮತ್ತು ಪೈಗಂಬರರ(ಸ) ಸಮುದಾಯದ ಅಧಃಪತನದ ಸಂದರ್ಭದಲ್ಲಿ ತನ್ನ ವಿಶೇಷ ಅನುಗ್ರಹಗಳ, ವಿಜಯಗಳ ಮತ್ತು ಸಹಾಯಗಳ ಸುವಾರ್ತೆಯನ್ನು ನೀಡಿದ್ದಾನೆ.

"'ಅರೇಬಿಯನ್ ಜನಸಮೂಹವೇ, ಈ ಅನುಗ್ರಹಗಳಲ್ಲಿ ನಿಮ್ಮನ್ನೂ ಪಾಲುಗಾರರನ್ನಾಗಿ ಮಾಡಲು ನಾನು ಬಯಸಿದೆನು. ನಾನು ಈ ದಿನವನ್ನು ಆಕಾಂಕ್ಷೆಯಿಂದ ನಿರೀಕ್ಷಿಸುತ್ತಿದ್ದೆನು. ಸರ್ವಲೋಕ ಪರಿಪಾಲಕನಾದ ಅಲ್ಲಾಹನಿಗೋಸ್ಕರ ನನಗೆ ಸಹಾಯ ನೀಡಲು ನೀವು ಸಿದ್ಧರಿದ್ದೀರಾ?" (ಹಮಾಮತುಲ್ ಬುಶ್ರಾ - ರೂಹಾನಿ ಖಝಾಇನ್ ಸಂಪುಟ 7, ಪುಟ 182-183)

ಎಲೈ ಅರೇಬಿಯನ್ ಮಣ್ಣಿನಲ್ಲಿ ವಾಸಿಸುವವರೇ, ಇಂದು ಹಝ್ರತ್ ಮಸೀಹ್ ಮೌಊದರ(ಅ) ಪ್ರತಿನಿಧಿ ಎಂಬ ನೆಲೆಯಲ್ಲಿ ನಾನು ಸರ್ವಲೋಕ ಪರಿಪಾಲಕನಾದ ಅಲ್ಲಾಹನ ನಾಮದಲ್ಲಿ ನಿಮ್ಮೊಡನೆ ಅಪೇಕ್ಷಿಸುತ್ತೇನೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಈ ಆಧ್ಯಾತ್ಮಿಕ ಸುತನ ಕರೆಗೆ ನೀವು ಉತ್ತರ ಕೊಡಿರಿ. ಅವರ ಅಧ್ಯಾಪನೆಗಳು ಮತ್ತು ಪೈಗಂಬರರ(ಸ) ಮೇಲಿರುವ ಪ್ರೀತಿಯ ಕುರಿತು ಕೆಲವು ಉದಾಹರಣೆಗಳನ್ನು ನಾನು ಹೇಳಿದೆನು. ಆ ಮಸೀಹ್ ಮೌಊದ್‌ರವರ(ಅ) ಗ್ರಂಥಗಳಲ್ಲಿ ನೀವು ಮುಳುಗಿ ಹುಡುಕಿರಿ. ಏಕನೂ ಸಹಭಾಗಿ ಇಲ್ಲದವನೂ ಆದ ಅಲ್ಲಾಹನೊಡನೆ ಅವರಿಗಿರುವ ಸಂಬಂಧ, ಪ್ರೀತಿ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿಚಾರದಲ್ಲಿರುವ ಅಭಿಮಾನ; ಆ ಮಹಾಪುರುಷರೊಡನೆ ಪ್ರೀತಿ ಹೊರತು ಬೇರೇನನ್ನೂ ನಿಮಗೆ ಅದರಲ್ಲಿ ಕಾಣಲು ಸಾಧ್ಯವಿಲ್ಲ. ಅಹ್ಮದಿಯತಿನ ನೂರಕ್ಕೂ ಮಿಕ್ಕಿದ ವರ್ಷಗಳ ಚರಿತ್ರೆ ಸಾಕ್ಷಿಯಾಗಿದೆ. ಜಮಾಅತಿನ ಪ್ರತಿಯೊಂದು ನಿಮಿಷ ಅಲ್ಲಾಹನ ಸಹಾಯವನ್ನು ಕಾಣುತ್ತಿದೆ. ಇಂದು ಸ್ಯಾಟಲೈಟ್ ಮೂಲಕ ನಿಮಗೋಸ್ಕರ ವಿಶಾಲವಾದ ರೀತಿಯಲ್ಲಿ ಈ ಸಂದೇಶ ತಲಪುವುದು ಸಹ ಆ ಬೆಂಬಲ ಮತ್ತು ಸಹಾಯದ ಒಂದು ಕೊಂಡಿಯಾಗಿದೆ. ಹಝ್ರತ್ ಮಸೀಹ್ ಮೌಊದ್‌ರವರನ್ನು(ಅ) ನಂಬುವ ಚಿಕ್ಕದಾದೊಂದು ಬಡ ಜಮಾಅತ್, ಒಂದೊಂದು ಪೈಸೆಯನ್ನು ಸಂಗ್ರಹಿಸಿ ಅಲ್ಲಾಹನ ತೃಪ್ತಿಗೋಸ್ಕರ ಮಾತ್ರ ಈ ಕಾಲದ ಇಮಾಮರ ಶಬ್ದವನ್ನು ಈ ಸ್ಯಾಟಲೈಟ್ ಮೂಲಕ ನಿಮಗೆ ತಲಪಿಸಿ ಸೌಭಾಗ್ಯ ಕರಗತ ಮಾಡುವ ಏರ್ಪಾಡನ್ನು ಅಲ್ಲಾಹನು ಮಾಡಿದ್ದಾನೆ.

ಆದುದರಿಂದ ದುರ್ಭಾವನೆಯನ್ನು ಬಿಟ್ಟು - ಅಲ್ಲಾಹನು ಅದನ್ನು ಇಷ್ಟಪಡುವುದಿಲ್ಲ - ಒಳ್ಳೆಯ ಭಾವನೆಯಿಂದ ವರ್ತಿಸಿ ಅಲ್ಲಾಹನ ಈ ಜರಿಯುಲ್ಲಾ (ಪಹಿಲ್ವಾನ್)ರಿಗೆ ನೆರವೀಯಲು, ಅಲ್ಲಾಹನ ತೃಪ್ತಿ ಪಡೆಯಲು ನೀವು ಎದ್ದು ನಿಲ್ಲಿರಿ. ವಿರೋಧದಿಂದ ಟೊಂಕಕಟ್ಟುವುದರ ಬದಲು ಈ ಮಹ್‌ದಿಯ ಶಬ್ದಕ್ಕೆ ಕಿವಿ ಕೊಡಿರಿ. ಇಸ್ಲಾಮಿನ ದ್ವಿತೀಯ ವಿಜಯಕ್ಕೋಸ್ಕರ ಅಲ್ಲಾಹನು ತನ್ನ ಪ್ರವಾದಿಯೊಡನೆ ಮಾಡಿದ ವಾಗ್ದಾನದ ಪ್ರಕಾರ ಕಳುಹಿಸಿದ ಮಹಾತ್ಮರು ಅವರಾಗಿದ್ದಾರೆ. ಆದ್ದರಿಂದ ಬನ್ನಿರಿ, ಈ ಮಸೀಹ್ ಮಹ್‌ದಿಯನ್ನು ನಿರಾಕರಿಸುವವರೊಂದಿಗೆ ಸೇರುವುದರ ಬದಲು ಆ ಮಹಾತ್ಮರೊಂದಿಗೆ ಕೈಜೋಡಿಸಿರಿ. ಇದು ಮುಸ್ಲಿಂ ಸಮುದಾಯದ ಮೋಕ್ಷ ಮಾತ್ರವಲ್ಲ. ಬದಲು, ಇಡೀ ಲೋಕದ ಮೋಕ್ಷವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಈ ಸತ್ಯಸಂಧನಾದ ದಾಸನ ಕೈಯನ್ನು ಹಿಡಿಯುವುದರಿಂದ ಮಾತ್ರ ಅದು ಸಾಧ್ಯವಾಗುವುದು.

ಎಲೈ ಅರೇಬಿಯನ್ ಮಣ್ಣಿನಲ್ಲಿ ವಾಸಿಸುವವರೇ, ದೇವಭಯದಿಂದ ಅಲ್ಲಾಹನಿಗೋಸ್ಕರ ಆ ಮಸೀಹ್ ಮಹ್‌ದಿಯ ನೋವು ತುಂಬಿದ ಕರೆಗೆ ಕಿವಿಕೊಡಿರಿ, ಅದನ್ನು ಅನುಭವಿಸಿರಿ. ಬನ್ನಿರಿ, ಅವರಿಗೆ ಸಹಾಯ ಮಾಡುವವರಾಗಿರಿ. ನೆನಪಿಡಿರಿ, ಅಲ್ಲಾಹನು ಅವರಿಗೆ ವಿಜಯದ ವಾಗ್ದಾನ ಮಾಡಿರುವನು. ನೀವು ಇದರೆಡೆಗೆ ಬಾರದಿದ್ದರೆ ನಿಮ್ಮ ತಲೆಮಾರು ಖಂಡಿತವಾಗಿಯೂ ಈ ಅನುಗ್ರಹದ ಒಸರಿನೆಡೆಗೆ ಬರುವುದು. ಅಂದು ಅವರು ದುಃಖಿಸುತ್ತಾ ಹೇಳುವರು: ಅಹೋ ಕಷ್ಟ, ನಮ್ಮ ಪೂರ್ವಿಕರು ಪೈಗಂಬರರು(ಸ) ಭವಿಷ್ಯ ನುಡಿದ ಆ ಮಸೀಹ್ ಮಹ್‌ದಿಗೆ ಸಹಾಯ ನೀಡುವವರೂ ಅವರ ಜಮಾಅತಿನಲ್ಲಿ ಸೇರುವವರೂ ಆಗಿದ್ದರೆ ಎಷ್ಟು ಚೆನ್ನಾಗಿತ್ತು!

ಈ ವಾಸ್ತವಾಂಶವನ್ನು ಮನವರಿಕೆ ಮಾಡಲು ಅಲ್ಲಾಹನು ನಿಮ್ಮನ್ನು ಅನುಗ್ರಹಿಸಲಿ. ಅಲ್ಲಾಹನು ನಮ್ಮ ಈ ವಿನೀತ ಪ್ರಾರ್ಥನೆಯನ್ನು ಸ್ವೀಕರಿಸಲಿ.

(ಭಾಷಾಂತರ: ಮುಹಮ್ಮದ್ ಯೂಸುಫ್)

❖

# ಜಿಹಾದ್ ಎಂದರೇನು?

✍: ಬಿಲಾಲ್ ಅಟ್‌ಕಿನ್‌ಸನ್

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: "ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನಪಡುತ್ತಾರೋ, ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. ನಿಶ್ಚಯವಾಗಿಯೂ ಅಲ್ಲಾಹನು ಸತ್ಕರ್ಮಿಗಳ ಜೊತೆಯಲ್ಲಿರುತ್ತಾನೆ." (29 : 70)

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಜಿಹಾದ್ ಎಂಬ ಅರಬಿ ಪದವನ್ನು ಬಳಸಲಾಗಿದೆ. ಇದನ್ನು "ಅತ್ಯಂತ ಪ್ರಯತ್ನಪಡು" ಎಂದು ಭಾಷಾಂತರಿಸಲಾಗಿದೆ. ಜಿಹಾದ್ ಎಂಬ ಪದವು ಚಿಕ್ಕದಾಗಿದ್ದರೂ ಅದು ಇಸ್ಲಾಮೀ ಸಮುದಾಯದಲ್ಲಿ ಸಾಮೂಹಿಕವಾಗಿ ಬಹಳ ಪ್ರಭಾವವನ್ನು ಬೀರುತ್ತದೆ. ಮಾತ್ರವಲ್ಲ, ಮುಸ್ಲಿಮನೊಬ್ಬನ ದೈನಂದಿನ ವೈಯುಕ್ತಿಕ ಜೀವಿತದಲ್ಲೂ ಅದು ವಿಶಿಷ್ಟ ಪ್ರಭಾವ ಹೊಂದಿರುತ್ತದೆ.

ಇಸ್ಲಾಮ್ ಧರ್ಮವು ಪ್ರತಿಪಾದಿಸುವ ಜಿಹಾದ್ ಎಂಬ ಪರಿಕಲ್ಪನೆಯು ಕೊಲ್ಲುವುದು ಮತ್ತು ಕೊಲ್ಲಲ್ಪಡುವುದಕ್ಕೆ ಸೀಮಿತವಾಗಿರದೆ ಅದರ ಅರ್ಥ ದೇವನ ಪ್ರೀತಿಯನ್ನು ಗಳಿಸಲಿಕ್ಕಾಗಿ ಕಠಿಣ ಪ್ರಯತ್ನ ಮಾಡುವುದು ಎಂದಾಗಿದೆ. ಆತ್ಮೋನ್ನತಿಗಾಗಿ ವ್ಯಕ್ತಿಗಳು ಮತ್ತು ಸಮುದಾಯ ಜೊತೆಗೂಡಿ ಕಠಿಣವಾಗಿ ಪ್ರಯತ್ನಿಸುವುದು ಎಂದರೆ ಜಿಹಾದ್ ಮಾಡುವುದು ಆವಶ್ಯಕವಾಗಿದೆ. ನಾವು ಜಗಳ ಮಾಡಲು ಮತ್ತು ಯುದ್ಧಕ್ಕಾಗಿ ಸದಾ ಸನ್ನದ್ಧರಾಗಿರುವೆವು ಎಂಬ ಅರ್ಥ ಈ ಪದಕ್ಕೆ ನೀಡಲು ಎಂದೂ ಸಾಧ್ಯವಿಲ್ಲ.

ಹೀಗೆ ಅರ್ಥೈಸುವುದು ಸತ್ಯಾಂಶಕ್ಕೆ ಮತ್ತು ವಾಸ್ತವಿಕತೆಗೆ ವಿರುದ್ಧವಾಗಿದೆ. ಇಸ್ಲಾಮ್ ಎಂಬ ಪದದ ಅರ್ಥ ಶಾಂತಿ ಎಂದಾಗಿದೆ. ಆದುದರಿಂದ ನಮ್ಮ ಪ್ರಯತ್ನಗಳನ್ನು ಮತ್ತು ಶಕ್ತಿಗಳನ್ನು ನಮ್ಮೊಳಗೆ ಆಂತರಿಕ ಶಾಂತಿ ಸ್ಥಾಪಿಸಲು, ನಮ್ಮ ಸಮುದಾಯದಲ್ಲಿ ಮತ್ತು ನಾವಿರುವ ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಬಳಸಬೇಕು.

ಆಕ್ಸ್‌ಫರ್ಡ್ ಇಂಗ್ಲಿಷ್ ರೆಫರೆನ್ಸ್ ಡಿಕ್ಷನರಿ (1995) ಜಿಹಾದ್ ಪದಕ್ಕೆ ನೀಡಿದ ಅರ್ಥ "ಪವಿತ್ರ ಯುದ್ಧ" ಎಂದಾಗಿದೆ. ಅದು ನೀಡಿದ ಇನ್ನೊಂದು ತಪ್ಪು ವಿವರಣೆ ಹೀಗಿದೆ: "ಬಾಹ್ಯ ಬೆದರಿಕೆಗಳ ವಿರುದ್ಧ ಇಸ್ಲಾಮನ್ನು ಸಂರಕ್ಷಿಸಲು ಅಥವಾ ಮುಸ್ಲಿಮೇತರರ ಮಧ್ಯೆ ಧರ್ಮ ಪ್ರಚಾರ ಮಾಡಲು ಜಿಹಾದ್ ಮಾಡಬಹುದು."

"ಪವಿತ್ರ" ಮತ್ತು "ಯುದ್ಧ" ಎಂಬ ಪದಗಳು ಪರಸ್ಪರ ಜೋಡಣೆಗೊಳ್ಳುವಂಥವುಗಳಲ್ಲ. ವಾಸ್ತವಿಕವಾಗಿ ಅವು ಪರಸ್ಪರ ವಿರುದ್ಧವಾಗಿರುವ ಪದಗಳಾಗಿವೆ. ಯುದ್ಧದ ಪರಿಣಾಮಗಳಲ್ಲಿ ಮತ್ತು ಭೀಕರತೆಯಲ್ಲಿ ಪವಿತ್ರತೆ ಏನೂ ಇರುವುದಿಲ್ಲ.

ಇಂದಿನ ಕಾಲದಲ್ಲಿ ಪಾಶ್ಚಿಮಾತ್ಯ ದೇಶಗಳು ಮತ್ತು ವಿಶಿಷ್ಟವಾಗಿ ಅವರ ಸಂಪರ್ಕ ಮಾಧ್ಯಮಗಳು 'ಜಿಹಾದ್' ಪದಕ್ಕೆ ದುರ್ವ್ಯಾಖ್ಯಾನ ನೀಡುತ್ತಿರುವುದು ಬಹಳ ದುರದೃಷ್ಟಕರವಾಗಿದೆ. ಒಂದು ರೀತಿಯಲ್ಲಿ ಇದನ್ನು ಹೀಗೆ ವಿವರಿಸಬಹುದು: ಕಳೆದ ಸಾವಿರ ವರ್ಷಗಳ ಕಾಲಾವಧಿಯಲ್ಲಿ ಕೆಲವು ಮುಸ್ಲಿಮ್ ಉಗ್ರವಾದಿ ಗುಂಪುಗಳು ಮತ್ತು ಅವರ ನಾಯಕರು ಜಿಹಾದ್ ಪದಕ್ಕೆ ಪವಿತ್ರಯುದ್ಧ ಎಂದು ಅರ್ಥ ಹೇಳಿ ಅವರು ಯುದ್ಧಗಳನ್ನು ರಾಜಕೀಯ, ಆರ್ಥಿಕ ಅಥವಾ ರಾಜ್ಯ ವಿಸ್ತರಣೆಯ ಉದ್ದೇಶದಿಂದ ಮಾಡಿದರೂ ಆ ಎಲ್ಲಾ ಯುದ್ಧಗಳನ್ನು ಜಿಹಾದ್ ಎಂದು ಹೆಸರಿಸಿದರು. ಅವರು ನೀಡಿದ ಅಪಾರ್ಥದ ಕಾರಣದಿಂದ ಇಸ್ಲಾಮ್ ಧರ್ಮವು ಮತಪರಿವರ್ತನೆಗಾಗಿ ಬಲಾತ್ಕಾರವನ್ನು ಬಳಸುತ್ತದೆ ಎಂದು ತಪ್ಪಾಗಿ ಆಕ್ಷೇಪಿಸಲ್ಪಡಲು ಹೇತುವಾಯಿತು.

ಪವಿತ್ರ ಖುರ್‌ಆನ್ ಪ್ರಕಾರ ಜಿಹಾದ್ ಪದಕ್ಕೆ ಎರಡು ಅರ್ಥಗಳಿವೆ. ಒಂದನೆಯದು "ಜಿಹಾದ್ ಫೀ ಸಬೀಲಿಲ್ಲಾಹ್" - ಅಲ್ಲಾಹನ ಮಾರ್ಗದಲ್ಲಿ ಕಠಿಣ ಪರಿಶ್ರಮ ಮಾಡುವುದು. ಎರಡನೆಯದು "ಜಿಹಾದ್ ಫಿಲ್ಲಾಹ್"- ಅಲ್ಲಾಹನ ತೃಪ್ತಿಗಳಿಸಲು ಮಾಡುವ ಕಠಿಣ ಪರಿಶ್ರಮ.

'ಜಿಹಾದ್ ಫೀ ಸಬೀಲಿಲ್ಲಾಹ್' ಎಂದರೆ ಇಸ್ಲಾಮ್ ಧರ್ಮವನ್ನು ನಾಶ ಮಾಡಲು ಪ್ರಯತ್ನಿಸುವ ಸತ್ಯದ ಶತ್ರುಗಳ ವಿರುದ್ಧ ಮಾಡುವ ಪ್ರತಿರೋಧಕ ಯುದ್ಧ. 'ಜಿಹಾದ್ ಫಿಲ್ಲಾಹ್' ಎಂದರೆ ಅಲ್ಲಾಹನ ಪ್ರೀತಿ ಮತ್ತು ಸಾಮೀಪ್ಯವನ್ನು ಗಳಿಸಲು ಮಾಡುವ ಕಠಿಣ ಪರಿಶ್ರಮ. ಇದು ಆಧ್ಯಾತ್ಮಿಕ ಉನ್ನತಿ ಗಳಿಸಲು ಮಾಡುವ ಆರಾಧನೆಗಳಿಗೆ ಸಂಬಂಧಿಸಿದ್ದು, ಮೊದಲನೆಯದಕ್ಕಿಂತ ಮಹತ್ತರವಾಗಿದೆ.

## ಜಿಹಾದ್ ಮೂರು ವಿಧಗಳು

1. ಮನುಷ್ಯನ ಕೆಟ್ಟ ಆಶಾಭಿಲಾಷೆಗಳ ವಿರುದ್ಧ ಹೋರಾಡುವುದು, ಆತ್ಮ ಸಂಯಮನವನ್ನು ಸಾಧಿಸಲು ಪ್ರಯತ್ನಿಸುವುದು.
2. ಲೇಖನ, ಭಾಷಣ ಮತ್ತು ಧನ ವಿನಿಯೋಗ ಮೂಲಕ ಇಸ್ಲಾಮ್ ಧರ್ಮದ ಸತ್ಯ ಮತ್ತು ಸೌಂದರ್ಯವನ್ನು ಮುಸ್ಲಿಮೇತರರಿಗೆ ಪರಿಚಯ ಮಾಡಿಕೊಡಲು ಕಠಿಣವಾಗಿ ಪ್ರಯತ್ನಿಸುವುದು.
3. ಆತ್ಮ ರಕ್ಷಣೆಗಾಗಿ ಸತ್ಯದ ಶತ್ರುಗಳ ವಿರುದ್ಧ ಯುದ್ಧ ಮಾಡುವುದು.

ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ರವರು ಮೇಲೆ ವಿವರಿಸಿದ ಪ್ರಾರಂಭದ ಎರಡು ವಿಧಗಳ ಜಿಹಾದನ್ನು ಜಿಹಾದುಲ್ ಅಕ್‌ಬರ್ (ದೊಡ್ಡ ಜಿಹಾದ್) ಎಂದೂ ಮೂರನೆಯ ವಿಧದ ಜಿಹಾದನ್ನು ಜಿಹಾದುಲ್ ಅಸ್‌ಗರ್ (ಚಿಕ್ಕ ಜಿಹಾದ್) ಎಂದೂ ಹೆಸರಿಸಿರುವರು. ಅವರು ಒಂದು ಯುದ್ಧ ಸಮಾಪ್ತಿಯ ನಂತರ ಹಿಂದಿರುಗುವಾಗ ಹೀಗೆ ಹೇಳಿದರು: "ನೀವು ಚಿಕ್ಕ ಜಿಹಾದ್(ಇಸ್ಲಾಮ್ ಧರ್ಮದ ವಿರೋಧಿಗಳ ವಿರುದ್ಧ ಮಾಡಿದ ಯುದ್ಧ)ದಿಂದ ದೊಡ್ಡ ಜಿಹಾದ್ (ಕೀಳು ಆಶಾಭಿಲಾಷೆಗಳ ವಿರುದ್ಧ ಮಾಡುವ ಯುದ್ಧ) ಕಡೆಗೆ ಮರಳಿರುವಿರಿ."

ಜಿಹಾದುಲ್ ಅಸ್‌ಗರ್ ಎಂದರೆ ಚಿಕ್ಕ ಜಿಹಾದ್ ಕುರಿತು ನಾವು ಮೊದಲು ವಿವರಿಸುವೆವು. ಅನಂತರ ಜಿಹಾದುಲ್ ಅಕ್‌ಬರ್ (ದೊಡ್ಡ ಜಿಹಾದ್) ಕುರಿತು ಹೇಳುವೆವು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನಲ್ವತ್ತು ವರ್ಷ ಪ್ರಾಯದವರಾದಾಗ ದೈವಿಕ ಕರೆಯು ಅವರಿಗೆ ಲಭಿಸಿತು. ಅವರಿಗೆ ಮೊತ್ತ ಮೊದಲು ಅವತೀರ್ಣವಾದ ಪವಿತ್ರ ಖುರ್‌ಆನ್ ವಚನಗಳು ಇವುಗಳಾಗಿವೆ:

"(ಸರ್ವವನ್ನೂ) ಸೃಷ್ಟಿಸಿದ ನಿನ್ನ ಪ್ರಭುವಿನ ನಾಮದಿಂದ ಪಠಿಸು. ಅವನು ಮನುಷ್ಯನನ್ನು (ಗರ್ಭಾಶಯದಲ್ಲಿ) ಅಂಟಿಕೊಳ್ಳುವ ಮಾಂಸ ಪಿಂಡದಿಂದ ಸೃಷ್ಟಿಸಿದನು. ಪಠಿಸು; ನಿನ್ನ ಪ್ರಭು ಅತಿ ಕೀರ್ತಿವಂತನಾಗಿದ್ದಾನೆ. (ಅವನು) ಲೇಖನಿಯಿಂದ ಕಲಿಸಿದನು. ಮನುಷ್ಯನಿಗೆ ತಿಳಿಯದಿದ್ದುದನ್ನು ಅವನಿಗೆ (ಮನುಷ್ಯನಿಗೆ) ಕಲಿಸಿದನು." (96 : 2-6)

ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ದೊರೆತ ಪ್ರಥಮ ಉಪದೇಶ: ಇಸ್ಲಾಮಿನ ಸಂದೇಶವನ್ನು ಮೌಖಿಕವಾಗಿ ಮತ್ತು ಲೇಖನಗಳ ಮೂಲಕ

ತಲುಪಿಸಬೇಕು. ಯಾವುದೇ ರೀತಿಯ ಶಕ್ತಿ ಪ್ರಯೋಗವನ್ನು - ಖಡ್ಗ ಅಥವಾ ಬೇರೆ ಯಾವುದಾದರೂ ಆಯುಧಗಳನ್ನು ಬಳಸಿ ಬಲಾತ್ಕಾರ ಮಾಡುವುದನ್ನು ಇಲ್ಲಿ ಪ್ರತಿಪಾದಿಸಿಲ್ಲ.

ಪರಿಸರ, ಒಂದು ಎಂಬರ್ಥದ ಪದವನ್ನು ಪ್ರಥಮವಾಗಿ ಬಳಸಿರುವುದು ಇಸ್ಲಾಮ್ ಧರ್ಮದ ಸಂದೇಶವನ್ನು ಮೌಖಿಕವಾಗಿ ತಲಪಿಸಬೇಕೆಂದೂ ಲೋಕದಾದ್ಯಂತ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಪ್ರಚಾರಗೊಳಿಸಬೇಕೆಂದೂ ಉದ್ದೇಶಿಸಿ ಆಗಿದೆ.

ತನಗೆ ಅವತೀರ್ಣವಾದ ದೈವಿಕ ಸಂದೇಶವನ್ನು ಬಹಿರಂಗವಾಗಿ ಜನರಿಗೆ ಪ್ರಕಟಿಸಬೇಕೆಂದು ಆಜ್ಞಾಪಿಸಲ್ಪಟ್ಟ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮಕ್ಕದ ನಿವಾಸಿಗಳಿಗೆ ಸಂದೇಶವನ್ನು ತಲಪಿಸಿದಾಗ ವಿರೋಧವನ್ನೂ ಪರಿಹಾಸವನ್ನೂ ಎದುರಿಸಬೇಕಾಯಿತು. ಆರಂಭದಲ್ಲಿ ಕೇವಲ ನಾಲ್ವರು ಅವರಿಗೆ ನಿಷ್ಠೆಯನ್ನು ಪ್ರಕಟಿಸಿದರು. ಈ ವಿಷಯ ಮಕ್ಕದ ಜನರಿಗೆ ತಿಳಿದಾಗ ಅವರು ನಕ್ಕು ಪರಿಹಾಸ ಮಾಡಿದರು. ಪವಿತ್ರ ಖುರ್‌ಆನಿನ ಇನ್ನಷ್ಟು ವಚನಗಳು ಅವತೀರ್ಣಗೊಂಡಾಗ ಹೆಚ್ಚು ಜನರು ಅದರ ಬಗ್ಗೆ ಆಸಕ್ತಿ ಹೊಂದಿ ಅದರ ಕಡೆಗೆ ಆಕರ್ಷಿತರಾದರು. ಅವರಲ್ಲಿ ಬಹುತೇಕ ಮಂದಿ ವಿಶಿಷ್ಟವಾಗಿ ಯುವಕರು, ಬಲಹೀನರು ಮತ್ತು ಮಕ್ಕದ ಸಮಾಜದ ದೌರ್ಜನ್ಯ ಪೀಡಿತರು ಆಗಿದ್ದರು. ಮಹಿಳೆಯರಿಗೆ ತಮ್ಮ ಪಿತ, ಪತಿ, ಪುತ್ರರ ಮಧ್ಯದಲ್ಲಿ ಗೌರವದ ಸ್ಥಾನ ಲಭಿಸಿದ ಕಾರಣ ಅವರು ವಿಶಿಷ್ಟವಾಗಿ ಆ ಸಂದೇಶದ ಕಡೆಗೆ ಆಕರ್ಷಿಸಲ್ಪಟ್ಟರು. ಅದರ ಮೊದಲು ಅವರೊಂದಿಗೆ ಮೃಗಗಳಿಗಿಂತಲೂ ಕೀಳಾಗಿ ವರ್ತಿಸಲಾಗುತ್ತಿತ್ತು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಯಾಯಿಗಳು ಹೆಚ್ಚುತ್ತಾ ಹೋದಾಗ ಅವರ ಮತ್ತು ಅವರ ಅನುಯಾಯಿಗಳ ವಿರುದ್ಧ ಶತ್ರುಗಳ ಪ್ರತಿಕ್ರಿಯೆಯು ತೀವ್ರ ಸ್ವರೂಪ ಪಡೆಯಿತು. ಮಕ್ಕದ ಜನರು ಹಿಂಸಾಚಾರವನ್ನು ಪ್ರಾರಂಭಿಸಿದರು ಮತ್ತು ದಿನಗಳೆದಂತೆ ಅವರ ಹಿಂಸಾತ್ಮಕ ಪ್ರವೃತ್ತಿಗಳು ಹೆಚ್ಚು ಕ್ರೂರವೂ ಹೆಚ್ಚು ಅನಾಗರಿಕರವೂ ಆಗತೊಡಗಿದವು. ಹೊಸ ಧರ್ಮವು ಸ್ಥಾಪಿತವಾಗಿ ತಮ್ಮ ಧರ್ಮ ಮತ್ತು ಸಂಸ್ಕೃತಿ ನಾಶವಾಗುವುದೆಂದು ಅವರು ಭಯಭೀತರಾಗಿದ್ದರು. ಈ ಭೀತಿಯ ಕಾರಣದಿಂದ ಅವಿಶ್ವಾಸಿಗಳಾದ ಮಕ್ಕ ನಗರದ ನಿವಾಸಿಗಳು ಖಡ್ಗವೆತ್ತಿ ಸತ್ಯವಿಶ್ವಾಸಿಗಳನ್ನು ಕೊಲ್ಲುವುದರಲ್ಲಿ ಆನಂದವನ್ನು ಹೊಂದಿದರು. ಅವರು ತಮ್ಮ ಹಿಂಸಾಚಾರವನ್ನು ದೀರ್ಘಕಾಲ ಮುಂದುವರಿಸಿದರು. ಮಕ್ಕದ ಮಾರ್ಗಗಳು ಮುಸ್ಲಿಮರ ರಕ್ತ ಸಿಂಚನದ ಕಾರಣದಿಂದ ಕೆಂಪಗಾಯಿತು. ಆದರೆ ಮುಸ್ಲಿಮರು ಯಾವುದೇ ಪ್ರತೀಕಾರ ಮಾಡಲಿಲ್ಲ. ಅವರ ದೈನ್ಯತೆ ಮತ್ತು ಅವರ ಸ್ಥಿರತೆ ಹಿಂಸಕರನ್ನು ಹೆಚ್ಚು ಕ್ರೂರಿಗಳಾಗಲು ಉತ್ತೇಜಿಸಿದವು ಮತ್ತು ಅವರು ಹಿಂಸೆಯನ್ನು ಉಗ್ರರೂಪದಲ್ಲಿ ಮುಂದುವರಿಸಿದರು. ಕೆಲವು ತಂದೆ ತಾಯಂದಿರ ಮುಂದೆಯೇ ಅವರ ಮಕ್ಕಳನ್ನು ಹತ್ಯೆ ಮಾಡಲಾಯಿತು. ಕೆಲವು ತಂದೆ ತಾಯಂದಿರನ್ನು ಅವರ ಮಕ್ಕಳ ಮುಂದೆಯೇ ಕೊಲ್ಲಲಾಯಿತು.

ಯಾವುದೇ ಶಕ್ತಿ ಅಥವಾ ಸಂಪತ್ತನ್ನು ಹೊಂದಿರದಿದ್ದರೂ ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಈ ಜನರು ಅಂಗೀಕರಿಸುವಂತೆ ಮಾಡಿದುದರ ಕಾರಣವಾದರೂ ಏನು? ತನ್ನ ಸಂದೇಶವನ್ನು ಅಂಗೀಕರಿಸಬೇಕೆಂದು ಅವರು ಖಡ್ಗ ಹಿರಿದು ಬಲಾತ್ಕಾರವನ್ನೇನೂ ಮಾಡಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕೈಯಲ್ಲಿ ಇದ್ದ 'ಖಡ್ಗ' ಪವಿತ್ರ ಖುರ್‌ಆನ್ ಮಾತ್ರವಾಗಿತ್ತು. ಅದು ಆಧ್ಯಾತ್ಮಿಕ ಖಡ್ಗವಾಗಿತ್ತು. ಅದು ಸತ್ಯವೆಂಬ ಖಡ್ಗವಾಗಿತ್ತು. ಅದು ಅವಿಶ್ವಾಸಿಗಳ ಹೃದಯಗಳನ್ನು ಯಾವುದೇ ಬಲಾತ್ಕಾರವಿಲ್ಲದೆ ಸಹಜವಾಗಿಯೇ ಬದಲಾಯಿಸಿತು. ಇಸ್ಲಾಮ್ ಧರ್ಮ ಮತ್ತು ಅದನ್ನು ಪ್ರಚಾರ ಮಾಡುತ್ತಾ ಸ್ವತಃ ಅನುಷ್ಠಾನಕ್ಕೆ ತಂದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸೌಂದರ್ಯ, ವೈಭವ ಮತ್ತು ಕಾಂತೀಯ ಆಕರ್ಷಕ ಶಕ್ತಿ ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ ಒಳಿತನ್ನೂ ಪ್ರೀತಿಯನ್ನೂ ಸ್ರವಿಸುತ್ತಿದ್ದ ಅವರಿಂದ ಪ್ರಭಾವಿತರಾಗಿ ಅನುಯಾಯಿಗಳು ಸ್ವಂತ ಇಚ್ಛೆಯಿಂದ ತಮ್ಮ ಜೀವಗಳನ್ನು ಅವರಿಗಾಗಿ ಅರ್ಪಿಸಿದರು.

ಮುಸ್ಲಿಮರ ವಿರುದ್ಧ ಖಡ್ಗವೆತ್ತಿ ಅವರನ್ನು ತಮ್ಮ ಹಳೆಯ ಧರ್ಮಕ್ಕೆ ಮತ್ತು ಸಂಸ್ಕೃತಿಗೆ ಮರಳಲು ಬಲಾತ್ಕಾರ ಮಾಡಿದವರು ಮುಸ್ಲಿಮೇತರರು ಮತ್ತು ವಿಶಿಷ್ಟವಾಗಿ ಮಕ್ಕದ ಅವಿಶ್ವಾಸಿಗಳಾಗಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮದೀನಕ್ಕೆ ವಲಸೆ ಹೋದ ನಂತರ ಖುರೈಶಿ ಗೋತ್ರದ ಅವಿಶ್ವಾಸಿಗಳು ಮಾಡುತ್ತಿದ್ದ ಹಿಂಸಾಚಾರಗಳು ಮಿತಿ ಮೀರಿದವು. ಮಕ್ಕದಲ್ಲಿ ಬಾಕಿಯಾಗಿ ಉಳಿದಿದ್ದ ಅಸಹಾಯಕರಾದ ಮುಸ್ಲಿಮ್ ಮಹಿಳೆಯರನ್ನೂ ಅನಾಥ ಮಕ್ಕಳನ್ನೂ ಕೊಲ್ಲಲು ಅವರು ಆರಂಭಿಸಿದರು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮತ್ತು ಅವರ ಅನೇಕ ಶಿಷ್ಯರು ಮದೀನಕ್ಕೆ ವಲಸೆ ಹೋಗಿದ್ದರೂ ಅವರನ್ನು ಸಹ ನೆಮ್ಮದಿಯಿಂದಿರಲು ಮಕ್ಕದ ಅವಿಶ್ವಾಸಿಗಳು ಬಿಡಲಿಲ್ಲ. ಅವರಿಗೆ ಅಲ್ಲಿ ಸಹ ನಿರಂತರವಾಗಿ ಕಿರುಕುಳ ಕೊಡಲಾಯಿತು.

ಇಸ್ಲಾಮ್ ಧರ್ಮವು ಎಲ್ಲಾ ಕಡೆಗಳಿಂದಲೂ ಶತ್ರುಗಳಿಂದ ಸುತ್ತುವರಿಯಲ್ಪಟ್ಟು ಅದು ಸಂಪೂರ್ಣವಾಗಿ ನಾಶವಾಗುವ ಬೆದರಿಕೆ ಉಂಟಾಯಿತು. ಇಂತಹ ಸಂದರ್ಭದಲ್ಲಿ ಕಿರು ಜಿಹಾದ್ ಕುರಿತು ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅವತೀರ್ಣಗೊಳಿಸಲ್ಪಟ್ಟಿತು:

"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ (ಪ್ರತಿಯುದ್ಧ ಮಾಡುವ) ಅನುಮತಿ ಇದೆ; ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ." (22 : 40)

ಆತ್ಮರಕ್ಷಣೆಗಾಗಿ ಖಡ್ಗವನ್ನೆತ್ತಲು ಮುಸ್ಲಿಮರಿಗೆ ಅನುಮತಿ ನೀಡಿದ ಪ್ರಥಮ ವಚನ ಇದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಮುಸ್ಲಿಮರು ಆತ್ಮರಕ್ಷಣೆಗಾಗಿ ಮಾಡಬಹುದಾದ ಯುದ್ಧದ ಕುರಿತು ಅದು ನೀತಿ ಸೂತ್ರಗಳನ್ನು ರೂಪಿಸುತ್ತದೆ. ಮುಸ್ಲಿಮರು ಆತ್ಮರಕ್ಷಣೆಗಾಗಿ ಖಡ್ಗವೆತ್ತಲು ಅನುಮತಿಸಲ್ಪಟ್ಟ ಕಾರಣಗಳನ್ನು ಅದು ಸ್ಪಷ್ಟವಾಗಿ ಸೂಚಿಸುತ್ತದೆ. ಮಕ್ಕದಲ್ಲಿ ಮುಸ್ಲಿಮರು ನಿರಂತರವಾಗಿ ಹಿಂಸಾಚಾರಗಳಿಗೆ ಪಾತ್ರರಾದರೂ ಅವರು ಸಹಿಷ್ಣುತೆಯನ್ನು ಪಾಲಿಸುತ್ತಾ ಬಂದರು. ಅವರು ಮದೀನಕ್ಕೆ ವಲಸೆ ಹೋದಾಗ ಅವರನ್ನು ಶತ್ರುಗಳು ಬೆನ್ನಟ್ಟಿ ದ್ವೇಷ ಭರಿತರಾಗಿ ನಿರಂತರವಾಗಿ ಕಿರುಕುಳ ಮುಂದುವರಿಸಿದರು. ಇದೇ ಕಾರಣದಿಂದ ಶತ್ರುಗಳ ವಿರುದ್ಧ ಖಡ್ಗವೆತ್ತಲು ಅನುಮತಿಯನ್ನು ಅಲ್ಲಾಹನು ನೀಡಿದನು.

ಮುಸ್ಲಿಮರು ಆಕ್ರಮಣಕ್ಕೊಳಗಾದ ಕಾರಣದಿಂದ ಅವರಿಗೆ ಶತ್ರುಗಳ ವಿರುದ್ಧ ಖಡ್ಗವೆತ್ತಲು ಅನುಮತಿಸಲಾಯಿತು. ಅವರು ಅತ್ಯಂತ ಹಿಂಸಾಚಾರಗಳಿಗೆ ಗುರಿಯಾಗಿದ್ದರು ಮತ್ತು ಯುದ್ಧ ಮಾಡಲು ಅವರು ನಿರ್ಬಂಧಿತರಾದರು.

ಪವಿತ್ರ ಖುರ್‌ಆನಿನ ಮುಂದಿನ ವಚನ ಇದನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ:

"'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ." (22 : 41)

ಮುಸ್ಲಿಮರ ಮೇಲೆ ಮೊದಲು ಆಕ್ರಮಣ ಮಾಡುವವರ ವಿರುದ್ಧ ಮಾತ್ರ ಈ ರೀತಿಯ ಜಿಹಾದ್ (ಯುದ್ಧ) ನಡೆಸಲು ಅನುಮತಿಸಲಾಗಿದೆ ಎಂದು ಈ ವಚನ ಸ್ಪಷ್ಟಪಡಿಸುತ್ತದೆ. ಪವಿತ್ರ ಖುರ್‌ಆನ್‌ನಲ್ಲಿರುವ ಬೇರೆ ವಚನಗಳು ಇದನ್ನು ಬೆಂಬಲಿಸುತ್ತವೆ. ಮುಸ್ಲಿಮರು ದೌರ್ಜನ್ಯಕ್ಕೆ ಗುರಿಯಾಗಿದ್ದಲ್ಲಿ ಮಾತ್ರ ತಮ್ಮನ್ನು ಆಕ್ರಮಣ ಮಾಡಿದವರ ವಿರುದ್ಧ ಯುದ್ಧ ಮಾಡಬಹುದು. ಇಸ್ಲಾಮ್ ಪ್ರತಿಪಾದಿಸುವ ಜಿಹಾದಿನ ಸಾರಾಂಶ ಇದೇ ಆಗಿದೆ. ಇದನ್ನು ದ್ವೇಷದಿಂದ ಅಪಾರ್ಥ ಮಾಡಲಾಗುತ್ತಿದೆ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಜನರಿಗೆ ಮತಪರಿವರ್ತನೆ ಮತ್ತು ಹತ್ಯೆ ಇವುಗಳಲ್ಲಿ ಒಂದನ್ನು ಹಾಗೂ ಇಸ್ಲಾಮ್ ಮತ್ತು ಖಡ್ಗ ಇವುಗಳಲ್ಲೊಂದನ್ನು ಆಯ್ಕೆ ಮಾಡಲು ಹೇಳಿದರೆಂದು ವಾದಿಸುವುದು ಸಂಪೂರ್ಣ ತಪ್ಪು ಆಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮತ್ತು ಆದಿ ಕಾಲೀನ ಮುಸ್ಲಿಮರು ಇಸ್ಲಾಮ್ ಧರ್ಮದ ಬೆಳವಣಿಗೆಯ ದಾಟಿಹೋದ ಒಂದು ಕಾಲಘಟ್ಟದಲ್ಲಿ ಅಂದಿನ ವಿಶಿಷ್ಟ ಸಂದರ್ಭದಲ್ಲಿ ಇಸ್ಲಾಮಿನ ಅಸ್ತಿತ್ವವನ್ನು ಸ್ಥಾಪಿಸಲು ಖಡ್ಗವನ್ನು ಎತ್ತಿಕೊಳ್ಳಬೇಕಾಯಿತು. ಇಸ್ಲಾಮ್ ಧರ್ಮವನ್ನು ಖಡ್ಗದ ಮೂಲಕ ನಾಶ ಮಾಡಲು ಬಯಸಿದವರು ಖಡ್ಗದಿಂದಲೇ ಹತರಾದರು. ಒಂದು ದೇಶ ಅಥವಾ ಜನತೆ ಇಸ್ಲಾಮ್ ಧರ್ಮವನ್ನು ನಾಶ ಮಾಡಲು ಮುಸ್ಲಿಮರ ವಿರುದ್ಧ ಯುದ್ಧ ಮಾಡುವುದಾದರೆ ಅವರನ್ನು ಎದುರಿಸಲು ಮುಸ್ಲಿಮರು ಮಾಡುವ ಪ್ರತಿರೋಧಕ ಯುದ್ಧವು ಜಿಹಾದ್ ಎಂದು ಕರೆಯಲ್ಪಡಲು ಅರ್ಹವಾಗುವುದೇ ಹೊರತು ಬೇರೆ ಕಾರಣಗಳಿಂದ ಮುಸ್ಲಿಮರು ಮಾಡುವ ಯುದ್ಧವು ಜಿಹಾದ್ ಎಂದು ಕರೆಯಲು ಅರ್ಹವಾಗದು.

ಮುಸ್ಲಿಮರು ಆಯುಧಗಳನ್ನು ಕೈಗೆತ್ತಿಕೊಂಡು ಯಾರನ್ನಾದರೂ ಮನೆಗಳಿಂದ ಹೊರ ಹಾಕಲು, ಅವರ ಸ್ವತ್ತನ್ನು ಅಪಹರಿಸಲು ಅಥವಾ ಅವರ ಸ್ವಾತಂತ್ರ್ಯವನ್ನು ಹರಣಮಾಡುವ ಉದ್ದೇಶದಿಂದಾಗಿರಲಿಲ್ಲ. ಅದು ಇಸ್ಲಾಮ್ ಧರ್ಮವನ್ನು ನಾಶ ಮಾಡಲು ಹೊರಟವರನ್ನು ತಡೆಗಟ್ಟಲು, ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ಮತ್ತು ಅಭಿಪ್ರಾಯ ಸ್ವಾತಂತ್ರ್ಯವನ್ನು ಸ್ಥಾಪಿಸಲು, ಅನ್ಯ ಧರ್ಮೀಯರ ಆರಾಧನಾಲಯಗಳನ್ನು ನಾಶದಿಂದ ಮತ್ತು ಅಪವಿತ್ರಗೊಳಿಸುವಿಕೆಯಿಂದ ರಕ್ಷಿಸುವ ಉದ್ದೇಶದಿಂದ ಮಾತ್ರವಾಗಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇಸ್ಲಾಮ್ ಧರ್ಮದವರು ಮಾಡಿದ ಯುದ್ಧಗಳ ಮುಖ್ಯ ಉದ್ದೇಶ ಧಾರ್ಮಿಕ ವಿಶ್ವಾಸ ಮತ್ತು ಆರಾಧನೆಯ ಸ್ವಾತಂತ್ರ್ಯ ಕಾಪಾಡಲಿಕ್ಕೂ ಯಾವುದೇ ರೀತಿಯಲ್ಲಿ ಕೆಣಕದಿದ್ದರೂ ಹೋರಾಟಕ್ಕೆ ಮುಂದಾಗುವವರಿಂದ ಗೌರವ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಲಿಕ್ಕೂ ಆಗಿತ್ತು. ಮುಂದೆ ಸಹ ಇಂತಹ ಸಂದರ್ಭಗಳಲ್ಲಿ ಮಾತ್ರ ಜಿಹಾದ್ ಅನುಮತಿಸಲ್ಪಡುವುದು.

ಆದಿ ಕಾಲೀನ ಮುಸ್ಲಿಮರು ಯುದ್ಧ ಮಾಡಲು ನಿರ್ಬಂಧ ಕ್ಕೊಳಪಟ್ಟ ಕಾರಣದಿಂದ ಯುದ್ಧ ಮಾಡಬೇಕಾಯಿತು. ಅವರಿಗೆ ಬೇರೆ ಯಾವ ಆಯ್ಕೆಯೂ ಇರಲಿಲ್ಲ. ಆಕ್ರಮಣಕಾರಿ ಯುದ್ಧಗಳನ್ನು ಇಸ್ಲಾಮ್ ಧರ್ಮವು ಹಿಂದೆಯೂ ನಿಷಿದ್ಧಗೊಳಿಸಿದ್ದಿತು ಮತ್ತು ಈಗಲೂ ಅದನ್ನು ನಿಷಿದ್ಧಗೊಳಿಸುತ್ತದೆ. ಮುಸ್ಲಿಮ್ ದೇಶಗಳು ತಮ್ಮ ಶಕ್ತಿ ಮತ್ತು ಸಂಪನ್ಮೂಲಗಳನ್ನು ಸ್ವಾರ್ಥ ಮತ್ತು ಮಹತ್ವಾಕಾಂಕ್ಷೆಯ ಈಡೇರಿಕೆಗೆ ಬಳಸಬಾರದೆಂದೂ ಬಡಜನರ ಏಳಿಗೆಗಾಗಿ, ಶಾಂತಿ ಮತ್ತು ಪ್ರಗತಿಗಾಗಿ ಬಳಸಬೇಕೆಂದೂ ಇಸ್ಲಾಮ್ ಆವಶ್ಯಪಡುತ್ತಾರೆ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ತನ್ನ ಹತ್ತು ಸಾವಿರ ಅನುಯಾಯಿಗಳೊಂದಿಗೆ ಮಕ್ಕ ನಗರವನ್ನು ಜಯಶಾಲಿಯಾಗಿ ಪ್ರವೇಶಿಸಿದಾಗ ತೋರಿಸಿದ ಮಾದರಿ ವರ್ತನೆಗಿಂತ ಭವ್ಯವಾದುದು ಬೇರೊಂದಿಲ್ಲ. ಅವರು ಮಕ್ಕದ ನಿವಾಸಿಗಳೊಂದಿಗೆ ಹೀಗೆ ಹೇಳಿದರು:

"ಅಲ್ಲಾಹನು ಮಾಡಿದ ವಾಗ್ದಾನಗಳು ಹೇಗೆ ಸತ್ಯವಾಗಿ ನೆರವೇರಿದವು ಎಂದು ನೀವು ನೋಡಿರುವಿರಿ. ನಿಮ್ಮನ್ನು ಏಕದೇವಾರಾಧನೆಗೆ ಆಮಂತ್ರಿಸಿದ ಏಕಮಾತ್ರ ತಪ್ಪಿಗಾಗಿ ನೀವು ಅವರ ಮೇಲೆ ಮಾಡಿದ ಕ್ರೂರ ಹಿಂಸಾಚಾರಗಳಿಗೆ ನಿಮಗೆ ಯಾವ ಶಿಕ್ಷೆ ನೀಡಬೇಕೆಂದು ನೀವೇ ಹೇಳಿರಿ."

ಆಗ ಮಕ್ಕದ ನಿವಾಸಿಗಳು ಹೇಳಿದರು:

"ಪ್ರವಾದಿ ಯೂಸುಫ್ ತನ್ನ ತಪ್ಪುಗಾರರಾದ ಸಹೋದರರೊಂದಿಗೆ ವರ್ತಿಸಿದ ಹಾಗೆ ನೀವು ನಮ್ಮೊಂದಿಗೆ ವರ್ತಿಸುವಿರೆಂದು ನಾವು ಪ್ರತೀಕ್ಷಿಸುತ್ತೇವೆ."

ಈ ಮಾತನ್ನು ಆಲಿಸಿದ ಕೂಡಲೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೇಳಿದರು:

"ಅಲ್ಲಾಹನಾಣೆ, ನಿಮಗೆ ಯಾವ ಶಿಕ್ಷೆಯೂ ಈ ದಿನ ವಿಧಿಸಲ್ಪಡದು. ನಿಮ್ಮ ಮೇಲೆ ಯಾವ ದೋಷಾರೋಪಣೆಯೂ ಇಲ್ಲ." (ಹಿಶಾಮ್)

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಫಿತ್ನ (ಹಿಂಸಾಚಾರ) ಕೊನೆಗೊಳ್ಳುವ ತನಕ ಮತ್ತು ಧರ್ಮ (ಸ್ವೀಕಾರವು) ಸಂಪೂರ್ಣವಾಗಿ ಅಲ್ಲಾಹನಿಗೋಸ್ಕರ ಆಗುವವರೆಗೆ ನೀವು ಅವರೊಡನೆ ಹೋರಾಡಿರಿ. ಆದರೆ ಅವರು (ಹಿಂಸೆ) ತೊರೆದರೆ ಅವರ ವರ್ತನೆಯನ್ನು ಅಲ್ಲಾಹನು ಖಂಡಿತವಾಗಿಯೂ ಸೂಕ್ಷ್ಮಾವಲೋಕನ ಮಾಡುವವನಾಗಿದ್ದಾನೆ." (8 : 40)

ಹಿಂಸಾಚಾರ ಮುಂದುವರಿಯುತ್ತಿರುವಾಗ ಮಾತ್ರ ಯುದ್ಧ ಮಾಡಬಹುದೆಂದೂ ಜನರು ತಾವು ಬಯಸುವ ಧರ್ಮವನ್ನು ಅವಲಂಬಿಸಲು ಸ್ವಾತಂತ್ರ್ಯವನ್ನು ಪಡೆಯುವ ತನಕ ಅದನ್ನು ಮುಂದುವರಿಸಬಹುದೆಂದೂ ಮೇಲಿನ ವಚನ ಸೂಚಿಸುತ್ತದೆ. ಇಸ್ಲಾಮ್ ಧರ್ಮದ ಶತ್ರುಗಳು ಯುದ್ಧವನ್ನು ನಿಲ್ಲಿಸಿದರೆ ಮುಸ್ಲಿಮರೂ ಯುದ್ಧವನ್ನು ನಿಲ್ಲಿಸಬೇಕು.

ಯಾರಿಗಾದರೂ ಶಿಕ್ಷೆ ನೀಡಬಹುದಾಗಿದ್ದರೆ ಅವರಲ್ಲಿ ಅತ್ಯಂತ ಅರ್ಹರು ಮಕ್ಕದ ಜನರಾಗಿದ್ದರು. ಇಸ್ಲಾಮ್ ಧರ್ಮವು ಖಡ್ಗದಿಂದ ಪ್ರಚಾರಗೊಳಿಸಲ್ಪಟ್ಟಿತು ಎಂಬ ಆಕ್ಷೇಪ ಸತ್ಯವಾಗಿದ್ದರೆ, ಮಕ್ಕವನ್ನು ಜಯಿಸಿದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಖಡ್ಗವನ್ನು ಶಿಕ್ಷೆ ನೀಡಲು ಮತ್ತು ಬಲಾತ್ಕಾರದ ಮತಪರಿವರ್ತನೆಗೆ ಬಳಸುತ್ತಿದ್ದರು. ಮಕ್ಕದ ಜನರು ಬಲಾತ್ಕಾರದಿಂದ ಮತಪರಿವರ್ತನೆ

ಮಾಡಲ್ಪಡಲಿಲ್ಲ. ಆದರೆ ಅವರು ಪ್ರೀತಿಯ ಮೂಲಕ ಮತಪರಿವರ್ತನೆಗೆ ಆಕರ್ಷಿಸಲ್ಪಟ್ಟರು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರೀತಿ ಮತ್ತು ಪವಿತ್ರ ಖುರ್‌ಆನಿನ ವಿಮೋಚಕ, ಬೆಳಕನ್ನು ನೀಡುವ ಮತ್ತು ಪರಿಷ್ಕಾರವನ್ನುಂಟುಮಾಡುವ ಉಪದೇಶಗಳ ಪ್ರೀತಿ ಅವರನ್ನು ಇಸ್ಲಾಮ್ ಧರ್ಮವನ್ನು ಅಂಗೀಕರಿಸುವಂತೆ ಮಾಡಿತು.

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ." (2 : 257)

ಈ ವಚನ ಬಹಳ ಸ್ಪಷ್ಟ ಮತ್ತು ಬಲಯುತವಾದ ಪದಗಳನ್ನು ಬಳಸಿ ಮುಸ್ಲಿಮರು ಮುಸ್ಲಿಮೇತರರನ್ನು ಬಲಾತ್ಕಾರದಿಂದ ಇಸ್ಲಾಮ್ ಧರ್ಮಕ್ಕೆ ಸೇರಿಸಬಾರದೆಂದು ಒತ್ತಿ ಹೇಳುತ್ತದೆ. ಅದು ಬಲಪ್ರಯೋಗವು ಏಕೆ ನಿಷಿದ್ಧ ಎಂಬುದಕ್ಕೆ ಕಾರಣವನ್ನು ಸಹ ನೀಡುತ್ತದೆ: ಸತ್ಯಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ ಎಂದೂ ಬಲಪ್ರಯೋಗ ಯಾವ ರೀತಿಯಲ್ಲೂ ನ್ಯಾಯ ಸಮ್ಮತವಲ್ಲವೆಂದೂ ಅದು ಹೇಳುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಸಮಾಜ ಸುಧಾರಣೆಗಾಗಿ ಬಲಪ್ರಯೋಗ ಮಾಡಬಾರದೆಂದು ಅಲ್ಲಾಹನು ಎಚ್ಚರಿಕೆ ನೀಡಿದ್ದಾನೆ. ಅವರ ಬಾಧ್ಯಸ್ಥಿತಿ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಸ್ಪಷ್ಟಪಡಿಸಲಾಗಿದೆ:

"ಆದುದರಿಂದ ನೀನು ಉಪದೇಶಿಸು. ನೀನಾದರೋ ಕೇವಲ ಉಪದೇಶಕನಾಗಿರುವೆ. ನೀನು ಅವರ ಮೇಲೆ ಕಾವಲುಗಾರನಲ್ಲ." (88 : 22, 23)

ಆಶ್ಚರ್ಯಕರ ವಿಷಯವೇನೆಂದರೆ ಈ ವಚನ ಮಕ್ಕದಲ್ಲಿ ಪ್ರವಾದಿತ್ವದ ಆರಂಭದ ಕಾಲದಲ್ಲಿ ಅವತೀರ್ಣಗೊಂಡಿತು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮುಂದೆ ಬಹಳ ಶಕ್ತಿಗಳಿಸುವರೆಂದೂ ಆದರೆ ಅವರು ತನ್ನ ಶಕ್ತಿಯನ್ನು ಇತರರ ಮೇಲೆ ಬಲಪ್ರಯೋಗಕ್ಕಾಗಿ ಬಳಸಬಾರದೆಂದೂ ಈ ವಚನದ ಮೂಲಕ ಮುಂಚಿತವಾಗಿ ಅವರನ್ನು ಎಚ್ಚರಿಸಲಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಯಾರನ್ನೂ ಬಲಾತ್ಕಾರವಾಗಿ ಖಡ್ಗ ಮೂಲಕ ಇಸ್ಲಾಮ್ ಧರ್ಮಕ್ಕೆ ಸೇರಿಸಲಿಲ್ಲ. ಅವರ ಸಾತ್ವಿಕತೆ, ಅವರ ಪರಿಶುದ್ಧಿ, ಅವರ ಪ್ರೀತಿ ಮತ್ತು ಅಲ್ಲಾಹನ ಬಗ್ಗೆ ಅವರಿಗಿದ್ದ ಭಕ್ತಿ ಅವರ ಕಡೆಗೆ ಜನರನ್ನು ಆಕರ್ಷಿಸಿತು. ಅವರ ನಡವಳಿಕೆ ಅವರ ಶತ್ರುಗಳನ್ನು ಭಾವಪರವಶರಾಗುವಂತೆ ಮಾಡಿತು. ಅವರನ್ನು ಕೊಲ್ಲಲು ಉದ್ದೇಶಿಸಿದವರು ಕೊನೆಗೆ ಅವರ ಪಾದಕ್ಕೆ ಬಿದ್ದರು ಮತ್ತು ದೌರ್ಜನ್ಯಗಾರರಿಂದ ರಕ್ಷಿಸಲು ತಮ್ಮ ಪ್ರಾಣತ್ಯಾಗ ಮಾಡುವವರಾದರು.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮಾಡಿದ ಕೊನೆಯ ಹಜ್ಜ್ (ಹಜ್ಜ್ತುಲ್ ವಿದಾ) ಸಂದರ್ಭದಲ್ಲಿ ತನ್ನ ಬೀಳ್ಕೊಳ್ಳುವ ಭಾಷಣದಲ್ಲಿ ಹೀಗೆಂದರು:

"ಈ ತಿಂಗಳು ಪವಿತ್ರವಾಗಿರುವ ಹಾಗೆ, ಈ ನೆಲ ಪವಿತ್ರವಾಗಿರುವ ಹಾಗೆ, ಈ ದಿನ ಪವಿತ್ರವಾಗಿರುವ ಹಾಗೆ ಪ್ರತಿಯೊಬ್ಬ ಮನುಷ್ಯನ ಜೀವ, ಸ್ವತ್ತು ಮತ್ತು ಗೌರವವನ್ನು ಅಲ್ಲಾಹನು ಪವಿತ್ರವನ್ನಾಗಿ ಮಾಡಿದ್ದಾನೆ. ಯಾರಾದರೊಬ್ಬನ ಜೀವಹತ್ಯೆ ಮಾಡುವುದು, ಅವನ ಸ್ವತ್ತುಗಳನ್ನು ಸ್ವಾಧೀನಪಡಿಸುವುದು, ಅವನ ಗೌರವಕ್ಕೆ ಕುಂದುಂಟುಮಾಡುವುದು ಅನ್ಯಾಯಕರವೂ ಪಾಪದೋಷ ಉಂಟುಮಾಡುವುದೂ ಆಗಿದ್ದು ಈ ದಿನ, ಈ ತಿಂಗಳು ಮತ್ತು ಈ ಪ್ರದೇಶದ ಪಾವಿತ್ರ್ಯವನ್ನು ಭಂಗಪಡಿಸಿದುದಕ್ಕೆ ಸಮವಾಗುವುದು. ನಾನು ನಿಮಗೆ ಆಜ್ಞಾಪಿಸುತ್ತಿರುವುದು ಇಂದಿನ ದಿನಕ್ಕೆ ಮಾತ್ರವಲ್ಲ; ಮುಂದಿನ ಎಲ್ಲಾ ಕಾಲಗಳಿಗೂ ಅನ್ವಯಿಸುವುದು. ನೀವು ಇಹಲೋಕ ತ್ಯಜಿಸಿ ಪರಲೋಕದ ಕಡೆಗೆ ನಿಮ್ಮ ಸೃಷ್ಟಿಕರ್ತನನ್ನು ಭೇಟಿಯಾಗಲು ಹೋಗುವ ತನಕ ನೀವು ನನ್ನ ಉಪದೇಶಗಳನ್ನು ನೆನಪಿನಲ್ಲಿಟ್ಟುಕೊಂಡು ಅದನ್ನು ಕೃತಿರೂಪಕ್ಕೆ ತರುವವರಾಗಬೇಕೆಂದು ನಾನು ಆಶಿಸುತ್ತೇನೆ." ಕೊನೆಯದಾಗಿ ಅವರು ಹೀಗೆ ಹೇಳಿದರು:

"ನಾನು ನಿಮ್ಮೊಂದಿಗೆ ಹೇಳಿದುದನ್ನು ನೀವು ಭೂಮಿಯ ಎಲ್ಲೆಗಳ ತನಕ ತಲುಪಿಸಬೇಕು. ನನ್ನಿಂದ ನೇರವಾಗಿ ಆಲಿಸಿದವರಿಗಿಂತ ನನ್ನನ್ನು ನೇರವಾಗಿ ಆಲಿಸದವರು ಹೆಚ್ಚು ಲಾಭ ಪಡೆಯಲೂಬಹುದು." (ಸಿಹಾಹ್ ಸಿತ್ತ, ತಬರಿ, ಹಿಶಾಮ್ ಮತ್ತು ಖಾಮಿಸ್)

ಮಾನವರೆಲ್ಲರ ಹಿತಕ್ಕಾಗಿ ಅವರಿಗಿದ್ದ ಅತ್ಯಂತ ಹೆಚ್ಚಿನ ಕಾಳಜಿ ಮತ್ತು ಲೋಕದಾದ್ಯಂತ ಶಾಂತಿ ಸ್ಥಾಪನೆಗಾಗಿ ಅವರಿಗಿದ್ದ ಹಾರೈಕೆಯು ಸೀಮಾತೀತವಾಗಿತ್ತು.

ಆದರೆ ಕಳೆದ ಒಂದು ಸಾವಿರ ವರ್ಷಗಳ ಕಾಲ ಹಲವಾರು ಮುಸ್ಲಿಮ್ ನಾಯಕರು ಮತ್ತು ಮುಸ್ಲಿಮ್ ದೇಶಗಳು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳನ್ನು, ತಮ್ಮ ದುರಾಶೆಗಳನ್ನು ಈಡೇರಿಸಲು ಹಾಗೂ ಲೌಕಿಕ ಶಕ್ತಿಗಳನ್ನು ಮತ್ತು ಸಂಪತ್ತನ್ನು ಗಳಿಸಲಿಕ್ಕೋಸ್ಕರ ಕಡೆಗಣಿಸುತ್ತಾ ಬಂದುದು ಒಂದು ದುರಂತವಾಗಿದೆ. ಅವರು ಲೌಕಿಕ ಲಾಭಕ್ಕಾಗಿ ಪರಸ್ಪರ ಹೋರಾಟ ನಡೆಸಿದರು. ಅವರು ಅನ್ಯಾಯದಿಂದ ನಿರಪರಾಧಿಗಳನ್ನು ಹಿಂಸಿಸಿದರು ಮತ್ತು ಅಪರಾಧಿಗಳಿಗೆ ಪ್ರೋತ್ಸಾಹ ನೀಡಿದರು. ಅವರು ತಮ್ಮ ಸ್ವಂತ ದೇಶದ ನಿವಾಸಿಗಳಿಗೆ ವಿಶ್ವಾಸ ದ್ರೋಹ ಮಾಡಿದರು. ಅವರು ಮುಸ್ಲಿಮ್ ದೇಶಗಳ ವಿರುದ್ಧ ಕಾರಸ್ಥಾನ ನಡೆಸಲು ಶತ್ರುಗಳಿಂದ ಆರ್ಥಿಕ ಸಹಾಯ, ಸಂಪತ್ತು ಮತ್ತು ಶಕ್ತಿಯನ್ನು ಕೇಳಿ ಪಡೆದುಕೊಂಡರು. ಬಹುತೇಕ ಆಧ್ಯಾತ್ಮಿಕ ಮತ್ತು ಲೌಕಿಕ ನೇತಾರರು ತಮ್ಮ ಜನರನ್ನೇ ತಪ್ಪು ಮಾರ್ಗದಲ್ಲಿ ನಡೆಸಿ ಜನರ ಶರೀರ, ಮನಸ್ಸು ಮತ್ತು ಆತ್ಮ ಭ್ರಷ್ಟವಾಗುವಂತೆ ಮಾಡಿದರು.

ಇಂದಿನ ಕಾಲದಲ್ಲಿ ಸಹ ಅನೇಕ ಮುಗ್ಧ ಯುವಕರನ್ನೂ ಯುವತಿಯರನ್ನೂ 'ಬ್ರೈನ್‌ವಾಶ್' ಮಾಡಲಾಗುತ್ತಿದೆ. ಅವರು ನಡೆಸುವ ಅನಾಗರಿಕ ಕ್ರೂರಕೃತ್ಯಗಳು, ಭಯೋತ್ಪಾದಕ ಕೃತ್ಯಗಳು, ಹತ್ಯೆಗಳು ಮತ್ತು ಆತ್ಮಹತ್ಯೆಗಳು ಸಹ ಅವರನ್ನು ಶಹೀದರನ್ನಾಗಿ (ಹುತಾತ್ಮ)ರನ್ನಾಗಿ ಮಾಡುತ್ತದೆ ಎಂದು ಅವರಿಗೆ ಉಪದೇಶಿಸಲಾಗುತ್ತಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಯಾವ ಧರ್ಮವನ್ನು ತಾವು ಪ್ರೀತಿಸುತ್ತೇವೆ ಎಂದು ಅವರು ಹೇಳುತ್ತಾರೋ ಆ ಧರ್ಮದ ಹೆಸರಿಗೆ ಅವರು ಅಪಮಾನವನ್ನು ತಂದಿರಿಸುತ್ತಾರೆ. ಇಂದು ಇಸ್ಲಾಮ್ ಎಂಬ ಹೆಸರು "ಶಾಂತಿ" ಎಂಬುದಕ್ಕೆ ಪ್ರತಿಯಾಗಿ ಭಯೋತ್ಪಾದನೆ ಎಂಬ ಪದಕ್ಕೆ ಪರ್ಯಾಯವಾಗಿ ಬಳಸಲ್ಪಡುತ್ತದೆ. ಲೋಕದ ಬಹುತೇಕ ದೇಶಗಳು ರಾಜಕೀಯ ಯುದ್ಧಗಳನ್ನು ಮಾಡಿವೆಯಾದರೆ ಮುಸ್ಲಿಮ್ ದೇಶಗಳು ಜಿಹಾದ್ ಎಂಬ ಹೆಸರಿನಲ್ಲಿ ಮಾಡಿದ ಯುದ್ಧಗಳು ಮುಸ್ಲಿಮ್ ಗುಂಪುಗಳು ಪರಸ್ಪರ ಕೊಲ್ಲಲು ಮಾಡಿದವುಗಳಾಗಿವೆ.

ಈ ಸಂದರ್ಭದಲ್ಲಿ ಅಮೇರಿಕದಲ್ಲಿ ಸಂಭವಿಸಿದ 9/11ರ ಹಿಂಸಾಚಾರ, ಅಫ್ಘಾನಿಸ್ತಾನದಲ್ಲಿ ಮತ್ತು ಇತರ ದೇಶಗಳಲ್ಲಿ ನಡೆಯುತ್ತಿರುವ ಘಟನೆಗಳ ಕುರಿತು ಪ್ರಸ್ತಾಪಿಸದಿರಲು ಅಸಾಧ್ಯವಾಗಿದೆ. ಉಗ್ರವಾದಿ ಮುಸ್ಲಿಮ್

ಸಂಘಟನೆಗಳು ಗೊತ್ತುಗುರಿಯಿಲ್ಲದೆ ಮುಸ್ಲಿಮೇತರ ದೇಶಗಳ ವಿರುದ್ಧ ತಥಾಕಥಿತ "ಇಸ್ಲಾಮೀ ಜಿಹಾದ್" ನಡೆಸುತ್ತಾ ಇವೆ.

ಲೋಕದ ಅಂತಿಮ ಕಾಲಘಟ್ಟದಲ್ಲಿ ಮುಸ್ಲಿಮರು ಮತ್ತು ವಿಶಿಷ್ಟವಾಗಿ ಮುಸ್ಲಿಮ್ ನೇತಾರರು ಇಸ್ಲಾಮ್ ಧರ್ಮದಿಂದ ದೂರ ಸರಿಯಲ್ಪಡುವವರೆಂದೂ ಅವರಲ್ಲಿ ಕೆಲವರು ಸೃಷ್ಟಿಗಳಲ್ಲಿ ಅತ್ಯಂತ ನೀಚರಾಗುವರೆಂದೂ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಎಚ್ಚರಿಕೆ ನೀಡಿರುವರು. ಈ ನೀಚ ನಾಯಕರು ಬುದ್ಧಿವಂತರಾದ ಮುಸ್ಲಿಮ್ ತರುಣರನ್ನೂ ತರುಣಿಯರನ್ನೂ ದಾರಿತಪ್ಪಿಸುತ್ತಿದ್ದಾರೆ. ಅವರಿಗೆ ಎಂತಹ ತರಬೇತಿ ನೀಡಲಾಗುತ್ತಿದೆ ಎಂದರೆ ಅವರು ತಮ್ಮ ಜೀವವನ್ನು ಇಸ್ಲಾಮಿಗಾಗಿ ಅರ್ಪಿಸುವುದಾದರೆ ಅವರು ಶಹೀದ್ (ಹುತಾತ್ಮ)ರಾಗಿ ಕೂಡಲೇ ಸ್ವರ್ಗವನ್ನು ಗಳಿಸುವರೆಂದು ಅವರ ಮನಸ್ಸು ತಪ್ಪಾಗಿ ಮನವರಿಕೆ ಮಾಡುವಂತಾಗುತ್ತದೆ.

ಎಂತಹ ಸುಳ್ಳು! ಎಂತಹ ಮೋಸ! ಎಲ್ಲಾ ಮುಸ್ಲಿಮರು ಅವರನ್ನು ಕೇಳಬೇಕು: "ನೀವು ಯಾವ ಆಧಾರದಿಂದ ಹೀಗೆ ವಾದಿಸುತ್ತೀರಿ?"

ಆತ್ಮಹತ್ಯಾತ್ಮಕ ಆಕ್ರಮಣ ಮಾಡಲು ಉತ್ತೇಜಿಸಲ್ಪಡುವ ತರುಣ ಮುಸ್ಲಿಮರೊಂದಿಗೆ ನಾನು ಹೀಗೆ ಹೇಳ ಬಯಸುತ್ತೇನೆ: "ಅವರು ಹೇಳುತ್ತಾರೆ ನೀವು ಹುತಾತ್ಮರಾದರೆ ಕೂಡಲೇ ಸ್ವರ್ಗವನ್ನು ಪ್ರವೇಶಿಸುವಿರಿ ಎಂದು. ಹಾಗಾದರೆ ಆ ಕೆಲಸವನ್ನು ಮಾಡಲು ನಿಮಗೆ ಉಪದೇಶಿಸುವವರು ಆ ಕೆಲಸಕ್ಕೆ ನಿಮಗಿಂತ ಮುಂಚಿತವಾಗಿ ಮುನ್ನುಗ್ಗಬೇಕು. ಆದರೆ ಅವರು ಮುಂದಾಗದಿದ್ದರೆ ಅವರನ್ನು ಪವಿತ್ರ ಖುರ್‌ಆನಿನ ಈ ವಚನದ ಮೂಲಕ ಪ್ರಶ್ನಿಸಬೇಕು: 'ನೀವು ಮಾಡದಿರುವುದನ್ನು ನೀವೇಕೆ ಹೇಳುವಿರಿ?'" (61 : 3)

ಆತ್ಮಾಹುತಿಯು ಪ್ರಶಂಸನೀಯ ಕೃತ್ಯವೇನೂ ಅಲ್ಲ. ಅದು ಇಸ್ಲಾಮ್ ಧರ್ಮದ ಹೆಸರಲ್ಲಿ ಮಾಡುವ ಒಂದು ದುಷ್ಕೃತ್ಯವಾಗಿದೆ. ಅದನ್ನು ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸಿ ಮಾಡಲಾಗುತ್ತಿದೆ. ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳುತ್ತದೆ:

"ಓ ವಿಶ್ವಾಸಿಗಳೇ, ನಿಮ್ಮ ಧನವನ್ನು ಪರಸ್ಪರ ಅನ್ಯಾಯವಾಗಿ ತಿನ್ನಬೇಡಿರಿ. ಆದರೆ ನೀವು ಉಭಯ ಸಮ್ಮತದಿಂದ ವ್ಯಾಪಾರ ಮೂಲಕ ಧನ ಸಂಪಾದನೆ ಮಾಡಬಹುದು. ನಿಮ್ಮನ್ನೇ ನೀವು ಕೊಲ್ಲಬೇಡಿರಿ. ನಿಸ್ಸಂದೇಹವಾಗಿಯೂ ಅಲ್ಲಾಹನು ನಿಮ್ಮ ಮೇಲೆ ಅತಿ ಹೆಚ್ಚು ಕರುಣೆಯುಳ್ಳವನಾಗಿದ್ದಾನೆ." (4 :30)

"ನಿಮ್ಮನ್ನು ನೀವು ಕೊಲ್ಲಬೇಡಿರಿ" ಎಂಬ ಆಜ್ಞೆ ಆತ್ಮಾಹುತಿಯೆಂಬ ದುಷ್ಕೃತ್ಯವನ್ನು ನಿಷಿದ್ಧಗೊಳಿಸುತ್ತದೆ.

ನಿರಪರಾಧಿಗಳಾದ ಜನರನ್ನು ಕೊಲ್ಲುವುದು ಒಬ್ಬ ಮುಸ್ಲಿಮನಿಗೆ ಸ್ವರ್ಗವನ್ನು ದಯಪಾಲಿಸುವಂತಹ ಪ್ರಶಂಸನೀಯ ಕೃತ್ಯವೇ? ಖಂಡಿತವಾಗಿಯೂ ಅಲ್ಲ. ಹಾಗೆ ಮಾಡುವವನಿಗೆ ಅದು ನರಕದ ಬಾಗಿಲನ್ನು ತೆರೆದು ಕೊಡುವುದು.

ಅಬೂ ಝೈದ್ ಬಿನ್ ಸಾಬಿತ್ ಬಿನ್ ಧಹಕ್ ಹೀಗೆ ವರದಿ ಮಾಡಿದ್ದಾರೆ: "'ನಾನು ಸತ್ಯವನ್ನು ಹೇಳುತ್ತಾ ಇಲ್ಲವಾದರೆ ನಾನು ಮುಸ್ಲಿಮೇತರನಾಗುವೆನು' ಎಂದು ಸುಳ್ಳು ಪ್ರಮಾಣವನ್ನು ಮಾಡುವವನು ಆಗಲೇ ಇಸ್ಲಾಮ್ ಧರ್ಮದಿಂದ ದೂರ ಸರಿದಿದ್ದಾನೆ. ಯಾರಾದರೂ ತನ್ನನ್ನು ತಾನೇ ಒಂದು ಆಯುಧದ ಮೂಲಕ ಕೊಂದರೆ ಅದೇ ಆಯುಧದ ಮೂಲಕ ನ್ಯಾಯ ತೀರ್ಮಾನದ ದಿನ ಪರಲೋಕದಲ್ಲಿ ಶಿಕ್ಷಿಸಲ್ಪಡುವನು. ತನಗೆ ಸೇರದ ವಸ್ತುವನ್ನು ಹರಕೆಯಾಗಿ ಅರ್ಪಿಸಬಾರದು. ಒಬ್ಬ ಸತ್ಯ ವಿಶ್ವಾಸಿಯನ್ನು ಶಪಿಸುವುದು ಅವನನ್ನು **ಕೊಲ್ಲುವುದಕ್ಕೆ ಸಮವಾಗಿದೆ."** (ಬುಖಾರಿ)

ಸ್ವತಃ ಆತ್ಮಾಹುತಿ ಮಾಡುವ ಯೋಚನೆ ಹೊಂದಿರುವ ಮತ್ತು ಇತರರನ್ನು ಆತ್ಮಾಹುತಿಗೆ ಪ್ರಚೋದಿಸುವ ಮತ್ತು ಬಾಂಬ್ ಮತ್ತಿತರ ಆಯುಧಗಳಿಂದ ಆಕ್ರಮಣ ನಡೆಸಿ ನಿರಪರಾಧಿಗಳನ್ನು ಕೊಲ್ಲಲು ಉದ್ದೇಶಿಸುವ ಮುಸ್ಲಿಮರೆಂದು ತಮ್ಮನ್ನು ಹೇಳಿಕೊಳ್ಳುವ ಜನರು ಮೇಲಿನ ಪವಿತ್ರ ಖುರ್‌ಆನ್ ವಚನವನ್ನು ಮತ್ತು ಮೇಲೆ ಉದ್ಧರಣೆ ಮಾಡಲಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಚನವನ್ನು ಗಮನಿಸಬೇಕು. ನೀವು ಆತ್ಮಹತ್ಯಾತ್ಮಕ ಆಕ್ರಮಣ ಮಾಡಿ ಹುತಾತ್ಮರಾಗಲಾರಿರಿ. ಬದಲು, ನೀವು ನರಕಾಗ್ನಿಗೆ ಪ್ರವೇಶ ಪಡೆಯುವಿರಿ.

ಇಂದಿನ ಕಾಲದ ಭೀಕರ ಕೃತ್ಯಗಳು ಇಸ್ಲಾಮೀ ಜಿಹಾದ್ ಎಂಬ ಕಲ್ಪನೆಗೆ ಮತ್ತು ಅದರ ನಿಜವಾದ ಸ್ಥಿತಿಗೆ ವಿರುದ್ಧವಾಗಿದೆ. ರಾಜಕೀಯ ಉದ್ದೇಶದ ಯುದ್ಧಗಳು ಜಿಹಾದ್ ಆಗಲಾರವು. ಜಿಹಾದ್‌ಗಾಗಿ ಕರೆ ಪದೇ ಪದೇ ವಿವಿಧ ಕಡೆಗಳಿಂದ ಕೇಳಿಸುತ್ತಾ ಇದೆ. ಆದರೆ ಅಲ್ಲಾಹನು ಮತ್ತು ಅವನ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮುಸ್ಲಿಮರನ್ನು ಆಮಂತ್ರಿಸಿದ ಜಿಹಾದ್ ಯಾವುದು? ಈಗಿನ ಕಾಲದಲ್ಲಿ ನಾವು ಆಮಂತ್ರಿಸಲ್ಪಡುವ ಜಿಹಾದ್ ಯಾವುದು?

ಪವಿತ್ರ ಖುರ್‌ಆನ್ ಜಿಹಾದನ್ ಕಬೀರ್ (ದೊಡ್ಡ ಜಿಹಾದ್) ಎಂಬ ಇನ್ನೊಂದು ಜಿಹಾದ್ ಕುರಿತು ಪ್ರಸ್ತಾಪಿಸುತ್ತದೆ. ಅದು ಹೀಗೆ ಹೇಳುತ್ತದೆ:

"ನೀವು ಅವಿಶ್ವಾಸಿಗಳಿಗೆ ವಿಧೇಯರಾಗಬೇಡಿರಿ. ಅವರ ವಿರುದ್ಧ ಅದು (ಖುರ್‌ಆನಿನ) ಮೂಲಕ ಹೋರಾಡಿರಿ - ಬಲು ದೊಡ್ಡ ಹೋರಾಟ (ಜಿಹಾದನ ಕಬೀರಾ)" (25 : 53)

ದೊಡ್ಡ ಮತ್ತು ವಾಸ್ತವಿಕವಾದ ಜಿಹಾದ್ ಈ ವಚನದ ಪ್ರಕಾರ, ಪವಿತ್ರ ಖುರ್‌ಆನಿನ ತತ್ವಗಳನ್ನು ಸ್ವಯಂ ಅನುಷ್ಠಾನಕ್ಕೆ ತಂದು ಇತರರಿಗೆ ಅದನ್ನು ಪ್ರಚಾರಮಾಡುವುದಾಗಿದೆ.

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅಲೈಹಿಸ್ಸಲಾಮ್) ರವರು ಮಹ್‌ದೀ ಎಂದೂ ಮಸೀಹ್ ಎಂದೂ ಅಹ್ಮದೀ ಮುಸ್ಲಿಮರಾದ ನಾವು ನಂಬುತ್ತೇವೆ. ಹಝ್ರತ್ ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಮುದ್ರೆ) ಆಗಿರುವ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಪರಿಪೂರ್ಣವಾಗಿ ಅಧೀನರಾಗಿರುವ ಉಮ್ಮತೀ ನಬಿ (ಶಿಷ್ಯ ಪ್ರವಾದಿ) ತಾನೆಂದು ಅವರು ವಾದಿಸಿದರು. ಅವರು ಭಾರತದ ಪಂಜಾಬ್ ರಾಜ್ಯದ ಖಾದಿಯಾನ್‌ನಲ್ಲಿ 1835ರಲ್ಲಿ ಜನಿಸಿ 1908ರಲ್ಲಿ ನಿಧನ ಹೊಂದಿದರು. ಅವರು ಸತ್ಯವಾದಿ ಎಂಬುದಕ್ಕೆ ಸಾಕ್ಷ್ಯವಾಗಿ ಅಲ್ಲಾಹನು ಅಸಂಖ್ಯಾತ ದೃಷ್ಟಾಂತಗಳನ್ನು ತೋರಿಸಿದನು. ಅವರ ಸಂದೇಶ ಲೋಕದಾದ್ಯಂತ ತಲಪುವುದೆಂಬ ಸಂದೇಶವಾಣಿಯನ್ನು ಅಲ್ಲಾಹನು ಅವರಿಗೆ ಅರುಹಿದ್ದನು.

ಅವರು ನೀಡಿದ ಅನೇಕ ಉಪದೇಶಗಳಲ್ಲಿ ಒಂದು ಹೀಗಿದೆ: "ಓ ಜನರೇ, ಈ ಕಾಲದಲ್ಲಿ ಖಡ್ಗ ಹಿರಿದು ಹೋರಾಡುವುದು ಆವಶ್ಯಕವಾಗಿಲ್ಲ. ಈಗ ಲೇಖನಿ ಮೂಲಕ ಹೋರಾಡಬೇಕಾಗಿದೆ. ಇಸ್ಲಾಮ್ ಕುರಿತು ಶತ್ರುಗಳು ಸೂಚಿಸಿದ ಸಂಶಯಗಳು ಮತ್ತು ವಿವಿಧ ವೈಚಾರಿಕ ಆಕ್ರಮಣಗಳು ನನ್ನನ್ನು ಈ ವಾಸ್ತವಿಕ ಅಂಶದ ಕಡೆಗೆ ಗಮನ ಸೆಳೆಯುವಂತೆ ಮಾಡಿದೆ: ನಾನು ಲೇಖನಿಯೊಂದಿಗೆ ರಣಾಂಗಣವನ್ನು ಪ್ರವೇಶಿಸಬೇಕು ಮತ್ತು ಇಸ್ಲಾಮ್ ಧರ್ಮದ ಪವಾಡ ಸದೃಶ ಶೌರ್ಯವನ್ನೂ ಶಕ್ತಿಯನ್ನೂ ಪ್ರದರ್ಶಿಸಬೇಕು."

(ಮಲ್‌ಫೂರ್ಝಾತ್- ಸಂಪುಟ 1 ಪುಟ 57)

ಇದು ಖಡ್ಗ ಹಿರಿದು ಹೋರಾಡುವ ಕಾಲವಲ್ಲ, ಇದು ಲೇಖನಿಯಿಂದ ಸಮರ ನಡೆಸುವ ಕಾಲವೆಂದು ಹಝ್ರತ್ ವಾಗ್ದತ್ತ ಮಸೀಹ್(ಅ) ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಅರ್ಥವೇನು? ಇಸ್ಲಾಮ್ ಧರ್ಮದ ವಾಸ್ತವಿಕ ಸೌಂದರ್ಯವನ್ನು ಸವಿಯಲು ಮತ್ತು ಅದರ ತತ್ವಗಳನ್ನು ಮನವರಿಕೆ ಮಾಡಲು ಜನರಿಗೆ ಆಮಂತ್ರಣ ನೀಡಲು ನಾವು ರಣರಂಗವನ್ನು ಪ್ರವೇಶಿಸುವುದು ಹೇಗೆ?

ಇದಕ್ಕಿರುವ ಒಂದು ಉತ್ತರ: ಜಿಹಾದ್ ಫಿಲ್ಲಾಹ್ ಎಂದರೆ ಅಲ್ಲಾಹನ ಸಾಮೀಪ್ಯಗಳಿಸಲು ಮಾಡುವ ಹೋರಾಟವಾಗಿದೆ. ಇದು ಜಿಹಾದುಲ್ ಅಕ್‌ಬರ್ (ದೊಡ್ಡ ಜಿಹಾದ್) ಆಗಿದೆ. ಅದು ನಮ್ಮ ಸ್ವಂತ ಆತ್ಮದ ಕೀಳು ಆಶಾಭಿಲಾಷೆಗಳ ವಿರುದ್ಧ ಮಾಡುವ ಹೋರಾಟವಾಗಿದೆ. ಅದು ಶೈತಾನನ ಕೆಟ್ಟ ಪ್ರೇರೇಪಣೆಗಳಿಗೆ ವಿರುದ್ಧ ಮಾಡುವ ಹೋರಾಟವಾಗಿದೆ. ಇದು ನಿಜವಾದ ಜಿಹಾದ್ ಆಗಿದೆ. ಇದು ನಮ್ಮನ್ನು ನಾವೇ ಸುಧಾರಣೆ ಮಾಡಿ ನಮ್ಮನ್ನು ಸಾತ್ವಿಕರನ್ನಾಗಿ ಮಾಡುವ ಹೋರಾಟವಾಗಿದೆ. ನಾವು ನಮ್ಮೊಳಗಿನ ಶೈತಾನ ಶಕ್ತಿಗಳನ್ನು (ದುಷ್ಟ ಉತ್ತೇಜನಗಳನ್ನು) ಹತ್ತಿಕ್ಕಿ ನಮ್ಮನ್ನು ಸಾತ್ವಿಕರಾದ ಮುಸ್ಲಿಮರನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯಾಗಿದೆ. ಹಾಗೆ ಮಾಡಿದರೆ ನಾವು ಮುಸ್ಲಿಮೇತರರನ್ನು ಇಸ್ಲಾಮ್ ಧರ್ಮಕ್ಕೆ ಆಕರ್ಷಿಸುವವರಾಗುವೆವು.

ಪವಿತ್ರ ಖುರ್‌ಆನ್ ಈ ಬಗ್ಗೆ ಹೇಳಿದೆ: "ಯಾರಾದರೂ (ಅಲ್ಲಾಹನ ಮಾರ್ಗದಲ್ಲಿ) ಪರಿಶ್ರಮಪಡುವುದಾದರೆ, ಅವನು ತನ್ನ ಸ್ವಂತ ಒಳಿತಿಗಾಗಿ ಪರಿಶ್ರಮಪಡುತ್ತಾನೆ. ದಿಟವಾಗಿಯೂ ಅಲ್ಲಾಹನು ಸಕಲ ಲೋಕಗಳಿಂದಲೂ ಸ್ವಾವಲಂಬಿಯಾಗಿದ್ದಾನೆ." (29 : 7)

ಈ ವಚನ ಮುಜಾಹಿದ್ (ಜಿಹಾದ್ ಮಾಡುವ ವ್ಯಕ್ತಿ) ಯಾರೆಂಬುದನ್ನು ವಿವರಿಸುತ್ತದೆ. ಉನ್ನತ ಮತ್ತು ಶ್ರೇಷ್ಠ ಪರಿಕಲ್ಪನೆಗಳನ್ನು ಹೊಂದಿ ಅವುಗಳನ್ನು ಅನುಷ್ಠಾನಕ್ಕೆ ತರಲು ನಿರಂತರವಾಗಿ ಪರಿಶ್ರಮ ಮಾಡುವುದೇ ಇಸ್ಲಾಮೀ ಸಾಂಕೇತಿಕ ಪದವಾದ ಜಿಹಾದ್ ಪದದ ವಾಸ್ತವಿಕ ಅರ್ಥವಾಗಿದೆ. ಶ್ರೇಷ್ಠ ಪರಿಕಲ್ಪನೆಗಳನ್ನು ಹೊಂದಿ ಅವುಗಳನ್ನು ಕೃತಿರೂಪಕ್ಕೆ ತರುವವನೇ ಮುಜಾಹಿದ್ ಆಗಿದ್ದಾನೆ.

ನಾವು ಇಸ್ಲಾಮ್ ಧರ್ಮದ ಪರಿಪೂರ್ಣ ಮಾದರಿಯಾಗಬೇಕು. ಹಾಗೆ ಆಗಲು ನಾವು ಪವಿತ್ರ ಖುರ್‌ಆನ್ ಕಲಿಸುವ ಉಪದೇಶಗಳನ್ನು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆಗಳನ್ನು ತಿಳಿದುಕೊಳ್ಳಬೇಕು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ಹೇಳಿದ್ದಾರೆ: "ನಮ್ಮ ಶಕ್ತಿಯ ಮೂಲಕ ರಕ್ಷಿಸಲ್ಪಟ್ಟು, ಶಾಂತಿಯ ಜೀವನವನ್ನು ಯಾವಾಗಲೂ ಇತರರು ಅನುಭವಿಸುತ್ತಿದ್ದರೆ ಅದೇ ನಮ್ಮ ಸತ್ಯ ವಿಶ್ವಾಸದ ಚಿಹ್ನೆಯಾಗಿದೆ. ನಾವು ಇತರರನ್ನು ಕೈಗಳಿಂದಾಗಲೀ ನಾಲಗೆಗಳಿಂದಾಗಲೀ ನೋಯಿಸದಂತೆ ಸದಾ ಪ್ರಯತ್ನಿಸುವುದೇ ಉತ್ತಮ ಇಸ್ಲಾಮ್ ಧರ್ಮ ಪರಿಪಾಲನೆಯಾಗಿದೆ." (ಬುಖಾರಿ)

ಇದು ಮುಸ್ಲಿಮರು ಸಮಾಜದಲ್ಲಿ ವರ್ತಿಸಬೇಕಾದ ರೀತಿಗೆ ಮಾರ್ಗದರ್ಶನ ನೀಡುವ ಪರಿಪೂರ್ಣ ಸಂಕ್ಷಿಪ್ತ ವಿವರಣೆಯಾಗಿದೆ. ಮುಸ್ಲಿಮರ ನಡೆವಳಿಕೆಯು ಇತರರಿಗೆ ಮಾದರಿಯಾಗಬೇಕಾದುದು ಆವಶ್ಯಕವಾಗಿದೆ. ಮುಸ್ಲಿಮರಿಂದ ಯಾರಾದರೂ ಎಂದಾದರೂ ಹಾನಿಗೊಳಗಾಗಬಾರದು. ಈ ತತ್ವಗಳು ನಮ್ಮ ಧರ್ಮದ ಭಾಗಗಳಾಗಿವೆ ಮತ್ತು ಅಲ್ಲಾಹನೊಂದಿಗೆ ನಮ್ಮ ಸಂಬಂಧವನ್ನು ಸ್ಥಾಪಿಸಲು ನೆರವಾಗುವ ಮೂಲ ತತ್ವವಾಗಿದೆ. ಸತ್ಯ ವಿಶ್ವಾಸಿಗಳಾದ ನಮ್ಮ ಜೀವಿತದ ಮುಖ್ಯ ಉದ್ದೇಶ ಲಕ್ಷ್ಯವು ಅಲ್ಲಾಹನ ಸಾನಿಧ್ಯವನ್ನು ತಲಪುವುದಾಗಿದೆ. ನಮ್ಮ ಜೀವಿತವು ಚಿಕ್ಕದಾಗಿದೆ. ನಾವು ಅದರ ಬಗ್ಗೆ ಮನವರಿಕೆ ಮಾಡುವಾಗ ನಮ್ಮ ಜೀವಿತದ ಅರ್ಧಾಂಶ ಕಾಲ ದಾಟಿಹೋಗಿರುತ್ತದೆ.

ಅಲ್ಲಾಹನೊಂದಿಗೆ ನಾವು ಸಂಬಂಧವನ್ನು ಸ್ಥಾಪಿಸಬಹುದೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಆದರೆ ನಾವು ಕಠಿಣ ಪರಿಶ್ರಮವನ್ನು ಮಾಡಬೇಕು. ನಾವು ನಮ್ಮ ಲೌಕಿಕ ಜೀವಿತದಲ್ಲಿ ಜಯಗಳಿಸಲು ಎಂತಹ ಪರಿಶ್ರಮ ಮಾಡುತ್ತೇವೆಂದು ನೋಡಿರಿ. ನಿಶ್ಚಯವಾಗಿಯೂ ಅದೇ ರೀತಿಯ ಕಠಿಣ ಪ್ರಯತ್ನವನ್ನು ಅಲ್ಲಾಹನ ಮಾರ್ಗದಲ್ಲಿ ಮಾಡಿದರೆ ನಾವು ಅಲ್ಲಾಹನನ್ನು ಭೇಟಿಯಾಗುವ ಭಾಗ್ಯ ಗಳಿಸುವೆವು. ನಾವು ನಮ್ಮ ಹೃದಯಗಳೊಳಗೆ ನೋಡಬೇಕು, ನಾವು ಪ್ರತಿ ದಿನ ಎಷ್ಟು ಸಮಯವನ್ನು ಆಧ್ಯಾತ್ಮಿಕ ಕಾರ್ಯಗಳಿಗಾಗಿ ವಿನಿಯೋಗಿಸುತ್ತೇವೆ? ನಾವು ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಎಷ್ಟು ಭಾಗವಹಿಸುತ್ತೇವೆ? ಎಂಬುದನ್ನು ಪರಿಶೀಲಿಸಬೇಕು. ನಾವು ಲೌಕಿಕ ವ್ಯವಹಾರಕ್ಕಾಗಿ ವಿನಿಯೋಗಿಸುವ ಕಾಲದ ಅರ್ಧಾಂಶವನ್ನಾಗಲೀ ಕಾಲು ಭಾಗವನ್ನಾಗಲೀ ಆಧ್ಯಾತ್ಮಿಕ ಚಟುವಟಿಕೆಗಳಿಗಾಗಿ ವಿನಿಯೋಗಿಸುತ್ತೇವೋ? ನಮ್ಮ ಹೃದಯಗಳು ಲೌಕಿಕ ಸುಖ ಭೋಗಗಳಿಗಾಗಿ ಆಶಿಸುವ ಹಾಗೆ ನಾವು ಅಲ್ಲಾಹನ ಪ್ರೀತಿ ಗಳಿಸಲು ಆಶಿಸುತ್ತೇವೋ? ನಾವು ನಮ್ಮ ಸಮಯವನ್ನು ಪ್ರಾರ್ಥನೆಗಾಗಿ, ಪವಿತ್ರ ಖುರ್‌ಆನ್ ಪಾರಾಯಣಕ್ಕಾಗಿ ಸಾಕಷ್ಟು ವಿನಿಯೋಗಿಸುತ್ತೇವೋ? ನಾವು ನಮ್ಮ ಸಂಪತ್ತನ್ನು ಮತ್ತು ಸಮಯವನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತೇವೋ? ನಮ್ಮ ಹೃದಯಗಳು ನಮ್ಮ ಸಹೋದರ ಮತ್ತು ಸಹೋದರಿಯರಾದ ಮಾನವರ ಹಿತಕ್ಕಾಗಿ ಅಳುತ್ತಾ ಪ್ರಾರ್ಥಿಸುತ್ತಿವೆಯೋ ಅಥವಾ ವಿನೀತರಾಗಿ ಅವರನ್ನು ಸಮೀಪಿಸಿ ಅಲ್ಲಾಹನ ಸಂದೇಶ ತಲುಪಿಸಲು ಪ್ರಯತ್ನಿಸುತ್ತಿವೆಯೋ?

ಅಲ್ಲಾಹನ ಗ್ರಂಥದ ಆಜ್ಞೆಗಳನ್ನು ನಾವು ಪಾಲಿಸುತ್ತಿದ್ದೇವೋ? ಅಲ್ಲಾಹನ ಗ್ರಂಥಗಳಲ್ಲಿ ವಿವರಿಸಲಾದ ಆಜ್ಞೆಗಳಿಗಿಂತಲೂ ಉಪದೇಶಗಳಿಗಿಂತಲೂ ಉತ್ತಮವಾಗಿ ನಮ್ಮ ಜೀವಿತಕ್ಕೆ ಮಾರ್ಗದರ್ಶನ ನೀಡುವಂತಹ ಮತ್ತು ನಮ್ಮನ್ನು ಪ್ರಗತಿಗೆ ಒಯ್ಯುವಂತಹ ಬೇರೆ ತತ್ವಗಳ್ಯಾವುವೂ ಇಲ್ಲ. ಅಲ್ಲಾಹನು ನಿಶ್ಚಯಿಸಿದ ನೀತಿ ನಿಯಮಗಳು ನಮ್ಮ ಒಳಿತಾಗಿಯೇ ಇವೆ. ಅಲ್ಲಾಹನ ಹೊರತು ಬೇರೆ ಯಾರಿಗೆ ತಾನೇ ಉತ್ತಮ ಮಾರ್ಗದರ್ಶನ ನೀಡಲು ಸಾಧ್ಯ? ನಾವು ಆಂತರಿಕ ಮತ್ತು ಬಾಹ್ಯ ಕೆಡುಕುಗಳಿಂದ ರಕ್ಷಿಸಲ್ಪಡಲಿಕ್ಕಾಗಿ ಮತ್ತು ಆಧ್ಯಾತ್ಮಿಕ ಪ್ರಯಾಣವನ್ನು ಸುಗಮಗೊಳಿಸಲು ದೈವಿಕ ನಿಯಮಗಳನ್ನು ಅನುಸರಿಸಬೇಕು. ನಾವು ನಮ್ಮ ಜೀವಿತದಲ್ಲಿ ಇದುವರೆಗೆ ಮೈಗೂಡಿಸಿಕೊಂಡ ಅಭ್ಯಾಸಗಳನ್ನು ಮತ್ತು ಜೀವಿತ ಶೈಲಿಯನ್ನು ಬದಲಾಯಿಸಬೇಕು. ಯೋಚನೆಗಳನ್ನು ಮತ್ತು ಕಲ್ಪನೆಗಳನ್ನು ಬದಲಾಯಿಸಬೇಕಾದೀತು ಅಥವಾ ಪರಿಷ್ಕರಿಸಬೇಕಾದೀತು. ಇದು ಬಹಳ ಕಷ್ಟದಾಯಕವೂ ನೋವನ್ನುಂಟು ಮಾಡುವುದೂ ಆಗಿ ಪರಿಣಮಿಸಬಹುದು. ಆದರೆ ಜೀವಿತದ ಎಲ್ಲಾ ಹೋರಾಟಗಳು ಮತ್ತು ಸಂಘರ್ಷಗಳು ನೋವನ್ನುಂಟು ಮಾಡುವಂತಹದೂ ಬಳಲಿಕೆ ಉಂಟು ಮಾಡುವುದೂ ಆಗಿವೆ. ಅಲ್ಲಾಹನು ನಿರ್ದೇಶಿಸಿದ ನಿಯಮಗಳ ಪ್ರಕಾರ ಜೀವನ ನಡೆಸುವವರು ಮತ್ತು ಅವನ ಮಾರ್ಗದಲ್ಲಿ ನಿರಂತರವಾಗಿ ಕಠಿಣ ಪರಿಶ್ರಮ ಮಾಡುವವರು ದೈವಿಕ ಸಂಬಂಧ ಹೊಂದಿದ ಜನರ ಜೀವಂತ ಪ್ರತೀಕಗಳಾಗುತ್ತಾರೆ. ಅವರು ಜನರ ಗುಂಪಿನ ಮಧ್ಯದಲ್ಲಿ ಎದ್ದು ಕಾಣಿಸುತ್ತಾರೆ. ಅವರ ವ್ಯಕ್ತಿತ್ವ ಆಂತರಿಕವಾಗಿ ಮತ್ತು ಬಾಹ್ಯವಾಗಿ

ಪರಿಪೂರ್ಣ ಬದಲಾವಣೆ ಹೊಂದುತ್ತದೆ ಮತ್ತು ಅವರ ಮುಖಗಳಿಂದ ದೈವದತ್ತ ಪ್ರಭೆಯು ಹೊರಹೊಮ್ಮುತ್ತದೆ. ಆದುದರಿಂದ ಜನರು ಅವರ ಮುಂದೆ ಆದರ ಭಾವದಿಂದ ಮತ್ತು ಭಯಭಕ್ತಿಯಿಂದ ಎದ್ದು ನಿಂತುಕೊಳ್ಳುತ್ತಾರೆ. ಅವರು ಈ ಕೆಳಗಿನ ಪವಿತ್ರ ಖುರ್‌ಆನ್ ವಚನದ ಜೀವಂತ ಸಾಕ್ಷ್ಯವಾಗುತ್ತಾರೆ:

"ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಶ್ರಮಪಡುತ್ತಾರೋ ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. ನಿಶ್ಚಯವಾಗಿಯೂ ಅಲ್ಲಾಹನು ಸತ್ಕರ್ಮಿಗಳ ಜೊತೆಯಲ್ಲಿರುತ್ತಾನೆ." (29:70)

ಮುಸ್ಲಿಮನು ತನ್ನ ಜೀವಿತದಲ್ಲಿ ಮಾಡುವ ಎಲ್ಲಾ ಗುಣಾತ್ಮಕ ಚಟುವಟಿಕೆಗಳು ಜಿಹಾದ್ ಪದದ ಅರ್ಥದಲ್ಲಿ ಅಡಕವಾಗಿದೆ. ಜಿಹಾದ್ ಮಾಡುವ ಮುಜಾಹಿದ್‌ಗಳಾದ ನಾವು ನಮ್ಮನ್ನು ಸುಧಾರಣೆ ಮಾಡುತ್ತಾ ಸತ್ಕರ್ಮ ನಿರತರಾಗಬೇಕು. ಅಲ್ಲಾಹನ ಮಾರ್ಗದಲ್ಲಿ ಕಠಿಣ ಪರಿಶ್ರಮ ಮಾಡಬೇಕಾದರೆ ಅದಕ್ಕೆ ದೃಢಸಂಕಲ್ಪ ಮತ್ತು ಸ್ಥಿರಚಿತ್ತತೆ ಬೇಕು. ಸತ್ಯವಿಶ್ವಾಸ ಹಾಗೂ ಸರ್ವಶಕ್ತನೂ ಸರ್ವೋನ್ನತನೂ ಆಗಿರುವ ಸೃಷ್ಟಿಕರ್ತನಲ್ಲಿ ಮತ್ತು ಪರಲೋಕ ಜೀವಿತದ ಕುರಿತು ನಿಜವಾದ ನಂಬಿಕೆ ಹೊಂದದೆ ಇದನ್ನು ಸಾಧಿಸಲಾಗದು.

ಒಬ್ಬ ಮುಸ್ಲಿಮನು ತನ್ನ ಧರ್ಮವನ್ನು ಸತ್ಯ ಧರ್ಮ ಎಂದು ದೃಢ ನಂಬಿಕೆ ಹೊಂದಿ, ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅನುಷ್ಠಾನಕ್ಕೆ ತರುವವನಾದರೆ ಅವನನ್ನು ಧರ್ಮಾಂತರ ಮಾಡಲು ಯತ್ನಿಸುವವರ ಬಗ್ಗೆ ಅವನು ಎಂದೂ ಹೆದರಬೇಕಾಗಿಲ್ಲ. ಅವನು ತನ್ನ ಸಾತ್ವಿಕ ನಡೆವಳಿಕೆ ಮತ್ತು ಮಾತುಗಳ ಮೂಲಕ ತನ್ನನ್ನು ಎದುರಿಸುವವರನ್ನು ತನ್ನ ಮನೆಗೆ ಆಮಂತ್ರಿಸಬೇಕು. ಅದರ ಫಲ ಸ್ವರೂಪವಾಗಿ ದೇವನಿಚ್ಛಿಸಿದರೆ ಅವರು ಸಹ ಸತ್ಯಧರ್ಮಕ್ಕೆ ಪರಿವರ್ತನೆ ಹೊಂದಲು ಸಾಧ್ಯತೆಗಳಿವೆ.

ಹದಿನಾಲ್ಕು ವರ್ಷಗಳ ಹಿಂದೆ ನಾನು ಅಹ್ಮದೀ ಮುಸ್ಲಿಮನಾದೆನು. ಅದರ ಮೊದಲು ಅಂದಾಜು ಎರಡು ವರ್ಷಗಳ ಕಾಲ ನಾನು ನನ್ನ ಒಬ್ಬ ಅಹ್ಮದೀ ಸ್ನೇಹಿತರನ್ನು ಕ್ರೈಸ್ತ ಧರ್ಮಕ್ಕೆ ಮತಪರಿವರ್ತನೆ ಮಾಡಲು ಪ್ರಯತ್ನಿಸುತ್ತಾ ಇದ್ದೆನು. ಆ ಸ್ನೇಹಿತ ನನ್ನ ವಿರುದ್ಧ ಯಾವುದೇ ದ್ವೇಷ ಭಾವನೆ ಹೊಂದದೆ ತನ್ನ ಧರ್ಮದ ಸತ್ಯಾಂಶವನ್ನು ತನ್ನ ಮಾತು ಮತ್ತು ನಡೆವಳಿಕೆ ಮೂಲಕ ಪ್ರಕಟಿಸಿದರು. ಆಗ ನಾನು ಇಸ್ಲಾಮ್ ಧರ್ಮವನ್ನು ಪ್ರೀತಿಸತೊಡಗಿದೆನು. ಒಬ್ಬ ಸಹೋದರ ತನ್ನ ನಿಜವಾದ ಸಹೋದರನನ್ನು ಪ್ರೀತಿಸುವ ಹಾಗೆ ನಾನು ಆ ಸ್ನೇಹಿತರನ್ನು ಪ್ರೀತಿಸತೊಡಗಿದೆನು. ಆ ಸ್ನೇಹಿತ ತನ್ನ ಕುಟುಂಬ ಮತ್ತು ಇತರ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಕರ್ತವ್ಯಗಳಿಗಿಂತ ತನ್ನ ಧಾರ್ಮಿಕ ಕರ್ತವ್ಯಗಳಿಗೆ ಆದ್ಯತೆ ನೀಡುತ್ತಿದ್ದರು. ಆ ಸ್ನೇಹಿತರು ತನ್ನ ಸಾತ್ವಿಕ ನಡೆನುಡಿಗಳಿಂದ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆಯನ್ನು ಮೈಗೂಡಿಸಿ ವರ್ತಿಸುತ್ತಾ ಇದ್ದುದರಿಂದ ನನ್ನನ್ನು ಮಾತ್ರವಲ್ಲ ಇತರ ಅನೇಕ ಆಂಗ್ಲೇಯರನ್ನು ಸತ್ಯಧರ್ಮವಾದ ಇಸ್ಲಾಮಿಗೆ ಆಹ್ವಾನಿಸಲು ಅವರಿಗೆ ಸಾಧ್ಯವಾಯಿತು. ಅವರು ಬಲಪ್ರಯೋಗದಿಂದಲ್ಲ, ಉಪದೇಶಗಳ ಮೂಲಕ ನಿಜವಾದ ಜಿಹಾದ್ ಮಾಡಿದರು. ಅವರು ಅನೇಕ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗಿದ್ದರೂ ಅವರ ಸಹಿಷ್ಣುತಾ ಭಾವನೆ, ಅವರ ಸ್ಥಿರತೆ ಮತ್ತು ವಿಶಿಷ್ಟವಾಗಿ ಅವರು ತನ್ನ ಸೃಷ್ಟಿ ಕರ್ತನ ಕುರಿತು ಹೊಂದಿದ ಪ್ರೀತಿಯ ಕಾರಣದಿಂದ ಅತ್ಯಂತ ಜಯಶಾಲಿ "ದಾಈ ಇಲಲ್ಲಾಹ್" (ಅಲ್ಲಾಹನ ಕಡೆಗೆ ಆಮಂತ್ರಿಸುವವರು) ಆಗಲು ಅವರಿಗೆ ಸಾಧ್ಯವಾಯಿತು.

ಕೆಲವು ಪಾಶ್ಚಿಮಾತ್ಯ ದೇಶಗಳು ಮುಸ್ಲಿಮರ ಮತ್ತು ಮುಸ್ಲಿಮ್ ದೇಶಗಳ ವಿರುದ್ಧ ಮಾಡುವ ಅನ್ಯಾಯ ಬಹಳ ನೋವನ್ನುಂಟುಮಾಡುತ್ತದೆ. ಇದೇ ರೀತಿ ತಾವು ಇಸ್ಲಾಮ್ ಧರ್ಮಕ್ಕೆ ನೀಡುವ ವ್ಯಾಖ್ಯಾನವನ್ನು ಅಂಗೀಕರಿಸದವರ ವಿರುದ್ಧ ತಥಾಕಥಿತ ಮುಸ್ಲಿಮರು ಮಾಡುವ ಜಿಹಾದ್ ಘೋಷಣೆ ಮತ್ತು ಅವರು ಇಸ್ಲಾಮ್ ಧರ್ಮದ ಹೆಸರಿನಲ್ಲಿ ಮಾಡುವ ದೌರ್ಜನ್ಯ ಮತ್ತು ಇಸ್ಲಾಮಿಗೆ ಅಪಮಾನ ಉಂಟುಮಾಡುವ ಕೃತ್ಯಗಳನ್ನು ನೋಡುತ್ತಾ ಇರುವುದು ಇನ್ನಷ್ಟು ಮನೋವೇದನೆಯನ್ನುಂಟುಮಾಡುತ್ತದೆ. ಈ ರೀತಿ ವರ್ತಿಸುವವರು ಹೇಗೆ ತಾನೆ ಜನರನ್ನು ಇಸ್ಲಾಮ್ ಧರ್ಮಕ್ಕೆ ಆಕರ್ಷಿಸಲು ಸಾಧ್ಯ?

ಕೊನೆಯದಾಗಿ ನಾನು ಹಝ್ರತ್ ವಾಗ್ದತ್ತ ಮಸೀಹರ(ಅ) (ಅಹ್ಮದಿಯಾ ಸಂಘಟನೆಯ ಸ್ಥಾಪಕರ) ಒಂದು ಉಲ್ಲೇಖವನ್ನು ನಿಮ್ಮ ಮುಂದಿರಿಸುತ್ತೇನೆ. ಅವರು ಹೀಗೆಂದರು:

"ಅಜ್ಞರಾದ ಮೌಲವಿಗಳು - ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡಲಿ - ಮುಗ್ಧರಾದ ಸಾಮಾನ್ಯ ಜನರನ್ನು ಬಹಳ ಮೋಸಕ್ಕೊಳಪಡಿಸಿರುವರು. ದೌರ್ಜನ್ಯ, ದಯಾಹೀನತೆ ಮತ್ತು ಮನುಷ್ಯತ್ವರಹಿತ ಕೃತ್ಯಗಳಲ್ಲಿ ಸ್ವರ್ಗದ ಕೀಲಿಕೈಗಳಿವೆ ಎಂದು ಮೌಲವಿಗಳು ಅವರಿಗೆ ಉಪದೇಶಿಸಿದ್ದಾರೆ. ಒಬ್ಬನು ತನ್ನದೇ ಯೋಚನೆಯಲ್ಲಿ ಮಗ್ನನಾಗಿ ಮಾರ್ಗದಲ್ಲಿ ನಡೆದು ಹೋಗುತ್ತಿದ್ದಾನೆಂದು ಭಾವಿಸಿರಿ. ನಮಗೂ ಅವನಿಗೂ ಯಾವುದೇ ಸಂಬಂಧವಿರುವುದಿಲ್ಲ ಮತ್ತು ಅವನ ಹೆಸರು ಸಹ ನಮಗೆ ತಿಳಿಯದು. ಅವನಿಗೆ ನಮ್ಮ ಬಗ್ಗೆ ಸಹ ಏನೂ ತಿಳಿದಿಲ್ಲ. ಹೀಗಿದ್ದರೂ ನಾವು ಅವನನ್ನು ಕೊಲ್ಲುವ ನಿರ್ಧಾರ ಮಾಡಿ ಅವನಿಗೆ ಗುಂಡು ಹೊಡೆಯುತ್ತೇವೆ. ಏನು ಇದೊಂದು ಧಾರ್ಮಿಕ ಸತ್ಕೃತ್ಯವಾಗಿದ್ದರೆ ಕಾಡುಮೃಗಗಳು ಇಂತಹ ಸತ್ಕೃತ್ಯಗಳನ್ನು ಮಾಡುವ ನಿಟ್ಟಿನಲ್ಲಿ ಮನುಷ್ಯರಿಗಿಂತ ಶ್ರೇಷ್ಠವಾಗುತ್ತವೆ. ಸುಬ್‌ಹಾನಲ್ಲಾಹ್ (ಅಲ್ಲಾಹನು ಪರಿಶುದ್ಧನು). ಮಕ್ಕದ ಸತ್ಯ ವಿಶ್ವಾಸಿಗಳಿಗೆ ಅಲ್ಲಾಹನು ಹೀಗೆ ಆಜ್ಞಾಪಿಸಿದನು: 'ನೀವು ತುಂಡರಿಸಲ್ಪಡುವುದಾದರೂ ನೀವು ಕೆಡುಕನ್ನು ಎದುರಿಸಬೇಡಿರಿ.' ಪ್ರವಾದಿಗಳ ಆತ್ಮವನ್ನು ತಮ್ಮಲ್ಲಿ ಹೊಂದಿದ್ದ ಆ ಸಾತ್ವಿಕರಾದ ಜನರು ಅಲ್ಲಾಹನ ಆಜ್ಞೆಗೆ ವಿಧೇಯರಾಗಿ ತಾಯಿಯ ಹಾಲು ಕುಡಿಯುತ್ತಿರುವ ಶಿಶುಗಳಂತೆ ವಿನೀತರಾದ ನಿರ್ಬಲರ ಹಾಗೆ ವರ್ತಿಸಿದರು. ಒಬ್ಬ ನಿರಪರಾಧಿಯನ್ನು ಕೊಂದು ಅವನ ಪತ್ನಿಯನ್ನು ವಿಧವೆಯನ್ನಾಗಿಯೂ ಅವನ ಮಕ್ಕಳನ್ನು ಅನಾಥರನ್ನಾಗಿಯೂ ಅವನ ಮನೆಯನ್ನು ಶೋಕ ಭರಿತವನ್ನಾಗಿಯೂ ಮಾಡುವ ಕೃತ್ಯವು ಎಷ್ಟು ಮನೋವೇದನೆ ಉಂಟುಮಾಡುವಂತಹದೂ ನಾಚಿಕೆಗೆ ಕಾರಣವೂ ಆಗಿರುತ್ತದೆ? ಯಾವ ಹದೀಸು ಮತ್ತು ಪವಿತ್ರ ಖುರ್‌ಆನಿನ ಯಾವ ವಚನ ಇದಕ್ಕೆ ಅನುಮತಿ ನೀಡುತ್ತದೆ? ಯಾರಾದರೂ ಮೌಲವಿಗೆ ಈ ಪ್ರಶ್ನೆಗೆ ಉತ್ತರ ನೀಡಲು ಸಾಧ್ಯವೇ? ಜಿಹಾದ್ ಎಂಬ ಪದವನ್ನು ಆಲಿಸಿದ ಮೂಢ ಜನರು ತಮ್ಮ ಸ್ವಾರ್ಥ ಆಶಾಭಿಲಾಷೆಗಳನ್ನು ಈಡೇರಿಸಲು ಅದನ್ನು ನೆವನವನ್ನಾಗಿ ಮಾಡಿಕೊಳ್ಳುತ್ತಾರೆ.

"ನಾನು ನಿಮಗೊಂದು ಆಜ್ಞೆ ತಂದಿದ್ದೇನೆ. ಖಡ್ಗದಿಂದ ಮಾಡುವ ಜಿಹಾದ್ ಕೊನೆಗೊಂಡಿದೆ. ಆದರೆ ನಿಮ್ಮ ಆತ್ಮದ ಶುದ್ಧೀಕರಣಕ್ಕಾಗಿ ಮಾಡುವ ಜಿಹಾದ್ ಮುಂದುವರಿಯುವುದು. ನಾನು ಇದನ್ನು ನನ್ನ ಇಷ್ಟದಿಂದ ಹೇಳುವುದಲ್ಲ. ಅಲ್ಲಾಹನ ಇಷ್ಟವನ್ನು ನಾನು ಪ್ರಕಟಿಸುತ್ತಿದ್ದೇನೆ."

(ಗವರ್ನಮೆಂಟ್ ಅಂಗ್ರೇಝಿ ಔರ್ ಜಿಹಾದ್)

ಅನುವಾದ: ಎಂ. ಉಬೈದುಲ್ಲಾ

★

# ಈಸಾ ಮಸೀಹರ ಪ್ರಾಯ

## ನಿಧನ ಹೊಂದಿದ ಸ್ಥಳ - ನಿಧನ ಹೊಂದಿದ ದಿನಾಂಕ - ಗೋರಿ

-ಸಿದ್ದೀಖ್ ಅಶ್ರಫ್ ಅಲಿ

ಇತ್ತೀಚೆಗೆ ನಾನೊಂದು ನಕ್ಷೆಯನ್ನು ನೋಡಿದೆನು. 'ದಾರುಲ್ ಖಲೀಜುಲ್ ಅರಬಿ ಲಿತಬಾಅತ್' ಎಂಬ ಸಂಸ್ಥೆ ಅದನ್ನು ಪ್ರಕಟಿಸಿದೆ. ಅದರಲ್ಲಿ ಒಂದು ಮರದ ಚಿತ್ರವಿದೆ. ಆ ಮರದ ಎಲೆಗಳ ಮತ್ತು ಹೂಗಳ ರೂಪದಲ್ಲಿ ಪ್ರವಾದಿಗಳ ಹೆಸರು ಬರೆಯಲಾಗಿದೆ. ಈ ಮರದ ಚಿತ್ರದ ಕೆಳಗೆ ಪ್ರವಾದಿಗಳ ಅಂದಾಜು ಜೀವಿತದ ಕಾಲ ಎಂಬ ಶೀರ್ಷಿಕೆಯಲ್ಲಿ ಅವರ ಪ್ರಾಯ ಬರೆಯಲಾಗಿದೆ. ಅದರಲ್ಲಿ ಹಝ್ರತ್ ಈಸಾ ಮಸೀಹ್ (ಅಲೈಹಿಸ್ಸಲಾಮ್)ರವರ ಪ್ರಾಯ 33 ವರ್ಷ ಎಂದು ಬರೆದಿದೆ. ಆದರೆ ಸಾಮಾನ್ಯ ಮುಸ್ಲಿಮರ ನಂಬಿಕೆಯ ಪ್ರಕಾರ ಈಸಾ ಮಸೀಹರ ಪ್ರಾಯ 33 ವರ್ಷವಲ್ಲ. ಅವರು ಈಗ ಸಹ ಆಕಾಶದಲ್ಲಿ ಜೀವಿಸಿರುವರೆಂದು ಮುಸ್ಲಿಮರು ನಂಬುತ್ತಾರೆ.

ಈಸಾ ಮಸೀಹರ ಪ್ರಾಯ, ಅವರು ನಿಧನ ಹೊಂದಿದ ದಿನಾಂಕ ಮತ್ತು ಸ್ಥಳದ ಕುರಿತು ಸಂಕ್ಷಿಪ್ತವಾಗಿ ಬರೆಯಬೇಕೆಂದು ಈ ನಕ್ಷೆಯನ್ನು ನೋಡಿದ ನಂತರ ನಾನು ಯೋಚಿಸಿದೆ. ಈಸಾ ಮಸೀಹ್ ಎಂತಹ ಪ್ರವಾದಿಯಾಗಿರುವರೆಂದರೆ ಲೋಕದ ಜನಸಂಖ್ಯೆಯ ಬಹಳ ದೊಡ್ಡದಾದೊಂದು ವಿಭಾಗ ಅವರೊಂದಿಗೆ ಸಂಬಂಧವನ್ನು ಹೊಂದಿದೆ. ಲೋಕದ ದೊಡ್ಡ ದೊಡ್ಡ ಧರ್ಮಗಳ ವಿಶ್ವಾಸಗಳಿಗೆ ಅವರು ಸಂಬಂಧಿಸಿದ್ದಾರೆ. ಈಸಾ ಮಸೀಹರು ಅವರ ಜೀವಿತದ ಆರಂಭದಿಂದಲೇ ಭಿನ್ನಾಭಿಪ್ರಾಯಗಳ ಕೇಂದ್ರ ಬಿಂದುವಾಗಿದ್ದರು. ಅವರ ಪ್ರಾಯದ ಕುರಿತು ಸಹ ಭಿನ್ನಾಭಿಪ್ರಾಯಗಳು ಪ್ರಾರಂಭದ ಕಾಲದಿಂದಲೇ ತಲೆದೋರಿದ್ದುವು. ಅವರ ಕುರಿತು ವಿವಿಧ ಜನ ವಿಭಾಗಗಳ ನಂಬಿಕೆಗಳನ್ನು ಸಂಕ್ಷಿಪ್ತವಾಗಿ ನಿಮ್ಮ ಮುಂದಿರಿಸುತ್ತೇನೆ.

### ಯಹೂದಿಯರ ನಂಬಿಕೆ:

ಮೊತ್ತಮೊದಲು ನಾನು ಯಹೂದಿಯರ ನಂಬಿಕೆಯನ್ನು ವಿವರಿಸುತ್ತೇನೆ. ಅಲ್ಲಾಹನು ಈಸಾ ಮಸೀಹರನ್ನು ಯಹೂದಿಯರಿಗೋಸ್ಕರ ಕಳುಹಿಸಿದ್ದನು. (ಪವಿತ್ರ ಖುರ್‌ಆನ್ 3:50 ನೋಡಿರಿ.) ಆದರೆ ಯಹೂದಿಯರು ಈಸಾ ಮಸೀಹರನ್ನು ಸತ್ಯವಾದಿ ಎಂದಾಗಲೀ ದೇವನ ಸಂದೇಶ ವಾಹಕನೆಂದಾಗಲೀ ಅಂಗೀಕರಿಸಲಿಲ್ಲ. ಹಝ್ರತ್ ಮೂಸಾರವರ(ಅ) (ಮೋಸೆಸ್) ತೌರಾತ್ ಗ್ರಂಥದಲ್ಲಿ (ಬೈಬಲಿನ ಹಳೆಯ ಒಡಂಬಡಿಕೆ) ಮಸೀಹರ ಮೊದಲು ಎಲೀಯ (ಇಲ್‌ಯಾಸ್) ಪ್ರವಾದಿ ಆಕಾಶದಿಂದ ಇಳಿದು ಬರುವ ಭವಿಷ್ಯ ವಾಣಿ ಇರುವುದರಿಂದ ಎಲೀಯ ಪ್ರವಾದಿ ಮೊದಲು ಬರುವುದು ಆವಶ್ಯಕವಾಗಿದೆ ಎಂದು ವಾದಿಸಿ ಯಹೂದಿಯರು ಈಸಾ ಮಸೀಹರನ್ನು ತಿರಸ್ಕರಿಸಿದರು. ಆಗ ಈಸಾ ಮಸೀಹ್ ಅವರೊಂದಿಗೆ ಹೀಗೆ ಹೇಳಿದರು: ಆಕಾಶಕ್ಕೆ ಯಾರೂ ಏರಿ ಹೋಗಿಲ್ಲ. ಯಾರೂ ಆಕಾಶದಿಂದ ಇಳಿದು ಬರುವುದೂ ಇಲ್ಲ. ಎಲೀಯ ಪ್ರವಾದಿ ಆಗಮಿಸುವ ಭವಿಷ್ಯ ವಾಣಿ ಯಹ್‌ಯಾ (ಸ್ನಾನಿಕನಾದ ಯೋಹಾನ)ರ ಆಗಮನದಿಂದ ಈಡೇರಿದೆ. ಆದರೆ ಯಹೂದಿಯರು ಅವರ ಮಾತುಗಳನ್ನು ತಿರಸ್ಕರಿಸಿದರು ಮತ್ತು ಅವರನ್ನು ಶಿಲುಬೆಗೆ ಜಡಿದು ಕೊಲ್ಲಲು ನಿರ್ಧರಿಸಿದರು. ಯಹೂದಿಯರು ಈಸಾ ಮಸೀಹರನ್ನು ಸುಳ್ಳುವಾದಿ ಎಂದು ಸಾಬೀತುಗೊಳಿಸಲು ಬಯಸುತ್ತಿದ್ದರು. ಶಿಲುಬೆಗೆ ಜಡಿಯಲ್ಪಟ್ಟು ಕೊಲ್ಲಲ್ಪಡುವವನು ಕಳ್ಳವಾದಿ ಎಂದು ತೌರಾತ್‌ನಲ್ಲಿ ಬರೆದಿದೆ. ಈಸಾ ಮಸೀಹರನ್ನು ಯಹೂದಿಯರು ಸುಳ್ಳುವಾದಿ ಎಂದು ನಂಬುತ್ತಿದ್ದುದರಿಂದ ತಾವು ಅವರನ್ನು ಶಿಲುಬೆಗೇರಿಸಿ ಕೊಂದಿರುವೆವು ಎಂದು ಅವರು ನಂಬುತ್ತಾರೆ. ಆದುದರಿಂದ ಯಹೂದಿಯರ ಪ್ರಕಾರ ಈಸಾ ಮಸೀಹರ ಪ್ರಾಯ 33 ವರ್ಷವಾಗಿದೆ.

ಆದರೆ ಪವಿತ್ರ ಖುರ್‌ಆನ್ ಯಹೂದಿಯರ ಈ ವಾದವನ್ನು ಖಂಡಿಸುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ಲ್ಲಿ ಹೀಗೆ ಹೇಳಿದ್ದಾನೆ: "ವಮಾ ಖತಲೂಹೂ ವಮಾ ಸಲಬೂಹೂ." ಈಸಾ ಮಸೀಹರನ್ನು ಯಹೂದಿಯರು ವಧಿಸಲಿಲ್ಲ; ಶಿಲುಬೆಗೇರಿಸಿ ಕೊಲ್ಲಲೂ ಇಲ್ಲ. "ವಲಾ ಕಿನ್ ಶುಬ್ಬಿಹ ಲಹುಮ್." ಈಸಾ ಮಸೀಹರನ್ನು ಶಿಲುಬೆಯಿಂದ ಇಳಿಸಿದಾಗ ಅವರು ಶಿಲುಬೆಯಲ್ಲಿ ಮೃತಪಟ್ಟವರಂತೆ ಕಾಣಲ್ಪಟ್ಟರು. "ವಮಾ ಖತಲೂಹೂ ಯಖೀನನ್." ಖಂಡಿತವಾಗಿಯೂ ಅವರು ಅವರನ್ನು ವಧಿಸಲಿಲ್ಲ. (ಪವಿತ್ರ ಖುರ್‌ಆನ್ 4 : 158) "ವ ಕಾನಲ್ಲಾಹು ಅಝೀಝನ್ ಹಕೀಮ." ಅಲ್ಲಾಹನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 4 : 159). ಆದುದರಿಂದ ಅಲ್ಲಾಹನು ಪ್ರತಾಪಶಾಲಿಯಾದ ತನ್ನ ವಿವೇಕದ ಮೂಲಕ ಅವರನ್ನು ರಕ್ಷಿಸಿದನು.

ಈಸಾ ಮಸೀಹರನ್ನು ಯಹೂದಿಯರು ಪಿಲಾತನ ನ್ಯಾಯಾಲಯದ ಮುಂದೆ ಹಾಜರುಗೊಳಿಸಿದ್ದರು. ಪಿಲಾತ ಈಸಾ ಮಸೀಹರನ್ನು ರಕ್ಷಿಸಲು ಬಯಸಿದ್ದನು. ಆದರೆ ಯಹೂದಿಯರು ಪದೇ ಪದೇ ಒತ್ತಾಯ ಮಾಡಿದುದರಿಂದ ಪಿಲಾತನು ಉಪಾಯದಿಂದ ಶಿಲುಬೆಯ ಶಿಕ್ಷೆಯನ್ನು ಸಾಯಂಕಾಲ ಜಾರಿಯಾಗುವಂತೆ ವಿಧಿಸಿ ಶಿಲುಬೆಯಲ್ಲಿ ಅತ್ಯಂತ ಕಡಿಮೆ ಸಮಯ ಈಸಾ ಮಸೀಹ್ ಇರುವಂತೆ ನೋಡಿಕೊಂಡನು. ಶುಕ್ರವಾರ ಹಗಲು ಕಳೆದು ಸೂರ್ಯಾಸ್ತಮಾನವಾದ ಕೂಡಲೆ ಯಹೂದಿಯರ ಧಾರ್ಮಿಕ ಅಭಿಪ್ರಾಯ ಪ್ರಕಾರ ಶನಿವಾರ ಆರಂಭವಾಗುತ್ತದೆ. ಸಬ್ಬತ್ ದಿನವಾದ ಕಾರಣ ಆ ದಿನ ಯಾರೂ ಶಿಲುಬೆಯ ಮೇಲೆ ಇರಕೂಡದೆಂಬುದು ಸಹ ಅವರ ಧಾರ್ಮಿಕ ನಂಬಿಕೆಯಾಗಿತ್ತು. ಆಗ ಬಿರುಗಾಳಿ ಬೀಸುವಂತೆ ಮಾಡಿ ದೇವನು ತನ್ನ ಸಹಾಯವನ್ನು ಪ್ರಕಟಿಸಿದನು. ಜನರು ಭಯಭೀತರಾಗಿ ಶಿಲುಬೆಯ ಶಿಕ್ಷೆ ನೀಡಲಾದ ಪ್ರದೇಶದಿಂದ ದೂರ ಹೋದರು. ಈಸಾ ಮಸೀಹರನ್ನು ರಕ್ಷಿಸುವ ಮಾರ್ಗವು ಸುಲಭವಾಯಿತು. ಈಸಾ ಮಸೀಹರನ್ನು ಮತ್ತು ಶಿಲುಬೆಗೆ ಜಡಿಯಲ್ಪಟ್ಟ ಇಬ್ಬರು ಕಳ್ಳರನ್ನು ಶಿಲುಬೆಯಿಂದ ಇಳಿಸಿದಾಗ ಇಬ್ಬರು ಕಳ್ಳರೂ ಜೀವಂತರಾಗಿದ್ದರು. ರೂಢಿಯಂತೆ ಅವರ ಕಾಲುಗಳನ್ನು ಮುರಿದು ಹಾಕಿ ಕೊಲ್ಲಲಾಯಿತು. ಆದರೆ ಈಸಾ ಮಸೀಹರನ್ನು ನೋಡಿದಾಗ ಅವರು ಮೃತರಾದ ಹಾಗೆ ಕಾಣಲ್ಪಟ್ಟರು. ಆದುದರಿಂದ ಅವರ ಕಾಲುಗಳನ್ನು ಮುರಿದು ಹಾಕಲಿಲ್ಲ. ವಾಸ್ತವಿಕವಾಗಿ ಈಸಾ ಮಸೀಹ್ ಆಗ ಮೃತರಾಗಿರಲಿಲ್ಲ. ಒಬ್ಬ ಸೈನಿಕನು ಈಸಾ ಮಸೀಹರ ಪಕ್ಕೆಯನ್ನು ಈಟಿಯಿಂದ ತಿವಿದಾಗ ನೀರು ಮತ್ತು ರಕ್ತ ಹರಿದು ಬಂದಿತು ಎಂದು ಬೈಬಲಿನಲ್ಲಿ ಬರೆದಿದೆ. ಇದು ಅವರು

ಜೀವಂತವಾಗಿದ್ದುದಕ್ಕೆ ವೈಜ್ಞಾನಿಕವಾದ ಸಾಕ್ಷ್ಯಾಧಾರವಾಗಿದೆ.

## ಕ್ರೈಸ್ತರ ನಂಬಿಕೆ:

ಕ್ರೈಸ್ತರು ಸಹ ಯೇಸು ಮಸೀಹರ ಪ್ರಾಯ 33 ಎಂದು ಹೇಳುತ್ತಾರೆ. ಅವರು ಮೃತರಾದ ಸ್ಥಳದ ಕುರಿತು ಯಹೂದಿಯರೊಂದಿಗೆ ಒಮ್ಮತ ಹೊಂದಿದ್ದಾರೆ. ಈಸಾ ಮಸೀಹ್ ಶಿಲುಬೆಯಲ್ಲಿ ಮೃತರಾಗಿ ದೇವ ಶಾಪಕ್ಕೆ ಪಾತ್ರರಾದರೆಂದು ಸಹ ಅವರು ನಂಬುತ್ತಾರೆ. ಅವರ ಅಭಿಪ್ರಾಯ ಪ್ರಕಾರ, ಈಸಾ ಮಸೀಹ್ ದೇವಪುತ್ರರಾಗಿದ್ದಾರೆ. ಮರ್‌ಯಮ್‌ರವರ ಗರ್ಭದಿಂದ ಮನುಷ್ಯರೂಪದಲ್ಲಿ ಅವರು ಜನಿಸಿದರು. ಆದಮ್ ಮಾಡಿದ ಪಾಪವು ಮಾನವರಲ್ಲಿ ಸಾವಿರಾರು ವರ್ಷದಿಂದ ವಂಶಪಾರಂಪರ್ಯವಾಗಿ ಜಾರಿಯಲ್ಲಿದ್ದು ಎಲ್ಲಾ ಜನರ ಪಾಪ ಪರಿಹಾರಕ್ಕಾಗಿ ತನ್ನನ್ನು ಬಲಿಯಾಗಿ ನೀಡಲು ಮತ್ತು ದೇವ ಶಾಪಕ್ಕೆ ಗುರಿಯಾಗಲು ಈಸಾ ಮಸೀಹ್ ಬಯಸಿದರು. ಅವರು ಯಹೂದಿಯರ ಮೂಲಕ ಶಿಲುಬೆಗೇರಿ ತಮ್ಮ ಜೀವವನ್ನು ಅರ್ಪಿಸಿ, ದೇವ ಶಾಪಕ್ಕೆ ಗುರಿಯಾದರು. ಅನಂತರ ಅವರು ತಮ್ಮ ಮನುಷ್ಯನ ಉಡುಪನ್ನು ಎಸೆದು ದೇವಸುತನ ಉಡುಪನ್ನು ಧರಿಸಿ ಆಕಾಶವನ್ನೇರಿ ದೇವನ ಬಲಗಡೆ ಕುಳಿತುಕೊಂಡರು. (ಮಾರ್ಕ್ 16 : 19-20 ನೋಡಿರಿ.)

ಆದರೆ ಕ್ರೈಸ್ತ ಜನರ ಈ ನಂಬಿಕೆಯನ್ನು ಸ್ವತಃ ಬೈಬಲಿನ ಹೊಸ ಒಡಂಬಡಿಕೆ ಕೂಡ ಅಂಗೀಕರಿಸುವುದಿಲ್ಲ. ಬೈಬಲಿನ ಹೊಸ ಒಡಂಬಡಿಕೆ ಅವರ ನಂಬಿಕೆಗೆ ವಿರುದ್ಧವಾಗಿದೆ. ಮೊದಲನೆಯದಾಗಿ, ಈಸಾ ಮಸೀಹ್ "ನಾನು ನಿಮ್ಮ ಪಾಪ ಪರಿಹಾರಕ್ಕಾಗಿ ಜೀವಾರ್ಪಣೆ ಮಾಡುವೆನು" ಎಂದು ಎಲ್ಲಿಯೂ ಹೇಳಿಲ್ಲ. ಅವರು ಶಿಲುಬೆಗೇರುವ ಮುನ್ನಾ ರಾತ್ರಿ ಅಳುತ್ತಾ ದೇವನೊಂದಿಗೆ ದೈನ್ಯದಿಂದ ಪ್ರಾರ್ಥಿಸುತ್ತಾ ಇದ್ದರು. "ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ" ಎಂದು ದೇವನನ್ನು ಪ್ರಾರ್ಥಿಸಿದರು. ತನ್ನ ಶಿಷ್ಯರು ರಾತ್ರಿ ನಿದ್ರಿಸದೆ ಎಚ್ಚರದಿಂದಿದ್ದು ಪ್ರಾರ್ಥಿಸಲು ಹೇಳಿದರು. ಅವರು ಶಿಲುಬೆಗೇರಿಸಲ್ಪಟ್ಟಾಗ "ಏಲೀ, ಏಲೀ, ಲಮಾ ಸಬಕ್ತಾನೀ, ಅಂದರೆ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ ಬಿಟ್ಟಿದ್ದೀ ಎಂದು ಮಹಾಧ್ವನಿಯಿಂದ ಕೂಗಿದರು." (ಮತ್ತಾಯ 27 : 46) ಅವರು ಹೇಳಿದುದರ ಉದ್ದೇಶ, 'ಓ ನನ್ನ ದೇವಾ ನೀನು ನಿಶ್ಚಯವಾಗಿಯೂ ನನ್ನನ್ನು ಕೈ ಬಿಡಲಾರೆ ಎಂಬ ಭರವಸೆ ನಾನು ಹೊಂದಿದ್ದೇನೆ' ಎಂದಾಗಿದೆ.

ಈಸಾ ಮಸೀಹ್ ತಾನು ಶಿಲುಬೆಯಲ್ಲಿ ಮೃತನಾಗದೆ ರಕ್ಷಿಸಲ್ಪಡುವೆನೆಂದು ಮುಂಚಿತವಾಗಿಯೇ ಶುಭವಾರ್ತೆ ನೀಡಿದ್ದರು. ಯೋನ ಪ್ರವಾದಿ ಜೀವ ಸಹಿತ ಮೀನಿನ ಹೊಟ್ಟೆಯೊಳಗೆ ಹೋಗಿ, ಅದರೊಳಗೆ ಜೀವಂತವಾಗಿದ್ದು, ಅದರೊಳಗಿಂದ ಜೀವಂತವಾಗಿ ಹೊರಗೆ ಬಂದ ಹಾಗೆ ತನಗೆ ಸಹ ಸಂಭವಿಸುವುದೆಂದು ಅವರು ಶಿಲುಬೆಯ ಪ್ರಕರಣಕ್ಕೆ ಸಂಬಂಧಿಸಿ ಹೇಳಿದ್ದರು. (ಮತ್ತಾಯ 12 : 40 ನೋಡಿರಿ.) ಶಿಲುಬೆಯಲ್ಲಿ ಮೃತನಾಗದೆ ರಕ್ಷಿಸಲ್ಪಟ್ಟ ನಂತರ ಶಿಷ್ಯರ ಮುಂದೆ ಈಸಾ ಮಸೀಹ್ ಬಂದಾಗ ತೋಮ ಮತ್ತಿತರ ಶಿಷ್ಯರು ತಮ್ಮ ಶಂಕೆಯನ್ನು ಸೂಚಿಸಿದಾಗ ಅವರ ಮುಂದೆಯೇ ಮೀನು ಮತ್ತು ರೊಟ್ಟಿ ತಿಂದು ಅವರ ಶಂಕೆಯನ್ನು ದೂರೀಕರಿಸಿದರು. ಶಿಲುಬೆಗೆ ಜಡಿಯಲ್ಪಟ್ಟಾಗ ಉಂಟಾದ ಗಾಯಗಳನ್ನು ಅವರಿಗೆ ತೋರಿಸಿದರು ಮತ್ತು ತಾನು ಶಿಲುಬೆಯಲ್ಲಿ ಮೃತನಾಗಲಿಲ್ಲ ಎಂದು ಮನವರಿಕೆ ಮಾಡಿಕೊಟ್ಟರು. (ಯೋಹಾನ 20 : 20-29 ನೋಡಿರಿ.)

ಶಿಲುಬೆಯ ಸಂಭವಕ್ಕೆ ಮೊದಲೇ ಈಸಾ ಮಸೀಹರ ಗುಪ್ತ ಶಿಷ್ಯ ಅರಿಮಥಾಯದ ಯೋಸೆಫ್ ಗಾಯಗಳಿಗೆ ಹಚ್ಚಲಿಕ್ಕಾಗಿ ಸಾಕಷ್ಟು ಪ್ರಮಾಣದಲ್ಲಿ ಮದ್ದನ್ನು ತಯಾರಿಸಿಟ್ಟಿದ್ದರು. ಈಸಾ ಮಸೀಹರನ್ನು ಶಿಲುಬೆಯಿಂದ ಇಳಿಸಿದ ನಂತರ ಒಂದು ಕೋಣೆಯಲ್ಲಿ ಇರಿಸಿ ಅವರ ಗಾಯಗಳಿಗೆ ಈ ಮದ್ದನ್ನು ಹಚ್ಚಲಾಯಿತು. ಈ ಮದ್ದಿನ ಪ್ರಭಾವದಿಂದ ಅವರು ಶೀಘ್ರವಾಗಿ ಗುಣಮುಖರಾದರು. ಶಿಲುಬೆಯ ಸಂಭವದ ಬಳಿಕ ಈಸಾ ಮಸೀಹರಿಗೆ ಮದ್ದು ಹಚ್ಚಿದ ನಂತರ ಸುತ್ತಲಾದ ಬಟ್ಟೆ ಈಗ ಸಹ ಸುರಕ್ಷಿತವಾಗಿ ಇದೆ. ಈ ಬಟ್ಟೆಯನ್ನು ಇಂದಿನ ಕಾಲದಲ್ಲಿ ಕ್ರೈಸ್ತ ವಿಜ್ಞಾನಿಗಳೇ ಪರಿಶೋಧಿಸಿದಾಗ ಈಸಾ ಮಸೀಹರು ಶಿಲುಬೆಯಿಂದ ಇಳಿಸಲ್ಪಟ್ಟಾಗ ಜೀವಂತವಾಗಿದ್ದರೆಂದು ಸ್ಪಷ್ಟವಾಗಿದೆ.

## ಮುಸ್ಲಿಮರ ನಂಬಿಕೆ:

ಸಾಮಾನ್ಯ ಮುಸ್ಲಿಮರ ನಂಬಿಕೆಯೇನೆಂದರೆ, ಹಝ್ರತ್ ಈಸಾ ಮಸೀಹ್(ಅ) ಶಿಲುಬೆಯಲ್ಲಿ ಮೃತರಾಗಲಿಲ್ಲ. ಅವರನ್ನು ಶಿಲುಬೆಗೆ ಜಡಿಯಲು ಯಹೂದಿಯರು ಸಿದ್ಧರಾದಾಗ ಅಲ್ಲಾಹನು ಬೇರೊಬ್ಬನಿಗೆ ಈಸಾ ಮಸೀಹರ ರೂಪ ನೀಡಿದನು. ಯಹೂದಿಯರು ತಪ್ಪು ಗ್ರಹಿಕೆಗೆ ಪಾತ್ರರಾಗಿ ಆ ವ್ಯಕ್ತಿಯನ್ನು ಶಿಲುಬೆಗೆ ಜಡಿದರು. ಆದರೆ ಇಲ್ಲಿ ಆಶ್ಚರ್ಯಕರ ವಿಷಯವೇನೆಂದರೆ, ಆ ವ್ಯಕ್ತಿ "ನಾನು ನಿಜವಾದ ಈಸಾ ಮಸೀಹ್ ಅಲ್ಲ" ಎಂದು ಪ್ರತಿಭಟಿಸಲಿಲ್ಲ. ಈ ಊಹಾಪೋಹದ ಕಥೆ ಪವಿತ್ರ ಖುರ್‌ಆನ್‌ನಲ್ಲಾಗಲೀ ಹದೀಸಿನಲ್ಲಾಗಲೀ ಪ್ರಸ್ತಾಪಿಸಲ್ಪಟ್ಟಿಲ್ಲ. ಬೈಬಲಿನ ಹೊಸ ಒಡಂಬಡಿಕೆಯಲ್ಲಾಗಲೀ ಚರಿತ್ರೆಯ ಗ್ರಂಥದಲ್ಲಾಗಲೀ ಈಸಾ ಮಸೀಹರಿಗೆ ಬದಲಿಯಾಗಿ ಶಿಲುಬೆಗೆ ಜಡಿಯಲ್ಪಟ್ಟವನ ಕುರಿತು ಪ್ರಸ್ತಾಪವಿಲ್ಲ, ಈ ಊಹಾಪೋಹದ ಕಥೆಗೆ ತಲೆಯಾಗಲೀ ಕಾಲಾಗಲೀ ಇಲ್ಲ. ಅರೇಬಿಯನ್ ನೈಟ್ಸ್ ಕಥೆಗಳ ಹಾಗೆ ಈ ಕಥೆಯನ್ನು ಸಾಮಾನ್ಯ ಮುಸ್ಲಿಮರು ತಮ್ಮ ತಂದೆ ತಾತಂದಿರಿಂದ ಆಲಿಸುತ್ತಾ ಬಂದಿರುತ್ತಾರೆ. ಇನ್ನು ಮುಂದೆ ಸಹ ಅವರು ಪುನರಾವರ್ತಿಸುತ್ತಾ ಹೋಗುತ್ತಾರೆ. ಸಾಮಾನ್ಯ ಮುಸ್ಲಿಮರ ಇನ್ನೊಂದು ವಿಶ್ವಾಸವೇನೆಂದರೆ, ಈಸಾ ಮಸೀಹರನ್ನು(ಅ) ಶಿಲುಬೆಯಿಂದ ರಕ್ಷಿಸಲು ಆಕಾಶಕ್ಕೆ ಅಲ್ಲಾಹನು ಎತ್ತಿಕೊಂಡನು. ನಾಲ್ಕನೆಯ ಆಕಾಶದಲ್ಲಿ ಅವರು ಇಂದು ಸಹ ಜೀವಿಸಿರುವರು. ಲೋಕದ ಅಂತಿಮ ಕಾಲಘಟ್ಟದಲ್ಲಿ ಅವರು ಆಕಾಶದಿಂದ ಇಳಿದು ಬರುವರು. ಈ ರೀತಿ ಮುಸ್ಲಿಮರ ನಂಬಿಕೆ ಪ್ರಕಾರ ಈಸಾ ಮಸೀಹರ(ಅ) ಪ್ರಾಯ ಈಗ 2007+33=2040 ವರ್ಷ ಆಗುತ್ತದೆ.

ಮುಸ್ಲಿಮ್ ಜನ ಸಾಮಾನ್ಯರ ಈ ನಂಬಿಕೆ ಪವಿತ್ರ ಖುರ್‌ಆನ್, ಹದೀಸ್ ಮತ್ತು ಹಿಂದಿನ ಕಾಲದ ಮಹಾನುಭಾವರ ನಂಬಿಕೆಗಳಿಗೆ ವಿರುದ್ಧವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರವರು ಮತ್ತು ಅವರ ಶಿಷ್ಯರು ಹಝ್ರತ್ ಈಸಾ ಮಸೀಹ್(ಅ) ಆಕಾಶದಲ್ಲಿ ಜೀವಿಸಿರುವರೆಂಬ ವಿಶ್ವಾಸವನ್ನು ಖಂಡಿತವಾಗಿಯೂ ಹೊಂದಿರಲಿಲ್ಲ. ಈಸಾ ಮಸೀಹ್(ಅ) ಆಕಾಶಕ್ಕೆ ಹೋಗಿರುವರು ಮತ್ತು ಅಲ್ಲಿಂದ ಇಳಿದು ಬರುವರೆಂಬ ವಿಶ್ವಾಸ ಕ್ರೈಸ್ತರ ವಿಶ್ವಾಸದೊಂದಿಗೆ ಹೆಚ್ಚಿನ ಹೊಂದಾಣಿಕೆಯನ್ನು ಪಡೆದಿದೆ. ಆದುದರಿಂದ ಈ ತಪ್ಪು ವಿಶ್ವಾಸವು ಕ್ರೈಸ್ತರಿಂದಲೇ ಮುಸ್ಲಿಮರೆಡೆಯಲ್ಲಿ ಸ್ಥಾನ ಪಡೆಯಿತೆಂಬುದಕ್ಕೆ ಹೆಚ್ಚಿನ ಸಾಧ್ಯತೆಗಳಿವೆ. ಹಿಜರಿ ಪ್ರಥಮ ಶತಮಾನದ ಕೊನೆಯ ಭಾಗದಲ್ಲಿ ಕ್ರೈಸ್ತರು

ಬಹಳ ಸಂಖ್ಯೆಯಲ್ಲಿ ಇಸ್ಲಾಮ್ ಧರ್ಮಕ್ಕೆ ಸೇರಿದ್ದರು.

ಪವಿತ್ರ ಖುರ್‌ಆನ್ ಬಹಳ ಸ್ಪಷ್ಟವಾಗಿ ಹೀಗೆ ಹೇಳುತ್ತದೆ:

"ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರು ಗತಿಸಿದ್ದಾರೆ." (3 : 145)

ಹದೀಸಿನ ಪ್ರಸಿದ್ಧ ಗ್ರಂಥವಾದ "ಬುಖಾರಿ"ಯಲ್ಲಿ ಹೀಗೆ ಬರೆದಿದೆ:

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ನಿಧನ ಹೊಂದಿದಾಗ ಹಝ್ರತ್ ಉಮರ್(ರ) ದುಃಖಾತಿರೇಕದಿಂದ ಅವರು ಮೃತರಾದುದನ್ನು ನಂಬಲು ಸಿದ್ಧರಿರಲಿಲ್ಲ. ಆಗ ಹಝ್ರತ್ ಅಬೂಬಕರ್(ರ) ಮೇಲಿನ ಪವಿತ್ರ ಖುರ್‌ಆನ್ ವಚನವನ್ನು ಓದಿ ಹೇಳಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮೃತರಾದ ಸಂಗತಿಯನ್ನು ದೃಢಪಡಿಸಿದರು. ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ(ಸ) ಹಿಂದೆ ಆಗಮಿಸಿದ ಎಲ್ಲಾ ಪ್ರವಾದಿಗಳು ಮೃತರಾಗಿರುವರೆಂಬುದನ್ನು ಪೈಗಂಬರರ ಎಲ್ಲಾ ಶಿಷ್ಯರು ಒಮ್ಮತದಿಂದ ಅಂಗೀಕರಿಸಿದರು.

ಇದೇ ರೀತಿ ಪವಿತ್ರ ಖುರ್‌ಆನ್‌ನಲ್ಲಿ ಇನ್ನೊಂದು ವಚನ ಹೀಗಿದೆ:

"ಮರ್‌ಯಮ್ ಪುತ್ರ ಮಸೀಹ್ ಕೇವಲ ಒಬ್ಬ ಸಂದೇಶ ವಾಹಕರಾಗಿದ್ದರು. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರು ಗತಿಸಿದ್ದಾರೆ." (5 : 76)

ಈ ವಚನ ಈಸಾ ಮಸೀಹ್(ಅ) ಇತರ ಪ್ರವಾದಿಗಳ ಹಾಗೆ ಒಬ್ಬ ಪ್ರವಾದಿ ಎಂದೂ ಅವರು ಸಹ ಮೃತರಾಗಿರುವರೆಂದೂ ಸ್ಪಷ್ಟಪಡಿಸುತ್ತದೆ. ಅವರ ಬಗ್ಗೆ ಯಾವ ವಿನಾಯಿತಿಯೂ ಇರುವುದಿಲ್ಲ.

ಪವಿತ್ರ ಖುರ್‌ಆನ್‌ನಲ್ಲಿ ಈಸಾ ಮಸೀಹ್(ಅ) ಸ್ವತಃ ತಾನು ಇತರ ಪ್ರವಾದಿಗಳ ಹಾಗೆ ಮೃತರಾದುದರ ಕುರಿತು ಮಾಡಿದ ಪ್ರಸ್ತಾಪವು ಉಲ್ಲೇಖಿತವಾಗಿದೆ

(ಪುನರುತ್ಥಾನದ ದಿನದಂದು) ಅಲ್ಲಾಹನು: "ಓ ಮರ್ಯಮ್ ಪುತ್ರ ಈಸಾ, 'ನನ್ನನ್ನೂ ನನ್ನ ತಾಯಿಯನ್ನೂ ಅಲ್ಲಾಹನ ಹೊರತಾಗಿ ಇಬ್ಬರು ದೇವರುಗಳನ್ನಾಗಿ ಅಂಗೀಕರಿಸಿರಿ' ಎಂದು ನೀನು ಜನರೊಡನೆ ಹೇಳಿರುವಿಯೋ?" ಎಂದು ಕೇಳುವನು..(5:117) ಆಗ ಅವರು ಹೇಳುವರು:

"ನೀನು ನನಗೆ ಆಜ್ಞಾಪಿಸಿದ ಪ್ರಕಾರವಲ್ಲದೆ, ಅಂದರೆ 'ನನ್ನ ಪ್ರಭುವೂ ನಿಮ್ಮ ಪ್ರಭುವೂ ಆದ ಅಲ್ಲಾಹನನ್ನು ಮಾತ್ರ ಆರಾಧಿಸಿರಿ' ಎಂದು ಹೊರತು ಬೇರೇನೂ ನಾನು ಅವರೊಡನೆ ಹೇಳಿಲ್ಲ. ನಾನು ಅವರೊಂದಿಗೆ ಇದ್ದ ಕಾಲದವರೆಗೆ ನಾನು ಅವರಿಗೆ ಸಾಕ್ಷಿಯಾಗಿದ್ದೆ. ಆದರೆ ನೀನು ನನ್ನನ್ನು ಮೃತಪಡಿಸಿದಾಗ ಅವರ ಮೇಲ್ನೋಟಗಾರನು ನೀನೇ ಆದೆ. ನೀನು ಸರ್ವ ಸಂಗತಿಗಳಿಗೂ ಸಾಕ್ಷಿಯಾಗಿರುವೆ." (5 : 118)

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದರು: ಹಝ್ರತ್ ಈಸಾ(ಅ) ಪುನರುತ್ಥಾನದ ದಿವಸ ಅಲ್ಲಾಹನೊಂದಿಗೆ ಹೇಳುವ ಹಾಗೆ ನಾನು ಸಹ ಹೇಳುವಂತಹ ಪರಿಸ್ಥಿತಿ ಉಂಟಾಗುವುದು. ನಾನು ಹೇಳುವೆನು: 'ಆದರೆ ನೀನು ನನ್ನನ್ನು ಮೃತಪಡಿಸಿದಾಗ ಅವರ ಮೇಲ್ನೋಟಗಾರ ನೀನೇ ಆದೆ.' (ಸಹೀಹ್ ಬುಖಾರಿ - ಸಂಪುಟ 3 ಪುಟ 1343-1344)

## ಅಹ್ಮದೀ ಮುಸ್ಲಿಮರ ವಿಶ್ವಾಸ:

ಪವಿತ್ರ ಖುರ್‌ಆನ್, ಹದೀಸ್, ಪೈಗಂಬರ್ ಶಿಷ್ಯರ ಮತ್ತು ಹಿಂದೆ ಗತಿಸಿ ಹೋದ ಸಾತ್ವಿಕರಾದ ಮಹಾನುಭಾವರ ವಿಶ್ವಾಸಾದರ್ಶಗಳನ್ನು ಆಧಾರವಾಗಿಟ್ಟುಕೊಂಡು ಅಹ್ಮದೀ ಮುಸ್ಲಿಮರ ನಂಬಿಕೆ ಹೀಗಿದೆ: ಹಝ್ರತ್ ಈಸಾ ಮಸೀಹ್(ಅ) ಒಬ್ಬ ಮನುಷ್ಯರಾಗಿದ್ದರು ಮತ್ತು ಬೇರೆ ಪ್ರವಾದಿಗಳ ಹಾಗೆಯೇ ಒಬ್ಬ ಪ್ರವಾದಿಯಾಗಿದ್ದರು. ಪವಿತ್ರ ಖುರ್‌ಆನ್ ಅವರ ಕುರಿತು ಹೀಗೆ ಹೇಳುತ್ತದೆ:

"ನಿಶ್ಚಯವಾಗಿಯೂ ಅಲ್ಲಾಹನ ಬಳಿ ಈಸಾರ ಸ್ಥಿತಿ ಆದಮರ ಸ್ಥಿತಿಯಂತೆಯೇ ಆಗಿದೆ." (3 : 60)

ಅಲ್ಲಾಹನ ಆಜ್ಞೆ ಪ್ರಕಾರ ಹಝ್ರತ್ ಈಸಾ ಮಸೀಹ್(ಅ) ಪಿತೃರಹಿತರಾಗಿ ಜನಿಸಿದ್ದರೆ, ಹಝ್ರತ್ ಆದಮ್(ಅ) ಸಹ ಮಾತೆ ಮತ್ತು ಪಿತೃ ರಹಿತರಾಗಿ ಅಲ್ಲಾಹನ ಆಜ್ಞೆ ಪ್ರಕಾರ ಜನಿಸಿದ್ದರು. ಆದುದರಿಂದ ಹಝ್ರತ್ ಈಸಾ ಮಸೀಹರಿಗೆ ಹಝ್ರತ್ ಆದಮ್‌ರಿಗಿಂತ ಹೆಚ್ಚಿನ ಸ್ಥಾನ ನೀಡುವ ಆವಶ್ಯಕತೆ ಇರುವುದಿಲ್ಲ. ಈಸಾ ಮಸೀಹರನ್ನು ಅಲ್ಲಾಹನು ಕಳುಹಿಸಿದುದು ಬನೀ ಇಸ್ರಾಈಲ್ (ಯಹೂದಿ) ಜನಾಂಗವನ್ನು ತೌರಾತ್ ನಿಯಮ ಸಂಹಿತೆಯ ಪ್ರಕಾರ ನಡೆಸಲಿಕ್ಕಾಗಿತ್ತು. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಇಸ್ರಾಈಲ್ ಸಂತತಿಗಳೆಡೆಗೆ ಒಬ್ಬ ಸಂದೇಶವಾಹಕನನ್ನಾಗಿ.." (3 : 50)

ಹಝ್ರತ್ ಈಸಾ ಮಸೀಹ್(ಅ) ಕೇವಲ ಬನೀ ಇಸ್ರಾಈಲ್ ಸಂತತಿಗಳಿಗೆ ಮಾರ್ಗದರ್ಶನ ನೀಡಲು ಆಗಮಿಸಿದವರಾಗಿದ್ದರು. ಮುಸ್ಲಿಮರಿಗೋಸ್ಕರ ಬಂದ ಪ್ರವಾದಿಯಾಗಿರಲಿಲ್ಲ.

ಅಲ್ಲಾಹನು ಪ್ರತಿಯೊಬ್ಬ ಪ್ರವಾದಿಗೆ ಸಹಜವಾದ ಒಂದು ಪ್ರಾಯವನ್ನು ನಿಗದಿಪಡಿಸಿರುವನು. ಅಸಾಧಾರಣವಾದ ದೀರ್ಘಾಯುಸ್ಸನ್ನು ಅವನು ಯಾರಿಗೂ ನೀಡುವುದಿಲ್ಲ. ಯಾವುದಾದರೂ ಪ್ರವಾದಿಯನ್ನು ಮೃತಪಡಿಸದೆ ಜೀವಂತವಾಗಿ ಇರಿಸಲು ಅಲ್ಲಾಹನು ನಿರ್ಧರಿಸುತ್ತಿದ್ದರೆ ಅವನು ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಜೀವಂತವಾಗಿ ಇರಿಸಲು ಆದ್ಯತೆ ನೀಡುತ್ತಿದ್ದನು. ಅವರು ಸಕಲ ಲೋಕಗಳಿಗೆ ಅನುಗ್ರಹದಾಯಕರಾಗಿದ್ದ ಕಾರಣ ಅವರು ಅದಕ್ಕೆ ಹೆಚ್ಚು ಅರ್ಹರಾಗಿದ್ದರು. ಅಲ್ಲಾಹನು ಸ್ವತಃ ಅವರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

"ನಿನಗಿಂತ ಮುಂಚೆ ಯಾವ ಮನುಷ್ಯನನ್ನೂ ನಾವು ಚಿರಂಜೀವಿಯನ್ನಾಗಿ ಮಾಡಿಲ್ಲ. ನೀನು ಮೃತಪಟ್ಟು ಅವರು ಚಿರಂಜೀವಿಗಳಾಗುವುದೇ?" (21 : 35)

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಅರಬಿ ಖಸೀದದಲ್ಲಿ ಹೀಗೆ ಹೇಳುತ್ತಾರೆ:

ಖದ್ ಮಾತ ಈಸಾ ಮುತ್‌ರಿಖನ್ ವ ನಬಿಯ್ಯುನಾ
ಹಯ್ಯುನ್ ವ ರಬ್ಬೀ ಇನ್ನಹೂ ವಾಫಾನೀ.

"ಹಝ್ರತ್ ಈಸಾ ಮಸೀಹ್(ಅ) ಖಂಡಿತವಾಗಿಯೂ ಎಂದೋ ಮೃತರಾಗಿರುವರು." ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಜೀವಂತರಾಗಿಯೇ ಇದ್ದಾರೆ. ನನ್ನ ಪ್ರಭುವಿನಾಣೆ, ಅವರು ದರ್ಶನದಲ್ಲಿ ನನ್ನನ್ನು ಭೇಟಿ ಆಗಿದ್ದಾರೆ."

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ:

ಅಹ್‌ಯಯ್‌ತ ಅಮ್‌ವಾತಲ್ ಖಿರೂನಿ ಬಿಜಲ್‌ವತಿನ್.

"ಶತಮಾನಗಳ ಕಾಲ ಮೃತರಾಗಿದ್ದವರನ್ನು ತಾವು ತಮ್ಮ ಏಕಮಾತ್ರ ಮುಖ ದರ್ಶನದಿಂದ ಜೀವಂತರನ್ನಾಗಿ ಮಾಡಿದಿರಿ."

ನಜ್‌ರಾನ್‌ನಿಂದ ಆಗಮಿಸಿದ ಕ್ರೈಸ್ತರ ಪ್ರತಿನಿಧಿ ಸಂಘದೊಂದಿಗೆ ಮಾತನಾಡುತ್ತಾ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೀಗೆ ಹೇಳಿದರು:

"ನಮ್ಮ ದೇವನು ಜೀವಂತನಾಗಿರುವನು. ಆತನು ಎಂದೂ ಮೃತನಾಗಲಾರನು. ಆದರೆ (ನಿಮ್ಮ ಭಾವನೆಯ ದೇವ) ಈಸಾರಿಗೆ ಮರಣ ಸಂಭವಿಸಿದೆ." (ಕಿತಾಬ್ ಅಸ್‌ಬಾಬುನ್ನುಝೂಲ್ - ಬೈರೂತ್‌ನಲ್ಲಿ ಮುದ್ರಿತ ಗ್ರಂಥ - ಪುಟ 68)

## ಈಸಾ ಮಸೀಹರ ಪ್ರಾಯ:

ಈಸಾ ಮಸೀಹರ[ಅ] ಪ್ರಾಯದ ಕುರಿತು ಮುಹಮ್ಮದ್ ಪೈಗಂಬರ್[ಸ] ಹೀಗೆ ಹೇಳಿದರು:

"ನನಗೆ ಅಲ್ಲಾಹನು ತಿಳಿಸಿರುವನು: ಯಾವುದೇ ಪ್ರವಾದಿ ತನಗಿಂತ ಮೊದಲು ಆಗಮಿಸಿದ ಪ್ರವಾದಿಗಿಂತ ಕನಿಷ್ಠ ಅರ್ಧಾಂಶದಷ್ಟು ಪ್ರಾಯ ಹೊಂದದೆ ಮೃತರಾಗಲಾರರು. ಹಝ್ರತ್ ಈಸಾ ನಿಶ್ಚಯವಾಗಿಯೂ 120 ವರ್ಷ ಜೀವಿಸಿದ್ದರು. ಆದುದರಿಂದ ನನ್ನ ಪ್ರಾಯ ಅರುವತ್ತು ವರ್ಷವನ್ನು ತಲಪುವುದು ಎಂದು ನಾನು ಗ್ರಹಿಸುತ್ತೇನೆ." (ಕನ್‌ಝುಲ್ ಉಮ್ಮಾಲ್ ಅಧ್ಯಾಯ 2)

## ಈಸಾ ಮಸೀಹರ ಪ್ರಯಾಣ:

ಈಸಾ ಮಸೀಹ್[ಅ] ಕೇವಲ ಪಾಲೆಸ್ತೀನ್‌ನಲ್ಲಿರುವ ಯಹೂದಿಗಳಿಗಾಗಿ ಕಳುಹಿಸಲ್ಪಟ್ಟ ಪ್ರವಾದಿಯಾಗಿರಲಿಲ್ಲ. ಅವರು ಎಲ್ಲಾ ಯಹೂದಿಯರಿಗಾಗಿ (ಎಂದರೆ ಬನೀ ಇಸ್ರಾಈಲ್ ಜನಾಂಗಕ್ಕೆ) ಆಗಮಿಸಿದವರಾಗಿದ್ದರು. ಆ ಕಾಲದಲ್ಲಿ ಜೆರುಸಲೇಮ್‌ನಲ್ಲಿ ಯಹೂದಿಯರ ಎರಡು ಗೋತ್ರಗಳು ಮಾತ್ರವಿದ್ದುವು. ಈಸಾ ಮಸೀಹ್[ಅ] ಸ್ವತಃ ಹೀಗೆ ಹೇಳಿರುವರು:

"ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನು ಬೇರೆ ಕುರಿಗಳು ನನಗೆ ಇವೆ. ಅವುಗಳನ್ನೂ ನಾನು ತರಬೇಕು; ಅವು ನನ್ನ ಸ್ವರಕ್ಕೆ ಕಿವಿಗೊಡುವುವು." (ಯೋಹಾನ 10 : 16)

ಇದೇ ಕಾರಣದಿಂದ ಈಸಾ ಮಸೀಹ್[ಅ] ಒಂದು ದೇಶದಿಂದ ಇನ್ನೊಂದು ದೇಶಕ್ಕೆ ವಲಸೆ ಹೋಗಬೇಕೆಂದು ಅಲ್ಲಾಹನು ಸಂದೇಶವಾಣಿ ಮೂಲಕ ತಿಳಿಸಿದನು. ಈ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೀಗೆ ಹೇಳಿದರು:

"ಅಲ್ಲಾಹನು ಈಸಾ ಅಲೈಹಿಸ್ಸಲಾಮ್‌ರವರಿಗೆ ಸಂದೇಶವಾಣಿ ಅವತೀರ್ಣಗೊಳಿಸಿ ಹೇಳಿದನು: ನೀನು ಒಂದು ಸ್ಥಳದಿಂದ ಇನ್ನೊಂದರ ಕಡೆಗೆ ಸ್ಥಳ ಬದಲಾಯಿಸುತ್ತಾ ಹೋಗು. ಜನರು ನಿನ್ನನ್ನು ಗುರುತಿಸಿ, ನೀನು ಕಷ್ಟಕ್ಕೆ ಒಳಗಾಗದಿರಲು ಹೀಗೆ ಮಾಡು." (ಕನ್‌ಝುಲ್ ಉಮ್ಮಾಲ್ - ಪುಟ 158)

ಅಲ್ಲಾಹನ ಆಜ್ಞೆ ಪ್ರಕಾರ ಈಸಾ ಮಸೀಹ್[ಅ] ಪ್ರಯಾಣ ಮಾಡಿದುದಾಗಿ ಚರಿತ್ರೆಯಿಂದ ತಿಳಿದು ಬರುತ್ತದೆ. ಅವರು ಇರಾನ್, ಅಫ್‌ಘಾನಿಸ್ತಾನ್ ಮೊದಲಾದ ಬನೀ ಇಸ್ರಾಈಲ್ ಜನರು ವಾಸಿಸುತ್ತಾ ಇದ್ದ ಪ್ರದೇಶಗಳಲ್ಲಿ ಸಂಚರಿಸಿದರು. (ಹೆಚ್ಚಿನ ವಿವರ ಇಲ್ಲಿ ನೀಡಲು ಸ್ಥಳವಕಾಶವಿಲ್ಲ.) ಒಬ್ಬ ಶಿಷ್ಯನೂ ಅವರ ಜೊತೆಗಿದ್ದನು. ತೋಮಸ್ ಎಂಬ ಈ ಶಿಷ್ಯನ ಗೋರಿ ಮದ್ರಾಸ್ (ಚೆನ್ನೈ)ನಲ್ಲಿದೆ. ಅವರ ತಾಯಿ ಸಹ ಅವರ ಜೊತೆಗಿದ್ದರು. ಅವರು ಕೊನೆಗೆ ಕಾಶ್ಮೀರ ತಲುಪಿದರು. ಹಝ್ರತ್ ಈಸಾ ಮಸೀಹ್‌ರನ್ನು[ಅ] ಯಹೂದಿಯರ ಅನೇಕ ಕಾರಸ್ಥಾನಗಳಿಂದ ಮತ್ತು ಹಿಂಸೆಯಿಂದ ರಕ್ಷಿಸಿದ ನಂತರ ಅತ್ಯಂತ ಸುಖ ಸಮೃದ್ಧವಾದ ಮತ್ತು ನೀರ ಝರಿಗಳಿಂದ ತುಂಬಿದ ಉನ್ನತ ಸ್ಥಳದಲ್ಲಿ ಆಶ್ರಯ ನೀಡಿದುದಾಗಿ ಮತ್ತು ಅವರ ತಾಯಿಯವರಿಗೂ ಇದೇ ಸ್ಥಳದಲ್ಲಿ ಆಶ್ರಯ ನೀಡಲಾಯಿತು ಎಂದು ಪವಿತ್ರ ಖುರ್‌ಆನ್ ಹೀಗೆ ಸೂಚಿಸುತ್ತದೆ:

"ವಿಶ್ರಾಂತಿಗೆ ಯೋಗ್ಯವೂ ನೀರಿನ ಒರತೆಗಳೂ ಇರುವ ಒಂದು ಉನ್ನತ ಪ್ರದೇಶದೆಡೆಗೆ ತಲುಪುವಂತೆ ಮಾಡಿ ನಾವು ಅವರಿಬ್ಬರಿಗೂ ಆಶ್ರಯ ನೀಡಿದೆವು." (23 : 51)

## ಈಸಾ ಮಸೀಹರ ಗೋರಿ:

ಹಝ್ರತ್ ಈಸಾ ಮಸೀಹ್[ಅ] 120 ವರ್ಷಗಳ ಕಾಲ ಜೀವಿಸಿ ಕಾಶ್ಮೀರದ ಶ್ರೀನಗರದಲ್ಲಿ ದಫನ್‌ಗೊಳಿಸಲ್ಪಟ್ಟರು. ಅವರ ಗೋರಿ ಈಗಲೂ ಅಲ್ಲಿದೆ. ಇದರ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಹಝ್ರತ್ ಮಸೀಹ್ ಮೌಊದ್[ಅ] ಬರೆದ "ಮಸೀಹ್ ಹಿಂದೂಸ್ತಾನ್ ಮೇಂ" ಎಂಬ ಗ್ರಂಥ ಓದಿರಿ. ಈ ಬಗ್ಗೆ ಹೊಸ ಸಂಶೋಧನೆಗಳು ಸಹ ನಡೆಯುತ್ತಾ ಇವೆ.

## ನಿಧನ ಹೊಂದಿದ ದಿನಾಂಕ:

ಹಝ್ರತ್ ಇಮಾಮ್ ಹಸನ್[ರ] ಹೀಗೆ ಹೇಳಿದುದಾಗಿ ವರದಿಯಾಗಿದೆ: "ಹಝ್ರತ್ ಈಸಾ ಅಲೈಹಿಸ್ಸಲಾಮ್ ರಮಝಾನ್ ತಿಂಗಳು 27ನೇ ದಿನಾಂಕ ಮೃತರಾದ ಅದೇ ದಿನಾಂಕ ರಾತ್ರಿ ನನ್ನ ಪಿತ ಹಝ್ರತ್ ಅಲಿ ನಿಧನ ಹೊಂದಿದರು." (ಅತ್ತಬಖಾತುಲ್ ಕುಬ್ರಾ - ಸಂಪುಟ 3 ಪುಟ 28)

ಲೋಕದಲ್ಲಿ ಗತಿಸಿಹೋದ ಎಷ್ಟೋ ಪ್ರವಾದಿಗಳ ಪ್ರಾಯ, ನಿಧನ ಹೊಂದಿದ ದಿನಾಂಕ, ಗೋರಿ ಮೊದಲಾದುವುಗಳ ಕುರಿತು ನಮಗೆ ಯಾವ ಮಾಹಿತಿಯೂ ಲಭಿಸಿಲ್ಲ. ಆದರೆ ಹಝ್ರತ್ ಈಸಾ ಮಸೀಹರ ಪ್ರಾಯ, ಅವರು ನಿಧನಹೊಂದಿದ ದಿನಾಂಕ, ಗೋರಿ ಮೊದಲಾದುವುಗಳ ಕುರಿತು ನಮಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿವೆ.

ಒಟ್ಟಾರೆ, ಮೇಲೆ ವಿವರಿಸಿದ ಸತ್ಯಾಂಶಗಳಿಂದ ನಾವು ಹೀಗೆ ನಿರ್ಧರಿಸಬಹುದು: ಹಝ್ರತ್ ಈಸಾ ಮಸೀಹರ[ಅ] ಪ್ರಾಯ 120 ವರ್ಷವಾಗಿತ್ತು. ಅವರು ರಮಝಾನ್ ತಿಂಗಳ 27ನೇ ದಿನಾಂಕ ಕಾಶ್ಮೀರದಲ್ಲಿ ಮೃತರಾದರು. ಅವರ ಗೋರಿ ಶ್ರೀನಗರದ ಖಾನ್‌ಯಾರ್ ಬಡಾವಣೆಯಲ್ಲಿದೆ. ಅದು ಮುಸ್ಲಿಮರ ಗೋರಿಯ ಹಾಗೆ ಇಲ್ಲ. ಅವರ ಗೋರಿ ಯಹೂದಿಯರ ಗೋರಿಯ ಹಾಗಿದೆ. ಅದು ಪೂರ್ವ - ಪಶ್ಚಿಮವಾಗಿದೆ.

ಲೋಕವು ಈ ಸತ್ಯಾಂಶದ ಕಡೆಗೆ ಹೆಚ್ಚು ಸಮೀಪವಾಗುವಂತೆ ಹಾಗೂ ಪವಿತ್ರ ಖುರ್‌ಆನ್, ಹದೀಸ್, ಪೈಗಂಬರ್ ಶಿಷ್ಯರ ಹೇಳಿಕೆಗಳು ಮತ್ತು ಚಾರಿತ್ರಿಕ ಸಾಕ್ಷ್ಯಗಳು ಬೆಂಬಲಿಸುವ ಸತ್ಯವನ್ನು ಅಂಗೀಕರಿಸುವಂತಾಗಲಿ ಎಂದು ಅಲ್ಲಾಹನೊಡನೆ ಬೇಡಿಕೊಳ್ಳುತ್ತೇನೆ.

★

# ದೈವಿಕ ಗ್ರಂಥಗಳು

ಪ್ರವಾದಿಗಳ ಮೂಲಕ ಅಲ್ಲಾಹನು ಲೋಕಕ್ಕೆ ನೀಡಿದ ಸಂದೇಶಗಳನ್ನು ಬರೆದಿಡಲಾಗಿದೆ. ಇವುಗಳು ಅಲ್ಲಾಹನ ಗ್ರಂಥಗಳೆಂದು ಕರೆಯಲ್ಪಡುತ್ತವೆ. ವಿವಿಧ ಕಾಲಗಳಲ್ಲಿ ಬೇರೆ ಬೇರೆ ಪ್ರವಾದಿಗಳಿಗೆ ನೀಡಲ್ಪಟ್ಟ ಕೆಲವು ಗ್ರಂಥಗಳ ಹೆಸರು ಪವಿತ್ರ ಖುರ್‌ಆನಿನಲ್ಲಿ ಹೀಗೆ ಉಲ್ಲೇಖಿತವಾಗಿವೆ:

1. ಸುಹುಫು ಇಬ್ರಾಹೀಮ್ (ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರಿಗೆ ಲಭಿಸಿದ ಸಂದೇಶವಾಣಿಗಳು.)
2. ತೌರಾತ್ (ಹಝ್ರತ್ ಮೂಸಾ ಅಲೈಹಿಸ್ಸಲಾಮರಿಗೆ ಅವತೀರ್ಣವಾದ ಗ್ರಂಥ.)
3. ಝಬೂರ್ (ಹಝ್ರತ್ ದಾವೂದ್ ಅಲೈಹಿಸ್ಸಲಾಮರಿಗೆ ಲಭಿಸಿದ ಸಂದೇಶಗಳು.)
4. ಇನ್‌ಜೀಲ್ (ಹಝ್ರತ್ ಈಸಾ ಅಲೈಹಿಸ್ಸಲಾಮರಿಗೆ ಅವತೀರ್ಣವಾದ ಸುವಾರ್ತೆಗಳು.)
5. ಖುರ್‌ಆನ್ (ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥ.)

ಮನುಷ್ಯನ ಜೀವಿತದ ಎಲ್ಲ ರಂಗಗಳಿಗೂ ಆವಶ್ಯಕವಾದ ನಿಯಮಗಳು, ಉಪದೇಶಗಳು, ಬರಲಿರುವ ಸಂಗತಿಗಳ ಬಗ್ಗೆ ಭವಿಷ್ಯವಾಣಿಗಳು, ಹಿಂದೆ ಸಂಭವಿಸಿದ ಘಟನೆಗಳ ಬಗ್ಗೆ ವಿವರಣೆಗಳು ದೈವಿಕ ಗ್ರಂಥಗಳಲ್ಲಿ ಅಡಕವಾಗಿರುತ್ತವೆ. ಆದರೆ ಎಲ್ಲ ಗ್ರಂಥಗಳು ಶರೀಅತ್ (ಧಾರ್ಮಿಕ ನಿಯಮ ಸಂಹಿತೆಗಳು) ಒಳಗೊಂಡಿರುವುದಿಲ್ಲ. ತೌರಾತ್ ಇಸ್ರಾಈಲ್ ಸಂತತಿಗಳಿಗೆ ಮಾತ್ರ ಆವಶ್ಯಕವಾದ ನಿಯಮ ಸಂಹಿತೆಯಾಗಿ ಅವತೀರ್ಣಗೊಂಡಿತು. ಅನಂತರ ಆ ಗ್ರಂಥವನ್ನು ರದ್ದುಪಡಿಸಿ, ಪವಿತ್ರ ಖುರ್‌ಆನ್ ಅಲ್ಲಾಹನಿಂದ ಅವತೀರ್ಣಗೊಂಡಿತು. ಪವಿತ್ರ ಖುರ್‌ಆನ್ ಸಕಲ ಮನುಷ್ಯರಿಗಾಗಿ ಎಲ್ಲ ಕಾಲಗಳಿಗಾಗಿ ಅವತೀರ್ಣಗೊಂಡ ಗ್ರಂಥವಾಗಿದೆ.

ಪವಿತ್ರ ಖುರ್‌ಆನ್ ಎಲ್ಲ ಗ್ರಂಥಗಳಿಗಿಂತ ಶ್ರೇಷ್ಠವೂ ಪರಿಪೂರ್ಣವೂ ಆದ ಗ್ರಂಥವಾಗಿದೆ. ಅದರಲ್ಲಿ ಎಲ್ಲ ವಿಧದ ಒಳಿತುಗಳು ಇವೆ. ತೌರಾತ್ ಗ್ರಂಥದಲ್ಲಿ ಅದರ ಅನುಯಾಯಿಗಳು ಹಸ್ತಕ್ಷೇಪ ನಡೆಸಿದರು. ಆದರೆ ಪವಿತ್ರ ಖುರ್‌ಆನಿನಲ್ಲಿ ಯಾರೂ ಹಸ್ತಕ್ಷೇಪ ಮಾಡುವಂತಿಲ್ಲ. ಆದರಲ್ಲಿ ಯಾರೂ ಹಸ್ತಕ್ಷೇಪ ನಡೆಸಿಯೂ ಇಲ್ಲ. ತೌರಾತನ್ನು ಪವಿತ್ರ ಖುರ್‌ಆನ್ ರದ್ದುಗೊಳಿಸಿತು. ಆದರೆ ಪವಿತ್ರ ಖುರ್‌ಆನ್ ಎಂದೂ ರದ್ದುಗೊಳಿಸಲ್ಪಡಲಾರದು. "ಪವಿತ್ರ ಖುರ್‌ಆನನ್ನು ನಾನೇ ಸಂರಕ್ಷಿಸುವೆನು" ಎಂದು ಅಲ್ಲಾಹನೇ ವಾಗ್ದಾನ ಮಾಡಿದ್ದಾನೆ. ಪವಿತ್ರ ಖುರ್‌ಆನ್ ನೀಡಿರುವ ಆಜ್ಞೆಗಳನ್ನು ಪಾಲಿಸುವುದು ಪ್ರತಿಯೊಬ್ಬ ಮುಸ್ಲಿಮನಿಗೆ ಕಡ್ಡಾಯವಾದ ಕರ್ತವ್ಯವಾಗಿದೆ.

## ಪುನರುತ್ಥಾನದ ದಿನ (ಖಿಯಾಮತ್)

ನಾವೆಲ್ಲರೂ ಮೃತರಾಗುವೆವು. ಅನಂತರ ಅಲ್ಲಾಹನು ನಮ್ಮನ್ನು ಪುನರುಜ್ಜೀವನಗೊಳಿಸುವನು. ಎಲ್ಲಾ ಜನರು ಮೃತರಾದ ನಂತರ ಅಲ್ಲಾಹನು ಎಲ್ಲರನ್ನೂ ಜೀವಂತರನ್ನಾಗಿ ಮಾಡುವನು. ಅದು ಒಂದು ವಿಶಿಷ್ಟವಾದ ಆಧ್ಯಾತ್ಮಿಕ ಜೀವಿತವಾಗಿರುವುದು. ಪುನರುಜ್ಜೀವಿಸಲ್ಪಡುವ ಆ ದಿನವನ್ನು ಯೌಮುಲ್ ಖಿಯಾಮತ್ (ಪುನರುತ್ಥಾನದ ದಿನ) ಎಂದೂ ಯೌಮುಲ್ ಆಖಿರ್ (ಅಂತ್ಯ ದಿನ) ಎಂದೂ ಹೇಳುತ್ತಾರೆ. ಆ ದಿನ ಅಲ್ಲಾಹನು ಎಲ್ಲರನ್ನೂ ವಿಚಾರಣೆ ಮಾಡುವನು. ಸತ್ಕೃತ್ಯಗಳನ್ನು ಮಾಡಿದವರಿಗೆ ಒಳ್ಳೆಯ ಪ್ರತಿಫಲ ಮತ್ತು ದುಷ್ಕೃತ್ಯಗಳನ್ನು ಮಾಡಿದವರಿಗೆ ಶಿಕ್ಷೆ ಅಲ್ಲಾಹನಿಂದ ಲಭಿಸುವುದು. ಸಜ್ಜನರು ಸುಖ ಸಮೃದ್ಧಿಯಿಂದ ಕೂಡಿದ ಸ್ವರ್ಗದಲ್ಲಿ ಪ್ರವೇಶಿಸಲ್ಪಡುವರು. ಅವರು ಅಲ್ಲಿ ಸದಾಕಾಲ ವಾಸಿಸುವರು. ಅವರು ಅಲ್ಲಾಹನ ದರ್ಶನಭಾಗ್ಯವನ್ನು ಪಡೆಯುವರು. ದುರ್ಜನರು ನರಕದಲ್ಲಿ ಬೀಳುವರು. ಅವರು ಅಲ್ಲಿ ಅನೇಕ ತರದ ಕಷ್ಟಗಳನ್ನೂ ನೋವನ್ನೂ ಅನುಭವಿಸುವರು. ಆ ಶಿಕ್ಷೆ ದೀರ್ಘಕಾಲದ ತನಕ ಇರುವುದು.

**ಅಹ್ಮದಿಯರಿಗೆ ಸುತ್ತೋಲೆ**

# ಇಸ್ಲಾಮ್ ಧರ್ಮದ ಪ್ರಚಾರ - ನಮ್ಮ ಹೆಗ್ಗುರುತು

ಇಸ್ಲಾಮಿನ ಲೋಕದಲ್ಲಿ ಅಹ್ಮದಿಯಾ ಜಮಾಅತ್ ಅನ್ಯರಿಗಿಲ್ಲದ ಅನೇಕ ವೈಶಿಷ್ಟ್ಯಗಳನ್ನು ಹೊಂದಿದೆ. ಅವುಗಳಲ್ಲಿ ಮಹತ್ವಪೂರ್ಣವಾದುದು ಏನೆಂದರೆ, ಇಸ್ಲಾಮ್ ಧರ್ಮದ ವಿಸ್ತೃತ ಪ್ರಚಾರವೆಂಬ ಪರಿಶುದ್ಧ ಮತ್ತು ಮುಖ್ಯ ಧಾರ್ಮಿಕ ಕರ್ತವ್ಯದ ಈಡೇರಿಸುವಿಕೆಗಾಗಿ ಅಲ್ಲಾಹನು ಈ ಏಕಮಾತ್ರ ಆಧ್ಯಾತ್ಮಿಕ ಸಂಘಟನೆಯನ್ನು ಆಯ್ಕೆಮಾಡಿರುವನು. ಈ ಪ್ರಚಾರದ ಅಭಿಯಾನವು ಜಾಗತಿಕ ಮಟ್ಟದಲ್ಲಿ ಅಲ್ಲಾಹನ ಸಹಾಯದಿಂದ ಜಾರಿಯಲ್ಲಿದೆ ಮತ್ತು ಅಸಾಧಾರಣವಾದ ವಿಜಯವು ಲಭಿಸುತ್ತಾ ಇದೆ. ಲೋಕದಾದ್ಯಂತ ಪ್ರಸಿದ್ಧರಾಗಿರುವ ದೊಡ್ಡ ದೊಡ್ಡ ಸಂಶೋಧಕರು ಮತ್ತು ಬುದ್ಧಿಜೀವಿಗಳು ಈ ವಾಸ್ತವಿಕ ಸತ್ಯವನ್ನು ಮನವರಿಕೆ ಮಾಡುತ್ತಾ ಇದ್ದಾರೆ. ಅಮೇರಿಕನ್ ಯುನಿವರ್ಸಿಟಿಯ ಯುಗೋಸ್ಲಾವಿಯಾ ಮೂಲದ ಸಂಶೋಧಕ ಪ್ರೊಫೆಸರ್ ಸ್ಟಾಂಕೋ ಎಮ್. ವುಜಿಕಾ (STANKO M. VUJIKA) ಹೀಗೆ ಬರೆದಿದ್ದಾರೆ:

"ಅಹ್ಮದಿಯರು ಇಸ್ಲಾಮಿನ ಸಂದೇಶವನ್ನು ಲೋಕದಲ್ಲೆಲ್ಲಾ ಪ್ರಚಾರಮಾಡುವ ಉದ್ದೇಶಕ್ಕಾಗಿ ತಮ್ಮ ಹೃದಯ ಮತ್ತು ಜೀವದೊಂದಿಗೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಇಸ್ಲಾಮ್ ಧರ್ಮದ ಪ್ರಚಾರಮಾಡುವುದು ಪ್ರತಿಯೊಬ್ಬ ಮುಸ್ಲಿಮನ ಮೂಲಭೂತ ಕರ್ತವ್ಯವೆಂದು ಅವರು ಭಾವಿಸುತ್ತಾರೆ..... ಲೋಕದ ವಿವಿಧ ಭಾಗಗಳಲ್ಲಿ ಅವರ ಪ್ರಚಾರ ಕೇಂದ್ರಗಳು ಸ್ಥಾಪಿತವಾಗಿವೆ. ಅಮೇರಿಕದಲ್ಲಿ ಮಾತ್ರವಲ್ಲ, ಯುರೋಪಿನ ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಸ್ಪೈನ್, ಹಾಲೆಂಡ್, ಜರ್ಮನಿ, ನಾರ್ವೆ, ಸ್ವೀಡನ್ ಮೊದಲಾದ ಕಡೆಗಳಲ್ಲಿ ಅವರ ವ್ಯವಸ್ಥಿತ ಪ್ರಚಾರ ಕೇಂದ್ರಗಳಿವೆ. ದಕ್ಷಿಣ ಅಮೇರಿಕದ ದೇಶಗಳ ಪೈಕಿ ಟ್ರಿನಿಡಾಡ್, ಬ್ರೆಝಿಲ್ ಮತ್ತು ಕೋಸ್ಟಾರೀಕಾದಲ್ಲಿ ಈ ಜನರು ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಏಷ್ಯಾ ಖಂಡದ ಸಿಲೋನ್, ಬರ್ಮಾ, ಫಿಲಿಫೈನ್ಸ್, ಇಂಡೋನೇಷಿಯಾ, ಇರಾನ್, ಇರಾಖ್ ಮತ್ತು ಸಿರಿಯಾ ದೇಶಗಳಲ್ಲಿ ಅವರ ಮತಪ್ರಚಾರಕರು ಕೆಲಸ ಮಾಡುತ್ತಿದ್ದಾರೆ. ಆಫ್ರಿಕಾ ಖಂಡದ ಈಜಿಪ್ಟ್, ಝಂಜೀಬಾರ್, ನಟಾಲ್, ಸಿಯೆರ್ರಾಲಿಯೋನ್, ಘಾನ, ನೈಜೀರಿಯಾ, ಮೊರಾಕೋ, ಮೊರಿಷ್ಯಸ್ ದೇಶಗಳಲ್ಲಿ ಅವರ ಶಾಖೆಗಳು ಕಾರ್ಯಪ್ರವೃತ್ತವಾಗಿವೆ. ಸಿಯೆರ್ರಾ ಲಿಯೋನಿನ ಹೊಸ ಗಣರಾಜ್ಯ ಪಶ್ಚಿಮ ಆಫ್ರಿಕದಲ್ಲಿ ಅಹ್ಮದಿಯಾ ಸಂಘಟನೆಗೆ ಒಂದು ಆಯ್ಕೆಯ ಭೂಭಾಗದ ಸ್ಥಿತಿಯನ್ನು ಪಡೆದಿದೆ..... ಈ ಸಂಘಟನೆಯು ಈ ಚಿಕ್ಕ ದೇಶದಲ್ಲಿ ವಿಶಿಷ್ಟ ಪ್ರಭಾವ ಗಳಿಸಿದೆ." ("ಈಸ್ಟರ್ನ್ ವರ್ಲ್ಡ್", ಇಂಗ್ಲೆಂಡ್ ಡಿಸೆಂಬರ್ 1961)


ಪ್ರೊಫೆಸರ್ ಸ್ಟಾಂಕೋ ಎಮ್. ವುಜಿಕಾ ಅಹ್ಮದಿಯಾ ಸಂಘಟನೆಯ ಕುರಿತು ಮಾಡಿದ ಈ ಮೌಲ್ಯ ಮಾಪನವು 46 ವರ್ಷಗಳಷ್ಟು ಹಿಂದಿನದಾಗಿದೆ. ಈಗ ಈ ಜಮಾಅತ್ ಭೂಲೋಕದ 190 ದೇಶಗಳಲ್ಲಿ ಧರ್ಮ ಪ್ರಚಾರದ ಪರಿಶುದ್ಧ ಕರ್ತವ್ಯವನ್ನು ಸುವ್ಯವಸ್ಥಿತವಾಗಿ ಮಾಡುತ್ತಾ ಇದೆ. "ತಹ್‌ರೀಕ್ ಜದೀದ್" ಅಭಿಯಾನದ ಪ್ರವರ್ತಕರಾದ ಹಝ್ರತ್ ಮುಸ್ಲಿಹ್ ಮೌಊದ್‌ರವರು(ರ) ತನ್ನ ಜ್ಞಾನಭರಿತವಾದ ಒಂದು ಪ್ರವಚನದಲ್ಲಿ ಅಹ್ಮದಿಯಾ ಜಮಾಅತ್‌ನೊಂದಿಗೆ, "ಈ ವೈಶಿಷ್ಟ್ಯಪೂರ್ಣ ಸ್ಥಾನವನ್ನು ಸ್ಥಿರವಾಗಿ ಕಾಪಾಡಲು ಮತ್ತು ಪ್ರತಿಕ್ಷಣ ಜಮಾಅತನ್ನು ವೃದ್ಧಿಸುತ್ತಾ ಹೋಗಲು ಇರುವ ಏಕ ಮಾತ್ರ ಮಾರ್ಗ ತಹ್‌ರೀಕ್ ಜದೀದ್ ಆಗಿದೆ" ಎಂದು ಹೇಳಿರುವರು. ಆದುದರಿಂದ ಅಹ್ಮದಿಯಾ ಜಮಾಅತ್‌ಗೆ ಸೇರಿದ ಪ್ರತಿಯೊಬ್ಬರು ಈ ಅಭಿಯಾನದಲ್ಲಿ ತಮಗೆ ಸಾಧ್ಯವಿರುವಷ್ಟು ಮಟ್ಟಿಗೆ ಉತ್ಸಾಹದಿಂದ ಭಾಗವಹಿಸಬೇಕು. ಹುಝೂರ್‌ರವರು ಹೀಗೆ ಹೇಳಿದರು:

"ಇದು ನೀವು ಹೆಮ್ಮೆಪಡಬಹುದಾದ ಒಂದು ಸ್ಥಾನವಾಗಿದೆ. ಇದನ್ನು ಬೇರೆ ಯಾರಿಗೂ ಇಂದಿನ ತನಕ ಗಳಿಸಲು ಸಾಧ್ಯವಾಗಲಿಲ್ಲ. ಇದನ್ನು ನಿಮ್ಮ ವಿರೋಧಿಗಳಲ್ಲಿ ಯಾರೂ ನಿರಾಕರಿಸಲು ಧೈರ್ಯ ಹೊಂದಿಲ್ಲ. ನೀವು ನಿಮಗೆ ದೊರೆತ ಹೆಮ್ಮೆಯ ಸ್ಥಾನವನ್ನು ಸ್ಥಿರವಾಗಿ ಕಾಪಾಡಿರಿ ಮತ್ತು ತಹ್‌ರೀಕ್ ಜದೀದ್ ಅಭಿಯಾನದಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸಿ ನಿಮ್ಮ ಸ್ಥಾನದ ಅಂತಸ್ತನ್ನು ವರ್ಧಿಸುತ್ತಾ ಹೋಗಿರಿ." (ಅಲ್‌ಮುಸ್ಲಿಹ್ 13-1-1953)

ಅಲ್ಲಾಹನು ನಮ್ಮ ವೈಶಿಷ್ಟ್ಯಪೂರ್ಣ ಸ್ಥಾನವನ್ನು ಸಂರಕ್ಷಿಸಲು ಮತ್ತು ಅದನ್ನು ಕ್ರಮೇಣ ಹೆಚ್ಚು ಹೆಚ್ಚಾಗಿ ಉನ್ನತಗೊಳಿಸುತ್ತಾ ಇರಲು ಸೌಭಾಗ್ಯವನ್ನು ದಯಪಾಲಿಸಲಿ.

- ವಕೀಲುಲ್ ಮಾಲ್ ತಹ್‌ರೀಕ್ ಜದೀದ್, ಖಾದಿಯಾನ್

## ನಿಧನ ವಾರ್ತೆ



### ಬಶೀರ್ ಅಹ್ಮದ್ ಸಾಹೇಬ್

ಮೊಗ್ರಾಲ್ ಅಹ್ಮದಿಯಾ ಜಮಾಅತಿನ ಬಶೀರ್ ಅಹ್ಮದ್ ಸಾಹೇಬ್ (ಕುಂಬಳೆ) ತನ್ನ 53ನೇ ಪ್ರಾಯದಲ್ಲಿ 21-11-2007ರಂದು ನಿಧರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.")

ಬಶೀರ್ ಅಹ್ಮದ್ ಸಾಹೇಬರು ಮೊಗ್ರಾಲ್ ಜಮಾಅತಿನ ಆದಿ ಕಾಲ ಅಹ್ಮದಿಯರಲ್ಲಿ ಓರ್ವರಾದ ಮರ್ಹೂಮ್ ಎ. ಮಮ್ಮು ಮಾಸ್ಟರ್ ಸಾಹೇಬರ ಹಿರಿಯ ಪುತ್ರರಾಗಿದ್ದಾರೆ. ಅವರು ಮಸ್ಕತ್, ಅಬುದಾಬಿ, ಒಮಾನ್ ಮೊದಲಾದ ಕಡೆಗಳಲ್ಲಿ ಜಮಾಅತಿಗೆ ಸೇವೆ ಸಲ್ಲಿಸಿದ್ದಾರೆ.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

# ಸಂಪಾದಕರಿಗೆ ಪತ್ರ

ಮಾನ್ಯರೇ,

ತಾವು ವಿಶ್ವಾಸದಿಂದ ಕಳುಹಿಸಿದ ಯುಗರಶ್ಮಿ ಪತ್ರಿಕೆ ಸಂಪುಟ 24 ಸಂಚಿಕೆ 3 (ಆಗಸ್ಟ್ 2007) ಕೈ ಸೇರಿತು; ಕೃತಜ್ಞನು.

ಈ ತ್ರೈಮಾಸಿಕದಲ್ಲಿ ಮುಸ್ಲಿಂ ಧಾರ್ಮಿಕ ಲೇಖನಗಳು ಚೆನ್ನಾಗಿ ಬಂದಿವೆ. ಪತ್ರಿಕೆಯ ಮುದ್ರಣ ಹಾಗೂ ಭಾಷೆಯೂ ಚೆಲುವಾಗಿದೆ.

ಇತಿ ವಿಶ್ವಾಸಿ,

**- ನಾಡೋಜ ಡಾ। ಕಯ್ಯಾರ ಕಿಞ್ಞಣ್ಣ ರೈ,**

ಪೆರಡಾಲ.

---

ಆತ್ಮೀಯ ಸಂಪಾದಕರೇ,

ತಾವು ನಮ್ಮ ಬೇಡಿಕೆ ಅನುಸರಿಸಿ ನಮ್ಮ ತತ್ವಾನ್ವೇಷಣ ಸಂಸ್ಥೆಗೆ ತಮ್ಮ ತ್ರೈಮಾಸಿಕ ಪತ್ರಿಕೆಗಳನ್ನು ಕಳುಹಿಸುತ್ತಿದ್ದೀರಿ. ಅವುಗಳನ್ನು ನಮ್ಮ ಗ್ರಂಥಾಲಯದಲ್ಲಿ ಇಟ್ಟು, ಎಲ್ಲ ಓದುಗರಿಗೆ ಅನುಕೂಲವಾಯಿತು. ನಿಮ್ಮ ಪತ್ರಿಕೆಗಳನ್ನು ಓದಿ ನಮ್ಮ ಸದಸ್ಯರು ಆನಂದಪಟ್ಟಿದ್ದಾರೆ. ಇದು ಇಂದಿನ ಸಮಾಜ ಸುಧಾರಣೆಗೆ ಉಪಯುಕ್ತವೆಂದು ಪರಿಗಣಿಸಿದ್ದೇವೆ.

ತಮ್ಮ ಪತ್ರಿಕೆಯಲ್ಲಿ ಕನ್ನಡ ಭಾಷೆ ಮತ್ತು ಇಸ್ಲಾಂ ಬಗ್ಗೆ ಒಳ್ಳೆಯ ಉಪಯುಕ್ತ ಹಾಗೂ ಸಮರ್ಪಕ ಮಾಹಿತಿಗಳು ಇರುತ್ತವೆ. ಈ ಪತ್ರಿಕೆಯಿಂದ ಇಸ್ಲಾಂ ಧರ್ಮವು ಶಾಂತಿ ಧರ್ಮ, ಧರ್ಮದ ಹೋರಾಟದ ಬಗ್ಗೆ ಮತ್ತು ಉಳಿದ ಧರ್ಮಗಳ ಬಗ್ಗೆ ಹೊಂದಿದ ಮಹಾನ್ ತತ್ವನಿಷ್ಠ ವಿಚಾರಗಳು ಬಹಳ ಉನ್ನತ ಅನಿಸುತ್ತದೆ. ಪತ್ರಿಕೆಯ ಪ್ರೋತ್ಸಾಹದಿಂದ ಮುನ್ನುಗ್ಗಿ, ಸಮಾಜದ ಏಳಿಗೆಗೆ ಅನುಕೂಲ ಮಾಡಿಕೊಡಲೆಂದು ಅಲ್ಲಾಹನಲ್ಲಿ ನಾವು ಪ್ರಾರ್ಥಿಸುತ್ತೇವೆ ಮತ್ತು ತಮಗೆಲ್ಲ ಶುಭಕೋರಿ ಅಭಿನಂದನೆ ಸಲ್ಲಿಸುತ್ತೇವೆ.

ವಂದನೆಗಳೊಂದಿಗೆ,

**- S. M. TOTAD**

ಪ್ರೆಸಿಡೆಂಟ್,

ಬಿಜಾಪುರ್ ತಿಯಾಸೊಫಿಕಲ್ ಸೊಸೈಟಿ ಆಫ್ ಇಂಡಿಯಾ,

ಬಿಜಾಪುರ .

"ಯುಗರಶ್ಮಿ"ಯ ಈ ವರ್ಷದ ಪ್ರತಿಗಳನ್ನು ಉಚಿತವಾಗಿ ವಿತರಣೆ ಮಾಡಲು ಸಹಾಯಧನ ನೀಡಿದ ಉದಾರಶೀಲರು:

1. ಶಬೀರ್ ಅಹ್ಮದ್ ಸಾಹೇಬ್, ಕೋಝಿಕ್ಕೋಡ್. (35 ಪ್ರತಿಗಳು)
2. ಕೆ.ಪಿ. ಮಸ್‌ಊದ್ ಅಹ್ಮದ್ ಸಾಹೇಬ್, ಪಯಂಗಾಡಿ. (35 ಪ್ರತಿಗಳು)

# ಧರ್ಮದ ನಾಮದಲ್ಲಿ ರಕ್ತಪಾತ

- ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

## ಅಧ್ಯಾಯ - 6
## ಧರ್ಮತ್ಯಾಗ

"'ನಾನು ಮುಸ್ಲಿಮ್' ಎಂದು ಹೇಳುವ ಪ್ರತಿಯೊಬ್ಬನ ಹೆಸರನ್ನು ಬರೆದು ನನಗೆ ಕೊಡಿರಿ." - ಹಝ್ರತ್ ಮುಹಮ್ಮದ್ ಪೈಗಂಬರ್[ಸ]

ಮಧ್ಯಕಾಲೀನ ಕ್ರೈಸ್ತರು ಮತ್ತು ಮೌಲಾನ ಮೌದೂದಿ ಪ್ರತಿಪಾದಿಸುವಂತಹ ಶಿಕ್ಷಾರ್ಹವಾದ ಧರ್ಮತ್ಯಾಗದ ಕಲ್ಪನೆ ಇಸ್ಲಾಮ್ ಧರ್ಮಕ್ಕೆ ಹೊರತಾಗಿದೆ. ಅರಬಿ ಭಾಷೆಯಲ್ಲಿ ಶಿಕ್ಷಾರ್ಹವಾದ ಧರ್ಮತ್ಯಾಗವನ್ನು ಸೂಚಿಸುವ ಶಬ್ದವು ಕೂಡ ಇಲ್ಲ. ಹಿಂದಿನ ಕಾಲದ ಮುಸ್ಲಿಮ್ ವಿದ್ವಾಂಸರು ಧರ್ಮತ್ಯಾಗವನ್ನು ಮರಣ ದಂಡನೆಗೆ ಅರ್ಹವಾದ ಅಪರಾಧವೆಂದು ಗಣಿಸಿದ್ದರೂ ಅವರು ಮುಸ್ಲಿಮ್ ಎಂಬ ಪದಕ್ಕೆ ನೀಡಿದ ವಿವರಣೆ ಬಹಳ ವಿಸ್ತಾರವಾದ ಆಯಾಮವನ್ನು ಹೊಂದಿದ್ದು ತನ್ನನ್ನು ಮುಸ್ಲಿಮ್ ಎಂದು ಕರೆದುಕೊಳ್ಳುವವನ ಮೇಲೆ ಧರ್ಮತ್ಯಾಗಿ ಎಂದು ಆರೋಪಿಸಲು ಸಾಧ್ಯವಿರಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಮುಸ್ಲಿಮ್ ಪದಕ್ಕೆ ಎರಡು ವಿವರಣೆಗಳನ್ನು ನೀಡಿದ್ದಾರೆ. ಮದೀನ ನಗರದಲ್ಲಿ ನಡೆಸಿದ ಪ್ರಥಮ ಜನಗಣತಿಯ ಸಂದರ್ಭದಲ್ಲಿ ಅವರು ಹೀಗೆಂದರು: "'ನಾನು ಮುಸ್ಲಿಮ್' ಎಂದು ಹೇಳುವ ಪ್ರತಿಯೊಬ್ಬನ ಹೆಸರನ್ನು ಬರೆದು ನನಗೆ ಕೊಡಿರಿ." (ಸಹೀಹ್ ಬುಖಾರಿ-ಬಾಬ್ ಕಿತಾಬತ್ ಅಲ್ ಈಮಾನ್ ಅಲ್ ನಾಸ್.) ಇನ್ನೊಂದು ಸಂದರ್ಭದಲ್ಲಿ ಅವರು ಹೀಗೆಂದರು: "ನಾವು ನಮಾಝ್ ಮಾಡುವ ಹಾಗೆ ನಮಾಝ್ ಮಾಡುವವನು, ನಾವು ಯಾವ ಕಡೆಗೆ ಅಭಿಮುಖೀಕರಿಸುತ್ತೇವೋ ಆ ಕಡೆಗೆ ಅಭಿಮುಖೀಕರಿಸಿ ಪ್ರಾರ್ಥಿಸುವವನು, ನಾವು ದ್ಬಹ್ ಮಾಡಿದುದನ್ನು ತಿನ್ನುವವನು ಮುಸ್ಲಿಮನಾಗಿದ್ದಾನೆ. ಅವನ ವಿಚಾರ ಅಲ್ಲಾಹನ ಹೊಣೆಗಾರಿಕೆಯಾಗಿದೆ ಮತ್ತು ಸಂದೇಶವಾಹಕನ ಹೊಣೆಗಾರಿಕೆಯೂ ಆಗಿದೆ. ಆದುದರಿಂದ ಅಲ್ಲಾಹನ ಹೊಣೆಗಾರಿಕೆಗೆ ವಿರುದ್ಧವಾಗಿ ವರ್ತಿಸಬೇಡಿರಿ." (ಸಹೀಹ್ ಬುಖಾರಿ - ಕಿತಾಬುಸ್ಸಲಾತ್, ಬಾಬ್ ಫಝ್ಲ್ ಇಸ್ತಿಕ್‌ಬಾಲ್ ಅಲ್ ಖಿಬ್ಲ)

ಆದರೆ ಮೌಲಾನ ಮೌದೂದಿ ಮತ್ತು ಇತರ ಮತಪಂಡಿತರು ಮುಸ್ಲಿಮ್ ದೇಶಗಳಲ್ಲಿರುವ ನಿರಂಕುಶ ಪ್ರಭುತ್ವ ಮತ್ತು ಸ್ವಾಯತ್ತಾಧಿಪತ್ಯವನ್ನು ಬೆಂಬಲಿಸುತ್ತಾ ಪ್ರವಾದಿಯವರ[ಸ] ಈ ಸರಳ ವಿವರಣೆಗೆ ಅನೇಕ ನಿಬಂಧನೆಗಳನ್ನು ಸೇರಿಸಿರುತ್ತಾರೆ. ಇಮಾಮ್ ಅಲ್‌ಗಝ್ಝಾಲಿ (450 - 505 ಹಿಜರಿ/ಕ್ರಿ.ಶ. 1058-1113) ಅವರ ಮಾತಿನಲ್ಲಿ ಈ ಬಗ್ಗೆ ಹೀಗೆ ಹೇಳಬಹುದು: "ಅವರು ದೇವನ ಕರುಣೆಯನ್ನು ಸೀಮಿತಗೊಳಿಸಿ ಧಾರ್ಮಿಕ ಪಂಡಿತರ ಒಂದು ಚಿಕ್ಕ ಗುಂಪಿಗೆ ಮಾತ್ರ ಸ್ವರ್ಗವನ್ನು ಕಾದಿರಿಸಲು ಬಯಸುತ್ತಾರೆ." (ಅಲ್ ಗಝ್ಝಾಲಿ - ಫೈಸಲಲ್ ತಫ್ರೀಖ ಬೈನಲ್ ಇಸ್ಲಾಂ ವಲ್ ಝಂದಕ - ಕೈರೋ, 1901)

ಗಲಭೆಗಳ ಕುರಿತು ವಿಚಾರಣೆ ನಡೆಸಲು ಪಾಕಿಸ್ತಾನದ ಪಂಜಾಬ್ ಸರಕಾರದಿಂದ ನೇಮಿಸಲ್ಪಟ್ಟ ವಿಚಾರಣಾ ನ್ಯಾಯಾಲಯದ ಅಧ್ಯಕ್ಷರೂ ಅನಂತರ ಪಾಕಿಸ್ತಾನದ ಸುಪ್ರೀಮ್ ಕೋರ್ಟಿನ ಚೀಫ್ ಜಸ್ಟೀಸರೂ ಆಗಿದ್ದ ಮುಹಮ್ಮದ್ ಮುನೀರ್‌ರವರು ಮತಪಂಡಿತರ ಬಗ್ಗೆ ಹೀಗೆ ಹೇಳುತ್ತಾರೆ:

"ಮತಪಂಡಿತರು ಮುಸ್ಲಿಮ್ ಪದಕ್ಕೆ ನೀಡಿದ ವಿವಿಧ ವಿವರಣೆಗಳನ್ನು ಪರಿಶೀಲಿಸಿದರೆ ನಾವು ಹೀಗಲ್ಲದೆ ಬೇರೆ ಏನು ಹೇಳಲು ಸಾಧ್ಯ? ಈ ಮೂಲಭೂತ ಪ್ರಶ್ನೆಯ ಬಗ್ಗೆ ಯಾವುದೇ ಇಬ್ಬರು ಮತ ಪಂಡಿತರು ಒಮ್ಮತವನ್ನು ಹೊಂದಿಲ್ಲ. ಪ್ರತಿಯೊಬ್ಬ ಮತ ಪಂಡಿತ ನೀಡಿದ ವಿವರಣೆಯ ರೀತಿಯಲ್ಲಿ ನಾವು ಸಹ ನಮ್ಮದೇ ಆದ ಒಂದು ವಿವರಣೆಯನ್ನು ನೀಡಿದರೆ ಮತ್ತು ಆ ವಿವರಣೆ ಬೇರೆ ಎಲ್ಲರ ವಿವರಣೆಗಿಂತ ಬೇರೆಯಾದರೆ ನಾವು ಅವರ ಅಭಿಪ್ರಾಯ ಪ್ರಕಾರ ಇಸ್ಲಾಮಿನ ವಲಯದಿಂದ ಹೊರಗಾಗುವೆವು. ನಾವು ಒಬ್ಬ ಮತಪಂಡಿತನ ವಿವರಣೆಯನ್ನು ಅಂಗೀಕರಿಸಿದರೆ, ನಾವು ಆ ಮತಪಂಡಿತನ ಅಭಿಪ್ರಾಯ ಪ್ರಕಾರ ಮುಸ್ಲಿಮರಾಗುತ್ತೇವೆ. ಆದರೆ ಆ ಮತ ಪಂಡಿತನೊಂದಿಗೆ ಒಮ್ಮತ ಹೊಂದದ ಇತರರ ಪ್ರಕಾರ ಕಾಫಿರ್(ಅವಿಶ್ವಾಸಿ) ಆಗುತ್ತೇವೆ." (ಮುನೀರ್ ಕಮಿಶನ್ ರಿಪೋರ್ಟ್, 1954 - ಪುಟ 28)

ಜಸ್ಟೀಸ್ ಮುನೀರ್‌ರವರ ಅವಲೋಕನದೊಂದಿಗೆ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಉಸಾಮ ಬಿನ್ ಝೈದ್‌ರವರನ್ನು[ರ] ಆಕ್ಷೇಪಿಸಿದ ಘಟನೆಯನ್ನು ಪರಿಶೀಲಿಸಿರಿ. ಇಬ್ನು ಇಸ್‌ಹಾಖ್ ಹೀಗೆ ವರದಿ ಮಾಡುತ್ತಾರೆ: ಉಸಾಮ ಬಿನ್ ಝೈದ್[ರ] ಮತ್ತು ಇನ್ನೊಬ್ಬರು ಸೇರಿಕೊಂಡು ಗಾಲಿಬ್ ಬಿನ್ ಅಬ್ದುಲ್ಲಾ ಅಲ್ ಕಲ್‌ಬಿಯೊಡನೆ ಹೋರಾಡಿದ ಸಂದರ್ಭದಲ್ಲಿ ಒಬ್ಬನನ್ನು ಕೊಂದರು. ಆ ಬಗ್ಗೆ ಉಸಾಮ ಬಿನ್ ಝೈದ್[ರ] ಹೀಗೆ ಹೇಳುತ್ತಾರೆ:

"ನಾನು ಮತ್ತು ಒಬ್ಬ ಮದೀನ ನಿವಾಸಿ ಒಬ್ಬ ಶತ್ರುವನ್ನು ಬೆನ್ನಟ್ಟಿ ಕೊಲ್ಲಲು ಸಿದ್ಧರಾದಾಗ, ಆತನು 'ಶಹಾದತ್ ಕಲಿಮ' ಉಚ್ಚರಿಸಿದನು. ಆದರೆ ನಾವು ಆತನನ್ನು ಕೊಂದೆವು. ನಾವು ಈ ಘಟನೆಯನ್ನು ಪ್ರವಾದಿಯವರಿಗೆ[ಸ] ತಿಳಿಸಿದಾಗ ಅವರು ಹೇಳಿದರು: 'ಆತನು ಸತ್ಯ ವಿಶ್ವಾಸವನ್ನು ಸ್ವೀಕರಿಸಲು ಸಿದ್ಧನಾದುದನ್ನು ಕಡೆಗಣಿಸಿದುದಕ್ಕಾಗಿ ನಿಮ್ಮನ್ನು ದೋಷಮುಕ್ತರನ್ನಾಗಿ ಮಾಡಬಲ್ಲವರು ಯಾರು?' ಆಗ ನಾನು, 'ಅವನು ಕೊಲೆಯಿಂದ ತಪ್ಪಿಸಿಕೊಳ್ಳಲು ಕಲಿಮವನ್ನು ಉಚ್ಚರಿಸಿದ್ದನು' ಎಂದು ಹೇಳಿದೆ. ಆದರೆ ಪ್ರವಾದಿಯವರು[ಸ] ತಾನು ಕೇಳಿದ ಪ್ರಶ್ನೆಯನ್ನು ಪುನರಾವರ್ತಿಸುತ್ತಾ ಇದ್ದರು. ಆಗ ನಾನು ಆಶಿಸಿದೆ: ನಾನು ಅಂದಿನ ತನಕ ಮುಸ್ಲಿಮನಾಗದೆ ಇದ್ದು ಆತನನ್ನು ಕೊಲ್ಲದೆ ಇರುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ನಾನು ಪ್ರವಾದಿಯವರೊಂದಿಗೆ[ಸ] ಕ್ಷಮೆಯನ್ನು ಯಾಚಿಸಿದೆ ಮತ್ತು ಕಲಿಮವನ್ನು ಉಚ್ಚರಿಸಿದ ಯಾರನ್ನೂ ಇನ್ನು ಮುಂದೆ ಎಂದೂ ಕೊಲ್ಲುವುದಿಲ್ಲ ಎಂದು ಹೇಳಿದೆ. ಪ್ರವಾದಿ[ಸ] ಹೇಳಿದರು: 'ನೀನು ನನ್ನ ಮರಣಾನಂತರವೂ ಹೀಗೆಯೇ ಮಾಡುವಿಯೋ?' ನಾನು ಹೇಳಿದೆ: 'ಹೌದು, ಹಾಗೆಯೇ ಮಾಡುವೆನು.'" (ಸೀರತ್ ರಸೂಲುಲ್ಲಾಹ್- ಇಬ್ನು ಹಿಶಾಮ್)

ಶಹಾದತ್ ಕಲಿಮವನ್ನು ಉಚ್ಚರಿಸುವ ಮುಸ್ಲಿಮರ ಬಗ್ಗೆ ಹಝ್ರತ್

ಮುಹಮ್ಮದ್ ಪೈಗಂಬರರಿಗೆ(ಸ) ಕಾಳಜಿ ಇರುವುದರೊಂದಿಗೆ ಅವರನ್ನು ದಾರಿತಪ್ಪಿದ ಜನರು ಇಸ್ಲಾಮಿನ ನಾಮದಲ್ಲಿ ಕೊಲ್ಲಬಹುದೆಂಬ ಭೀತಿ ಸಹ ಅವರಿಗಿತ್ತೆಂದು ಮೇಲಿನ ಘಟನೆಯಿಂದ ತಿಳಿಯುತ್ತದೆ. ಇದೇ ಘಟನೆಯ ಕುರಿತು ಮುಸ್‌ನದ್ ಇಮಾಮ್ ಅಹ್ಮದ್ ಬಿನ್ ಹಂಬಲ್‌ರವರ ಹದೀಸು ಗ್ರಂಥದಲ್ಲಿ ಹೀಗೆ ಬರೆದಿದೆ: "ಪ್ರವಾದಿಯವರು(ಸ) ಉಸಾಮರವರೊಂದಿಗೆ(ರ) ಕೇಳಿದರು: 'ಆತನ ಹೇಳಿಕೆಯ ಸತ್ಯಾಸತ್ಯತೆಯನ್ನು ಕಂಡುಹಿಡಿಯಲು ನೀನು ಆತನ ಹೃದಯವನ್ನು ತೆರೆದು ನೋಡಿದ್ದೀಯಾ?"

ಹೀಗಿದ್ದರೂ ಅಧಿಕಾರದ ಲಾಲಸೆಯಿಂದ ಪೀಡಿತರಾಗಿ ರಾಜಕೀಯ ಮಹತ್ವಾಕಾಂಕ್ಷೆ ಹೊಂದಿದ ಮತಪಂಡಿತರು, ಅಜ್ಞಾನಿಗಳಾದ ಮುಸ್ಲಿಮರು ತಮ್ಮ ಸಹೋದರರಾದ ಮುಸ್ಲಿಮರನ್ನು, ಅವರು ಕೆಲವೊಂದು ವಿಷಯಗಳ ಬಗ್ಗೆ ಬೇರೆಯೇ ಅಭಿಪ್ರಾಯಗಳನ್ನು ಹೊಂದಿದ ಅಪರಾಧಕ್ಕಾಗಿ ಕೊಲ್ಲಲು ಉತ್ತೇಜಿಸುತ್ತಾರೆ. ಹಾಗೆ ಭಿನ್ನಾಭಿಪ್ರಾಯ ಹೊಂದಿದ ಮುಸ್ಲಿಮರ ಹೃದಯಗಳನ್ನು ಸೀಳಿ ಅವರ ವಿಶ್ವಾಸವು ತಪ್ಪಾಗಿದೆ ಎಂದು ಕಂಡುಕೊಂಡಂತೆ ಈ ಮತಪಂಡಿತರು ವರ್ತಿಸುತ್ತಾರೆ.

ಧರ್ಮತ್ಯಾಗದ ಕುರಿತು 'ಇರ್‌ತಿದಾದ್' ಎಂದು ಖುರ್‌ಆನ್ ಕರೆಯುತ್ತದೆ. ಈ ಶಬ್ದದ ಅರ್ಥವೇನೆಂದರೆ, ಒಬ್ಬ ಮುಸ್ಲಿಮನನ್ನು 'ಮುರತದ್ದ್' ಎಂದು ಇನ್ನೊಬ್ಬನು ವಿಧಿಸಲು ಸಾಧ್ಯವಿಲ್ಲ. ಇಮಾಮ್ ರಾಗಿಬ್ ಹೀಗೆ ಹೇಳುತ್ತಾರೆ: 'ಇರ್‌ತಿದಾದ್' ಎಂದರೆ ಒಬ್ಬನು ತಾನು ಹೊರಟ ಸ್ಥಳಕ್ಕೆ ತಿರುಗಿ ಹೋಗುವುದಾಗಿದೆ. ಈ ಶಬ್ದವನ್ನು ಇಸ್ಲಾಮ್‌ನಿಂದ ಕುಫ್ರ್‌ಗೆ (ಅವಿಶ್ವಾಸಕ್ಕೆ) ತಿರುಗಿ ಹೋಗುವುದಕ್ಕೆ ಬಳಸಲಾಗುತ್ತಿದೆ. ಉದಾಹರಣೆಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ಸತ್ಪಥ ದರ್ಶನ ಸ್ಪಷ್ಟಗೊಂಡ ನಂತರ ಯಾರು ಬೆನ್ನು ತಿರುಗಿಸಿ ಹೋಗುತ್ತಾರೋ" (47 : 26); "ನಿಮ್ಮಿಂದ ಯಾರಾದರೂ ತನ್ನ ಧರ್ಮವನ್ನು ತೊರೆದು ಹೊರಗೆ ಹೋದರೆ." (5 : 55)

ಪವಿತ್ರ ಖುರ್‌ಆನ್ ಬಳಸಿದ 'ರಿದ್ದ' (ಇರ್‌ತಿದಾದ್) ಎಂಬ ಪದವು ಅಕರ್ಮಕ ಕ್ರಿಯಾಪದವಾಗಿದೆ. ಇದು ಒಬ್ಬನು ಸ್ವತಃ ಮಾಡುವ ಕರ್ಮವನ್ನು ಸೂಚಿಸುತ್ತದೆ. ಒಬ್ಬನು ಸ್ವತಃ ಮತತ್ಯಾಗ ಮಾಡಬಹುದು ಆದರೆ ಇನ್ನೊಬ್ಬನು ಅವನನ್ನು ಮತತ್ಯಾಗಿ ಎಂದು ವಿಧಿಸಲು ಅಧಿಕಾರವಿಲ್ಲ. ಇದು ಒಬ್ಬನು ಸ್ವತಃ ಮಾಡುವ ಕೆಲಸವಾಗಿದ್ದು ಯಾವುದೇ ಹೊರಗಿನ ವ್ಯಕ್ತಿ ಇದರಲ್ಲಿ ಭಾಗಿಯಾಗಲಾರನು. ಇರ್‌ತಿದಾದ್ ಬಗ್ಗೆ ಇರುವ ಈ ವಿವರಣೆ ಕ್ರೈಸ್ತರು ಮತ್ತು ಮೌಲಾನ ಮೌದೂದಿಯ ಧರ್ಮತ್ಯಾಗವೆಂಬ ಅಪರಾಧ ಕಲ್ಪನೆಯಿಂದ ವ್ಯತ್ಯಸ್ತವಾಗಿದೆ. ಕ್ರೈಸ್ತರು ಮತ್ತು ಮೌಲಾನ ಮೌದೂದಿ ವಿಧಿಸುವ ಶಿಕ್ಷೆಯನ್ನು ವಿಧಿಸುವುದು ಚರ್ಚ್ ಅಥವಾ ಸರಕಾರವಾಗಿದೆ. ಅದು ಮರಣದಂಡನೆ ಅಥವಾ ಕೊಲೆಗೆ ಸಮವಾಗಿದೆ. ಆದರೆ, ಇಸ್ಲಾಮ್ ಪ್ರತಿಪಾದಿಸುವ ಇರ್‌ತಿದಾದ್ ಆತ್ಮಹತ್ಯೆಗೆ ಸಮವಾಗಿದೆ. ಒಬ್ಬನಿಗೆ ಮರಣದಂಡನೆ ವಿಧಿಸಬಹುದು ಅಥವಾ ಅವನನ್ನು ಕೊಲೆ ಮಾಡಬಹುದು. ಆದರೆ ಒಬ್ಬನನ್ನು "ಆತ್ಮಹತ್ಯೆ" ಮಾಡಲಿಕ್ಕಾಗದು.

ಪವಿತ್ರ ಖುರ್‌ಆನಿನ ಸೂರತುಲ್ ಕಾಫಿರೂನ್ ಎಂಬ ಅಧ್ಯಾಯವು ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಿದ್ದು ಇದು ಪ್ರವಾದಿತ್ವದ ಆರಂಭದ ಕಾಲದಲ್ಲಿಯೇ ಅವತೀರ್ಣವಾದುದಾಗಿದೆ. ಪ್ರವಾದಿಯವರು(ಸ) ಅವಿಶ್ವಾಸಿಗಳೊಂದಿಗೆ, "ನಮ್ಮ ಮತ್ತು ನಿಮ್ಮ ಮಧ್ಯೆ ಸಮಾನವಾದ ಜೀವಿತ ವಿಧಾನವು ಇಲ್ಲ; ನಮ್ಮ ಮತ್ತು ನಿಮ್ಮ ಆರಾಧನೆಯ ರೀತಿ ಬೇರೆ ಬೇರೆಯಾಗಿವೆ." ಎಂದು ಹೇಳಲು ಆಜ್ಞಾಪಿಸಲಾಗಿದೆ. ಆದುದರಿಂದ "ನಿಮಗೆ ನಿಮ್ಮ ಧರ್ಮ ನನಗೆ ನನ್ನ ಧರ್ಮ" ಎಂದು ಹೇಳಲಾಗಿದೆ (ಪವಿತ್ರ ಖುರ್‌ಆನ್ 109 : 7)

ಅವಿಶ್ವಾಸಿಗಳು ಪ್ರವಾದಿಯವರ(ಸ) ಸಂದೇಶವನ್ನು ಸ್ವೀಕರಿಸಲು ಸಿದ್ಧರಾಗದಿದ್ದರೆ ಆ ಬಗ್ಗೆ ವ್ಯಾಕುಲಗೊಳ್ಳುವುದು ಬೇಡವೆಂದು ಅಲ್ಲಾಹನು ಪ್ರವಾದಿಯವರಿಗೆ(ಸ) ಪದೇ ಪದೇ ಹೇಳುತ್ತಿದ್ದನು. ಅವರು ಅವಿಶ್ವಾಸಿಗಳ "ವಕೀಲ್" (ಸಂರಕ್ಷಕ ಅಥವಾ ಮೇಲ್ವಿಚಾರಕ) ಅಲ್ಲವೆಂದು ಅವರೊಂದಿಗೆ ಹೇಳಲಾಯಿತು. ಅಲ್ಲಾಹನು ಹೇಳುತ್ತಾನೆ: "ಇದು ಸತ್ಯವಾದರೂ ಜನರು ಇದನ್ನು ತಿರಸ್ಕರಿಸಿದರು. ಹೇಳು: 'ನಾನು ನಿಮ್ಮ ಮೇಲೆ ವಕೀಲ್ (ಸಂರಕ್ಷಕ ಅಥವಾ ಮೇಲ್ವಿಚಾರಕ) ಅಲ್ಲ.' " (ಪವಿತ್ರ ಖುರ್‌ಆನ್ 6 : 67)

ಪ್ರವಾದಿಯವರ(ಸ) ಮಕ್ಕ ಜೀವಿತದ ಕಾಲದಲ್ಲಿಯೇ ಹಾಗೆ ಹೇಳಲಾಯಿತು. ಆ ಕಾಲದಲ್ಲಿ ಪ್ರವಾದಿಯವರನ್ನು(ಸ) ಮತ್ತು ಅವರ ಶಿಷ್ಯರನ್ನು ಹಿಂಸಾಚಾರಕ್ಕೆ ಗುರಿಪಡಿಸಲಾಗುತ್ತಿತ್ತು. ಅನಂತರ ಪ್ರವಾದಿಯವರು(ಸ) ಮದೀನಕ್ಕೆ ಹೋದ ನಂತರ ಅವರಿಗೆ ಅಧಿಕಾರ ದೊರಕಿದರೂ ಅವರು ಅವಿಶ್ವಾಸಿಗಳೊಂದಿಗೆ ಹೇಳಿದುದರಲ್ಲಿ ವ್ಯತ್ಯಾಸವೇನೂ ಆಗಲಿಲ್ಲ. ವಾಸ್ತವದಲ್ಲಿ, ಅದು ಇನ್ನೂ ಹೆಚ್ಚು ಸ್ಪಷ್ಟವಾಯಿತು.

ಮದೀನದಲ್ಲಿ ಅವತೀರ್ಣಗೊಂಡ ಪ್ರಥಮ ಸೂರಃ (ಅಧ್ಯಾಯ) ಅಲ್ ಬಖರವಾಗಿದೆ. ಅದರಲ್ಲಿ ಆತ್ಮಸಾಕ್ಷಿಯ ಸ್ವಾತಂತ್ರವನ್ನು ಚರ್ಚಿಸುವ ವಚನ ಈ ಬಗ್ಗೆ ಸ್ಪಷ್ಟವಾಗಿ ಹೀಗೆ ಘೋಷಿಸುತ್ತದೆ:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟ ಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಆತನು ಸುದೃಢವಾದೊಂದು ಕೈಯಾಸರೆಯನ್ನು ಹಿಡಿದಿರುವನು (ಎಂದು ತಿಳಿದು ಕೊಳ್ಳಲಿ). ಅದು ಎಂದಿಗೂ ಮುರಿದು ಹೋಗುವಂಥದ್ದಲ್ಲ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ." (2 : 257)

ಇದು, ಒಂದು ನಗರದಲ್ಲಿ ತನ್ನ ಅನುಯಾಯಿಗಳ ಸಮುದಾಯವನ್ನು ಸಂಘಟಿಸಿ, ಅದರಲ್ಲಿ ಅತ್ಯಂತ ಉನ್ನತ ಅಧಿಕಾರದ ಸ್ಥಾನವನ್ನು ಪಡೆದ ಪ್ರವಾದಿಯ(ಸ) ಭರವಸೆಯ ಘೋಷಣೆಯಾಗಿದೆ. ಜಿಹಾದ್ ಬಗ್ಗೆ ತಪ್ಪು ಗ್ರಹಿಕೆಯಾಗದಿರುವಂತೆ, "ನಿಜವಾದ ಸದಾಚಾರವು ಒಳ್ಳೆಯ ಕೆಲಸ ಮತ್ತು ಸತ್ಯ ವಿಶ್ವಾಸದ ಮೇಲೆ ಸ್ಥಾಪಿತವಾಗುತ್ತದೆ" ಎಂದು ಮುಸ್ಲಿಮರೊಡನೆ ಹೇಳಲಾಗಿದೆ. ದೇವನ ಮಹಿಮೆಯನ್ನು ಆಯತುಲ್ ಕುರ್‌ಸೀ (ಸಿಂಹಾಸನದ ವಚನ)ದಲ್ಲಿ ಪ್ರಸ್ತಾಪಿಸಲಾಗಿದೆ. (ಪವಿತ್ರ ಖುರ್‌ಆನ್ ವಚನ 256). "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ" ಎಂಬ ವಚನವು ಸಿಂಹಾಸನದ ವಚನದ ನಂತರ ಬಂದಿದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಮುಸ್ಲಿಮರೊಂದಿಗೆ ಶತ್ರುಗಳ ವಿರುದ್ಧ ಹೋರಾಡಲು ಮತ್ತು ದೇವನಿಗೆ ಬಲಿದಾನಗಳನ್ನು ಅರ್ಪಿಸಲು ಹೇಳಿರುವ ಕಾರಣದಿಂದ, ಮುಸ್ಲಿಮರು ಇಸ್ಲಾಮಿನ ಪ್ರಚಾರಕ್ಕಾಗಿ ಬಲಾತ್ಕಾರ ಮಾಡಬೇಕೆಂದು ದೇವನು ಉದ್ದೇಶಿಸಿರುವನೆಂದು ಪವಿತ್ರ ಖುರ್‌ಆನಿನ ಓದುಗರು ತಪ್ಪಾಗಿ ಯೋಚಿಸಬಹುದಾಗಿತ್ತು. ಆದುದರಿಂದ ಮೇಲಿನ ವಚನ ಮುಸ್ಲಿಮರೊಂದಿಗೆ ಸ್ಪಷ್ಟವಾಗಿ, ಧರ್ಮ ಪರಿವರ್ತನೆಗೆ ಯಾವುದೇ ಬಲಾತ್ಕಾರವನ್ನು ಅನುಮತಿಸಿಲ್ಲ ಎಂದು ಹೇಳುತ್ತದೆ. ಜಾಮಿಅ್ ತಿರ್‌ಮದೀ ಎಂಬ ಗ್ರಂಥದಲ್ಲಿ ಉಲ್ಲೇಖಿತವಾಗಿರುವ ಒಂದು ಹದೀಸು (ಪ್ರವಾದಿ(ಸ) ನುಡಿ)

ಈ ಪವಿತ್ರ ಖುರ್‌ಆನ್ ವಚನದ ಮಹತ್ವವನ್ನು ಸ್ಪಷ್ಟಪಡಿಸುತ್ತದೆ. ಆ ಹದೀಸಿನಲ್ಲಿ ಪ್ರವಾದಿ(ಸ) ಹೀಗೆ ಹೇಳುತ್ತಾರೆ:

"ಅಲ್‌ಬಖರವು ಪವಿತ್ರ ಖುರ್‌ಆನಿನ ಶಿಖರವಾಗಿದೆ. ಈ ಅಧ್ಯಾಯದ ಹತ್ತು ವಚನಗಳನ್ನು ಪಠಿಸುವವನ ಮನೆಯೊಳಗೆ ಶೈತಾನ್ ಪ್ರವೇಶಿಸಲಾರನು. ಆ ವಚನಗಳು ಇವುಗಳಾಗಿವೆ: ಪ್ರಥಮ ನಾಲ್ಕು ವಚನಗಳು, ಆಯತುಲ್ ಕುರ್‌ಸೀ, ಅದರ ನಂತರದ ಎರಡು ವಚನಗಳು (257, 258) ಮತ್ತು ಕೊನೆಯ ಮೂರು ವಚನಗಳು."

ಧರ್ಮದ ವಿಷಯದಲ್ಲಿ ಯಾವುದೇ ಬಲಾತ್ಕಾರವಿಲ್ಲ ಎಂಬ ತತ್ವವನ್ನು ಬದ್ರ್ ಯುದ್ಧದಲ್ಲಿ ಜಯಗಳಿಸಿದ ನಂತರ ಪುನರಾವರ್ತಿಸಲಾಯಿತು. (ಪವಿತ್ರ ಖುರ್‌ಆನ್ 3 : 21 ನೋಡಿರಿ). ಅನಂತರ ಕೊನೆಯದಾಗಿ ಅವತೀರ್ಣವಾದ ಅಲ್‌ಮಾಇದಃ ಎಂಬ ಅಧ್ಯಾಯದಲ್ಲಿಯೂ ಹೀಗೆಯೇ ಪ್ರಸ್ತಾಪಿಸಲಾಯಿತು. ಆ ಕಾಲದಲ್ಲಿ ಪ್ರವಾದಿಯವರ(ಸ) ಆಡಳಿತಾಧಿಕಾರ ಮದೀನದಲ್ಲಿ ಮಾತ್ರವಲ್ಲ, ಮಕ್ಕದಲ್ಲಿಯೂ ಪೂರ್ಣವಾಗಿ ಸ್ಥಾಪಿತವಾಗಿತ್ತು. ಪ್ರವಾದಿಯವರ(ಸ) ಜವಾಬ್ದಾರಿ ಸಂದೇಶವನ್ನು ತಲುಪಿಸುವುದು ಮಾತ್ರವೆಂದು ಒತ್ತಿ ಹೇಳಲಾಗಿತ್ತು.

"ನೀವು ಅಲ್ಲಾಹನಿಗೆ ವಿಧೇಯರಾಗಿರಿ ಮತ್ತು ಈ ಸಂದೇಶವಾಹಕನಿಗೂ ವಿಧೇಯರಾಗಿರಿ ಹಾಗೂ ಜಾಗರೂಕರಾಗಿರಿ. ಆದರೆ ನೀವು ವಿಮುಖರಾದರೆ ನಮ್ಮ ಸಂದೇಶವನ್ನು ಸ್ಪಷ್ಟವಾದ ರೀತಿಯಲ್ಲಿ ನಿಮಗೆ ತಲುಪಿಸುವುದು ಮಾತ್ರವೇ ನಮ್ಮ ಸಂದೇಶವಾಹಕನ ಕರ್ತವ್ಯವೆಂದು ತಿಳಿಯಿರಿ." (5 : 93) ಕೊನೆಯದಾಗಿ, "ಸಂದೇಶವನ್ನು ತಲುಪಿಸುವ ಜವಾಬ್ದಾರಿ ಮಾತ್ರವೇ ಈ ಸಂದೇಶವಾಹಕನಿಗಿದೆ. ನೀವು ಬಹಿರಂಗ ಪಡಿಸುವುದನ್ನೂ ಬಚ್ಚಿಡುವುದನ್ನೂ ಅಲ್ಲಾಹನು ಬಲ್ಲನು." (5 : 100)

ಧಾರ್ಮಿಕ ವಿಷಯವೆಂಬುದು ಒಬ್ಬ ವ್ಯಕ್ತಿಗೆ ಸಂಬಂಧಿಸಿದ ವಿಷಯವಾಗಿದೆ. ಸರಕಾರ ಅಥವಾ ಧಾರ್ಮಿಕ ಧುರೀಣರಲ್ಲ, ದೇವನು ಮಾತ್ರ ಒಬ್ಬನ ವಿಶ್ವಾಸದ ಕುರಿತು ತಿಳಿದಿರುವವನಾಗಿದ್ದಾನೆ. ಮನುಷ್ಯನು ಬಹಿರಂಗ ಪಡಿಸುವುದನ್ನೂ ರಹಸ್ಯವಾಗಿಟ್ಟುಕೊಂಡುದನ್ನೂ ಅವನು ಮಾತ್ರ ಬಲ್ಲನು.

ಈ ವಚನ ಕಪಟ ವಿಶ್ವಾಸಿಗಳ (ಎಂದರೆ ಮುನಾಫಿಖೂನ್) ಬಗ್ಗೆ ನಮ್ಮ ಗಮನ ಸೆಳೆಯುತ್ತದೆ. ಮದೀನದ ನಿವಾಸಿಗಳಾದ ಕೆಲವು ಜನರು ಬಾಹ್ಯವಾಗಿ ಇಸ್ಲಾಮ್ ಧರ್ಮವನ್ನು ಅವಲಂಬಿಸಿದವರಂತೆ ನಟಿಸುತ್ತಿದ್ದರು. ಆದರೆ ಅವರ ವಿಶ್ವಾಸವು ಅನೇಕ ಕಾರಣಗಳಿಂದ ಸಂದೇಹಕರವಾಗಿತ್ತು. ಅವರ ಕುರಿತು ಪವಿತ್ರ ಖುರ್‌ಆನ್ ಹಲವು ಪ್ರಸ್ತಾಪಗಳನ್ನು ಮಾಡಿದೆ. ನಾಲ್ಕು ಸ್ಥಳಗಳಲ್ಲಿ ಅವರನ್ನು ಮುರ್‌ತದ್ದ್ (ಧರ್ಮತ್ಯಾಗಿ) ಎಂದು ವಿವರಿಸಿದೆ. ಈ ರೀತಿ ಪ್ರಥಮವಾಗಿ ಹೇಳಿದುದು ಸೂರಃ ಮುಹಮ್ಮದ್ ಎಂಬ ಪವಿತ್ರ ಖುರ್‌ಆನ್ ಅಧ್ಯಾಯದಲ್ಲಾಗಿದೆ. ಇದು ಮದೀನದಲ್ಲಿ ಅವತೀರ್ಣಗೊಂಡ ಅಧ್ಯಾಯವಾಗಿದೆ. ಅದು ಇಸ್ಲಾಮ್ ಪ್ರತಿಪಾದಿಸುವ ಯುದ್ಧದ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ. ಅದು ಹೀಗೆ ಹೇಳುತ್ತದೆ: ಸತ್ಯ ವಿಶ್ವಾಸಿಗಳು ಯುದ್ಧಕ್ಕಾಗಿ ಕರೆ ನೀಡುವ ದೈವಿಕ ಸಂದೇಶವನ್ನು ಸ್ವಾಗತಿಸುತ್ತಾರೆ. ಆದರೆ ಕಪಟ ವಿಶ್ವಾಸಿಗಳು (ಮುನಾಫಿಖೂನ್) ತಮ್ಮನ್ನು ವಧಿಸಲು ಕೊಂಡೊಯ್ಯಲಾಗುತ್ತದೆ ಎಂದು ಭಾವಿಸುತ್ತಾರೆ. ಈ ರೀತಿ ಸತ್ಯ ವಿಶ್ವಾಸಿಗಳು ಪೊಳ್ಳು ವಿಶ್ವಾಸವನ್ನು ಹೊಂದಿದವರಿಂದ ಬೇರ್ಪಡಿಸಲ್ಪಡುತ್ತಾರೆ. ಪವಿತ್ರ ಖುರ್‌ಆನ್ ವಚನ ಹೀಗಿದೆ:

"ಸತ್ಪಥ ದರ್ಶನ ಸ್ಪಷ್ಟಗೊಂಡ ಬಳಿಕ ಯಾರೂ ಬೆನ್ನು ತಿರುಗಿಸಿ ಹೋಗುತ್ತಾರೋ (ಅರ್‌ತದ್ದು) ಅವರಿಗೆ (ಅವರ ಕೃತ್ಯಗಳನ್ನು) ಶೈತಾನನು ಸುಂದರಗೊಳಿಸಿ ತೋರಿಸುತ್ತಾನೆ ಹಾಗೂ ಸುಳ್ಳು ಭರವಸೆಗಳನ್ನು ನೀಡುತ್ತಾನೆ. ಅದಕ್ಕೆ ಕಾರಣ, ಅಲ್ಲಾಹನು ಅವತೀರ್ಣಗೊಳಿಸಿದುದನ್ನು ದ್ವೇಷಿಸುವವರೊಡನೆ (ಅವಿಶ್ವಾಸಿಗಳಾದ ಶತ್ರುಗಳೊಡನೆ) 'ಕೆಲವು ವಿಚಾರಗಳಲ್ಲಿ ನಾವು ನಿಮ್ಮನ್ನು ಅನುಸರಿಸುತ್ತೇವೆ' ಎಂದು ಅವರು ಹೇಳಿದುದಾಗಿದೆ. ಅಲ್ಲಾಹನು ಅವರ ರಹಸ್ಯ ಮಾತುಕತೆಗಳನ್ನು ಬಲ್ಲವನಾಗಿದ್ದಾನೆ." (47 : 26-27)

ಈ ವಚನದಲ್ಲಿ ಈ ಜನರಿಗೆ ಯಾವುದೇ ಶಿಕ್ಷೆ ನೀಡುವ ಕುರಿತು ಹೇಳುವುದಿಲ್ಲ. ಕಪಟ ವಿಶ್ವಾಸಿಗಳ ಕುರಿತು ಇನ್ನೊಂದು ಪ್ರಸ್ತಾಪ ಅಲ್‌ಮುನಾಫಿಖೂನ್ ಎಂಬ ಅಧ್ಯಾಯದಲ್ಲಿದೆ. ಹಿಜರಿ ವರ್ಷ 6ರ (ಕ್ರಿ.ಶ.628ರ) ಕೊನೆಯ ಭಾಗದಲ್ಲಿ ಈ ಅಧ್ಯಾಯ ಅವತೀರ್ಣಗೊಂಡಿತು. ಇದರಲ್ಲಿ ಕಪಟ ವಿಶ್ವಾಸಿಗಳ ಅನಾಸಕ್ತಿ ಮತ್ತು ಅಪ್ರಾಮಾಣಿಕತೆಯನ್ನು ಬಹಿರಂಗಪಡಿಸಿ ಅವರು ತಮ್ಮನ್ನು ಸತ್ಯ ವಿಶ್ವಾಸಿಗಳೆಂದು ಹೇಳುವುದನ್ನು ಸುಳ್ಳು ಮತ್ತು ವಂಚನೆ ಎಂದು ಘೋಷಿಸುತ್ತದೆ:

"ಕಪಟ ವಿಶ್ವಾಸಿಗಳು ಸುಳ್ಳು ಹೇಳುತ್ತಿದ್ದಾರೆಂದು ಅಲ್ಲಾಹನು ಸಾಕ್ಷ್ಯ ನೀಡುತ್ತಾನೆ. ಅವರು ತಮ್ಮ ಪ್ರಮಾಣಗಳನ್ನು ಒಂದು ಗುರಾಣಿಯನ್ನಾಗಿ ಮಾಡಿಕೊಂಡಿರುವರು. ಹಾಗೆ ಅವರು ಜನರನ್ನು ಅಲ್ಲಾಹನ ಮಾರ್ಗದಿಂದ ತಡೆಯುತ್ತಾರೆ. ನಿಶ್ಚಯವಾಗಿಯೂ ಅವರ ಕೃತ್ಯಗಳು ಬಲು ಕೆಟ್ಟದ್ದಾಗಿವೆ. ಅದು, ಅವರು ವಿಶ್ವಾಸ ಹೊಂದಿ ಅನಂತರ ಅವಿಶ್ವಾಸ ಹೊಂದಿದ ಕಾರಣದಿಂದಾಗಿದೆ. ಆದುದರಿಂದ ಅವರ ಹೃದಯಗಳಿಗೆ ಮುದ್ರೆ ಹಾಕಲಾಗಿದೆ. ತತ್ಫಲವಾಗಿ ಅವರು ಮನವರಿಕೆ ಮಾಡುವುದಿಲ್ಲ..... ಅವರು ಶತ್ರುಗಳೇ ಆಗಿದ್ದಾರೆ. ಆದ್ದರಿಂದ ಅವರ ಬಗ್ಗೆ ಜಾಗ್ರತೆವಹಿಸು..... ನೀನು ಅವರಿಗಾಗಿ ಪಾಪ ವಿಮುಕ್ತಿಗಾಗಿ ಪ್ರಾರ್ಥಿಸಿದರೂ ಪ್ರಾರ್ಥಿಸದಿದ್ದರೂ ಅದು ಅವರಿಗೆ ಸಮವಾಗಿದೆ. ಅಲ್ಲಾಹನು ಅವರನ್ನು ಎಂದಿಗೂ ಕ್ಷಮಿಸಲಾರನು. ಧಿಕ್ಕಾರಿಗಳಾದ ಜನರಿಗೆ ಅಲ್ಲಾಹನು ಖಂಡಿತವಾಗಿಯೂ ಮಾರ್ಗದರ್ಶನ ನೀಡುವುದಿಲ್ಲ." (63 : 2-7)

ಕಪಟ ವಿಶ್ವಾಸಿಗಳ (ಮುನಾಫಿಖೂನ್) ಕುರಿತು ಇನ್ನೆರಡು ಪ್ರಸ್ತಾಪಗಳು ಹಝ್ರತ್ ಪ್ರವಾದಿಯವರಿಗೆ(ಸ) ಅವರ ಜೀವಿತದ ಅಂತಿಮ ಕಾಲಘಟ್ಟದಲ್ಲಿ ಅವತೀರ್ಣಗೊಂಡ ಪವಿತ್ರ ಖುರ್‌ಆನಿನ ಅಧ್ಯಾಯಗಳಲ್ಲಿ ಒಂದಾದ ಅತ್ತೌಬದಲ್ಲಿದೆ. "ನೀವು ನೆಪವನ್ನೇನೂ ಹೇಳಬೇಡಿರಿ. ನಿಜವಾಗಿಯೂ ನೀವು ವಿಶ್ವಾಸಗೊಂಡ ನಂತರ ಅವಿಶ್ವಾಸಿಗಳಾಗಿರುತ್ತೀರಿ. ನಿಮ್ಮ ಪೈಕಿ ಒಂದು ಪಂಗಡಕ್ಕೆ ನಾವು ಕ್ಷಮೆ ನೀಡಿದರೂ ಇನ್ನೊಂದು ಪಂಗಡಕ್ಕೆ ಅವರ ಅಪರಾಧದ ಹೇತುವಾಗಿ ಶಿಕ್ಷೆ ಕೊಡುವೆವು." (9 : 66)

ಕ್ಷಮಿಸಲ್ಪಟ್ಟ ಕಪಟ ವಿಶ್ವಾಸಿಗಳು ತಮ್ಮ ಕೃತ್ಯಗಳಿಗಾಗಿ ಪಶ್ಚಾತ್ತಾಪಗೊಂಡು ಕ್ಷಮೆಯನ್ನು ಯಾಚಿಸಿ ಪ್ರಾಮಾಣಿಕ ಮುಸ್ಲಿಮರಾದವರಾಗಿದ್ದಾರೆ. ಶಿಕ್ಷಾರ್ಹರಾದವರ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ಕಪಟ ವಿಶ್ವಾಸಿಗಳಿಗೂ ಕಪಟ ವಿಶ್ವಾಸಿನಿಯರಿಗೂ ಅವಿಶ್ವಾಸಿಗಳಿಗೂ ಅಲ್ಲಾಹನು ನರಕಾಗ್ನಿಯ ವಾಗ್ದಾನ ಮಾಡಿರುವನು. ಅವರು ಅದರಲ್ಲಿ ದೀರ್ಘಕಾಲ ವಾಸಿಸುವರು. ಅದು ಅವರಿಗೆ ಸಾಕು. ಅಲ್ಲಾಹನು ಅವರನ್ನು ಶಪಿಸಿರುವನು.

ಅವರಿಗೆ ದೀರ್ಘಕಾಲದ ಶಿಕ್ಷೆ ಇದೆ." (9 : 68)

ಕೊನೆಯದಾಗಿ ಹೀಗೆ ಹೇಳಲಾಗಿದೆ: "ತಾವು (ಅಹಿತಕರವಾದ) ಏನನ್ನೂ ಹೇಳಲಿಲ್ಲವೆಂದು ಅಲ್ಲಾಹನ ಆಣೆಹಾಕಿ ಅವರು ಹೇಳುತ್ತಾರೆ. ಆದರೆ ದಿಟವಾಗಿಯೂ ಅವರು ಧಿಕ್ಕಾರದ ಮಾತು ಆಡಿದ್ದಾರೆ. **ಅವರು ಇಸ್ಲಾಮ್ ಧರ್ಮ ಸ್ವೀಕರಿಸಿದ ಬಳಿಕ ಅವಿಶ್ವಾಸವನ್ನು ತಳೆದರು....** ಆದುದರಿಂದ ಅವರು ಪಶ್ಚಾತ್ತಾಪ ಪಟ್ಟರೆ ಅದು ಅವರಿಗೆ ಉತ್ತಮ. ಅವರು ಮುಖ ತಿರುಗಿಸಿ ಹೋದರೆ ಅಲ್ಲಾಹನು ಅವರಿಗೆ ಇಹದಲ್ಲೂ ಪರದಲ್ಲೂ ಯಾತನಾಮಯ ಶಿಕ್ಷೆ ನೀಡುವನು. ಭೂಮಿಯಲ್ಲಿ ಅವರಿಗೆ ಮಿತ್ರನಾಗಿ ಅಥವಾ ಸಹಾಯಕನಾಗಿ ಯಾರೂ ಇರಲಾರ." (9 : 74)

ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸಲೂಲ್ ಕಪಟ ವಿಶ್ವಾಸಿಗಳ ನಾಯಕನಾಗಿದ್ದನೆಂದು ಪ್ರವಾದಿಯವರಿಗೆ(ಸ) ತಿಳಿದಿತ್ತು. ಆದರೆ ಅವರು ಅವನಿಗೆ ಯಾವುದೇ ಶಿಕ್ಷೆಯನ್ನು ವಿಧಿಸಲಿಲ್ಲ. ಅವನು ಮೃತನಾದಾಗ ಪ್ರವಾದಿಯವರು(ಸ) ಅವನಿಗಾಗಿ ಪ್ರಾರ್ಥಿಸಿದರು. ಉಮರ್ ಬಿನ್ ಖತ್ತಾಬ್(ರ) ಹೀಗೆ ವರದಿ ಮಾಡುತ್ತಾರೆ:

ಹಝ್ರತ್ ಪ್ರವಾದಿಯವರು(ಸ) ಅಬ್ದುಲ್ಲಾ ಬಿನ್ ಉಬಯ್ಯ್ ಮೃತನಾದಾಗ ಅವನ ಮೃತ ಶರೀರದ ಸಮೀಪ ನಿಂತು ಪ್ರಾರ್ಥಿಸಲು ಸಿದ್ಧರಾದಾಗ ನಾನು ಕೇಳಿದೆ: "ದೇವನ ಶತ್ರುವಿನ ಪರವಾಗಿ ತಾವು ಪ್ರಾರ್ಥಿಸುವಿರೇನು?" ಆಗ ಪ್ರವಾದಿಯವರು(ಸ) ಮುಗುಳ್ನಕ್ಕು ಹೀಗೆ ಹೇಳಿದರು: "ಉಮರ್, ಪ್ರಾರ್ಥಿಸಲಿಕ್ಕಾಗಿ ನನ್ನ ಹಿಂದೆ ನಿಲ್ಲಿರಿ. ನನಗೆ ಒಂದನ್ನು ಆಯ್ಕೆ ಮಾಡಲು ಅನುಮತಿಸಲಾಗಿದೆ: 'ನೀನು ಅವರಿಗಾಗಿ ಕ್ಷಮೆಯನ್ನು ಯಾಚಿಸು ಅಥವಾ ಯಾಚಿಸದಿರು' ಎಂದು. 'ನೀನು ಅವರಿಗಾಗಿ ಎಪ್ಪತ್ತು ಸಲ ಕ್ಷಮೆಯನ್ನು ಯಾಚಿಸಿದರೂ ಅಲ್ಲಾಹನು ಅವರಿಗೆ ಕ್ಷಮೆಯನ್ನು ನೀಡಲಾರನು' ಎಂದು ನನಗೆ ತಿಳಿಸಲಾಗಿದೆ. ಅವರಿಗಾಗಿ ಎಪ್ಪತ್ತಕ್ಕಿಂತಲೂ ಹೆಚ್ಚು ಸಲ ಕ್ಷಮೆಯನ್ನು ಯಾಚಿಸುವುದಾದರೆ ಅವರು ಕ್ಷಮಿಸಲ್ಪಡುವರೆಂದು ನನಗೆ ತಿಳಿದಿರುವುದಾದರೆ ನಾನು ಹಾಗೆಯೇ ಮಾಡುವೆನು." ಹಝ್ರತ್ ಪ್ರವಾದಿಯವರು(ಸ) ಅವನಿಗಾಗಿ ಪ್ರಾರ್ಥಿಸಿದರು. ಅವನ ಮೃತ ಶರೀರವನ್ನು ಹೊತ್ತುಕೊಂಡು ಹೋದವರೊಂದಿಗೆ ಸ್ಮಶಾನಕ್ಕೆ ಹೋಗಿ ಅವನ ಶರೀರ ದಫನಗೊಳ್ಳುವ ತನಕ ಅಲ್ಲೇ ನಿಂತರು. (ಅಬ್ದುಲ್ ಮಾಲಿಕ್ ಇಬ್ನು ಹಿಶಾಮ್ - ಕಿತಾಬ್ ಸೀರತ್ ರಸೂಲುಲ್ಲಾಹ್ - ಪುಟ 927)

ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ ಎಂಬ ತತ್ವದ ಪರೀಕ್ಷೆ ನಡೆಯುವುದು ಮತ ಪರಿವರ್ತನೆಗೆ ಸ್ವಾತಂತ್ರ್ಯ ಇದೆಯೇ ಎಂದು ನೋಡುವ ಮೂಲಕವಾಗಿದೆ. ಸ್ವಾತಂತ್ರ್ಯವು ಏಕಮುಖವಾಗಿರಬಾರದು. ಇಸ್ಲಾಮನ್ನು ಪ್ರವೇಶಿಸಲು ಮಾತ್ರ ಸ್ವಾತಂತ್ರ್ಯ; ಹೊರಗೆ ಹೋಗಲು ಇಲ್ಲ ಎಂದಾಗಬಾರದು.

ಮತ ಪರಿವರ್ತನೆಯ ಬಗ್ಗೆ ಪವಿತ್ರ ಖುರ್‌ಆನ್ ಹತ್ತು ಸ್ಥಳಗಳಲ್ಲಿ ನೇರವಾಗಿ ಪ್ರಸ್ತಾಪಿಸಿದೆ. ಮಕ್ಕದಲ್ಲಿ ಅವತೀರ್ಣವಾದ ಅನ್ನಹ್ಲ್ ಅಧ್ಯಾಯದಲ್ಲಿ ಒಮ್ಮೆ ಈ ಬಗ್ಗೆ ಹೇಳಲಾಗಿದೆ. ಉಳಿದ ಒಂಬತ್ತು ಪ್ರಸ್ತಾಪಗಳು ಮದೀನದಲ್ಲಿ ಅವತೀರ್ಣಗೊಂಡ ಅಧ್ಯಾಯಗಳಲ್ಲಿವೆ. ಆದರೆ ಈ ಎಲ್ಲಾ ವಚನಗಳಲ್ಲಿ ಧರ್ಮತ್ಯಾಗಿಗೆ ಮರಣದಂಡನೆಯನ್ನು ವಿಧಿಸುವ ಕುರಿತು ಅಲ್ಪ ಮಾತ್ರ ಸೂಚನೆಯೂ ಕಾಣುವುದಿಲ್ಲ.

ಧರ್ಮತ್ಯಾಗದ ಕುರಿತು ಬಹಳ ಸ್ಪಷ್ಟ ಹೇಳಿಕೆಗಳಲ್ಲಿ ಒಂದು, ಪವಿತ್ರ ಖುರ್‌ಆನಿನ ಎರಡನೆಯ ಅಧ್ಯಾಯದ 144ನೇ ವಚನದಲ್ಲಿದೆ. ಹಿಜರಿ ಎರಡನೆಯ ವರ್ಷದಲ್ಲಿ ಮುಸ್ಲಿಮರು ಪ್ರಾರ್ಥನೆ ಮಾಡುವಾಗ ಜೆರುಸಲೇಮ್ ಕಡೆಗೆ ಅಭಿಮುಖೀಕರಿಸುವುದನ್ನು ಬದಲಾಯಿಸಿ ಮಕ್ಕದ ಕಡೆಗೆ ಮಾಡಲಾಯಿತು. ಇದನ್ನು ಖಿಬ್ಲದ ಬದಲಾವಣೆ ಎಂದು ಕರೆಯಲಾಗಿದೆ. ಈ ಬಗ್ಗೆ ಇಬ್ನು ಇಸ್‌ಹಾಖ್ ಹೀಗೆ ವರದಿ ಮಾಡುತ್ತಾರೆ:

"ಮುಸ್ಲಿಮರು ಪ್ರಾರ್ಥನೆಗೆ ಅಭಿಮುಖೀಕರಿಸುವುದನ್ನು ಕಅ್‌ಬದ ಕಡೆಗೆ ಬದಲಾಯಿಸಿದಾಗ ರಿಫಾ ಬಿನ್ ಖೈಸ್, ಖರ್ದಮ್ ಬಿನ್ ಅಮ್ರ್, ಕಅ್‌ಬ್ ಬಿನ್ ಅಲ್ ಅಶ್‌ರಫ್, ರಫೀಅ್ ಅಬೂ ರಫೀ, ಅಲ್ ಹಜ್ಜಾಜ್ ಬಿನ್ ಅಮ್ರ್ ಮತ್ತು ಕಅ್‌ಬ್‌ರವರ ಸ್ನೇಹಿತ ಅಲ್ ರಬೀ ಬಿನ್ ಅಲ್ ರಬೀ ಬಿನ್ ಅಬ್ದುಲ್ ಹುಖೈಖ್, ಕಿನಾನ ಬಿನ್ ಅಲ್ ರಬೀ ಬಿನ್ ಅಬುಲ್ ಹುಖೈಖ್ ಪ್ರವಾದಿಯವರ(ಸ) ಸಮೀಪಕ್ಕೆ ಬಂದು ಹೀಗೆ ಕೇಳಿದರು: 'ನೀವು ಇಬ್ರಾಹೀಮ್‌ರವರ(ಅ) ಧರ್ಮವನ್ನು ಅನುಸರಿಸುವುದಾಗಿ ವಾದಿಸಿ ಅಭಿಮುಖೀಕರಿಸುತ್ತಿದ್ದ ಖಿಬ್ಲದ ಕಡೆಗೆ ನೀವು ಏಕೆ ಬೆನ್ನು ತಿರುಗಿಸಿದಿರಿ? ನೀವು ಜೆರುಸಲೇಮ್ ಕಡೆಗೆ ಅಭಿಮುಖೀಕರಿಸಿ ಪ್ರಾರ್ಥಿಸುವುದಾದರೆ ನಾವು ನಿಮ್ಮನ್ನು ಅನುಸರಿಸುವೆವು ಮತ್ತು ನೀವು ಸತ್ಯವಂತರೆಂದು ಘೋಷಿಸುವೆವು.' ಅವರ ಏಕ ಮಾತ್ರ ಉದ್ದೇಶ ಪ್ರವಾದಿಯವರನ್ನು(ಸ) ಅವರ ಧರ್ಮದಿಂದ ದೂರಸರಿಸುವುದಾಗಿತ್ತು. ಆದುದರಿಂದಅಲ್ಲಾಹನು ಹೇಳಿದನು: 'ಈ ಪ್ರವಾದಿಯನ್ನು ಯಾರು ಅನುಸರಿಸುತ್ತಾರೆ ಮತ್ತು ಯಾರು ಬೆನ್ನು ತಿರುಗಿಸಿ ಓಡುತ್ತಾರೆ ಎಂದು ಬೇರ್ಪಡಿಸಿ ತಿಳಿಯುವುದಕ್ಕೋಸ್ಕರ ಹೊರತು ನೀನು ಮೊದಲು ಅಭಿಮುಖೀಕರಿಸುತ್ತಿದ್ದ ಖಿಬ್ಲವನ್ನು ನಾವು ನಿಶ್ಚಯಿಸಿರಲಿಲ್ಲ. ಅಲ್ಲಾಹನು ಯಾರನ್ನು ಸತ್ಪಥದಲ್ಲಿ ನಡೆಸುತ್ತಾನೋ ಅವರಿಗೆ ಹೊರತು ಇತರರಿಗೆ ಇದು ಒಂದು ದೊಡ್ಡ ಪರೀಕ್ಷೆಯಾಗಿದೆ.'" (2 : 144) (ಅದೇ ಗ್ರಂಥ - ಪುಟ 381)

ಈ ಧರ್ಮತ್ಯಾಗಿಗಳಿಗೆ ಪವಿತ್ರ ಖುರ್‌ಆನ್ ಯಾವುದೇ ಶಿಕ್ಷೆಯನ್ನು ನಿಗದಿ ಪಡಿಸಿಲ್ಲ. ಖಿಬ್ಲದ ಬದಲಾವಣೆಯ ನಂತರ ಧರ್ಮತ್ಯಾಗ ಮಾಡಿದ ಯಾರಿಗಾದರೂ ಶಿಕ್ಷೆ ನೀಡಿದ ಕುರಿತು ಯಾವುದೇ ಸಾಕ್ಷ್ಯಾಧಾರವನ್ನು ಚರಿತ್ರೆ ನೀಡಿಲ್ಲ.

ಬದ್ರ್ ಯುದ್ಧದಲ್ಲಿ ಜಯ ಹೊಂದಿದ ನಂತರ ಹಿಜರಿ ಎರಡನೇ ವರ್ಷದಲ್ಲಿ ಎಂದರೆ ಕ್ರಿ.ಶ.624ರಲ್ಲಿ ಅವತೀರ್ಣವಾದ ಆಲಿ ಇಮ್ರಾನ್ ಎಂಬ ಅಧ್ಯಾಯದಲ್ಲಿ ಮದೀನದ ಕೆಲವು ಯಹೂದಿಯರು ಧರ್ಮತ್ಯಾಗ ಮಾಡಿದ ಕುರಿತು ಈ ಕೆಳಗಿನ ಪ್ರಕಾರ ಪ್ರಸ್ತಾಪ ಇದೆ:

"ಓ ಗ್ರಂಥದವರೇ, ನೀವು ತಿಳಿದುಕೊಂಡೇ ಏಕೆ ಸತ್ಯವನ್ನು ಅಸತ್ಯದೊಂದಿಗೆ ಕಲಬೆರಕೆ ಮಾಡುತ್ತೀರಿ ಮತ್ತು ಸತ್ಯವನ್ನು ಮರೆಮಾಡುತ್ತೀರಿ?" (3 : 72)

"ಗ್ರಂಥದವರಲ್ಲಿ ಒಂದು ಪಂಗಡದ ಜನರು ಹೇಳುತ್ತಾರೆ: 'ವಿಶ್ವಾಸಿಗಳಿಗೆ (ಮುಸ್ಲಿಮರಿಗೆ) ಅವತೀರ್ಣಗೊಂಡುದರಲ್ಲಿ ಹಗಲಿನ ಆರಂಭದಲ್ಲಿ ನೀವು ನಂಬಿಕೊಂಡು, ಅದರ ಕೊನೆಯಲ್ಲಿ ನಿರಾಕರಿಸಿರಿ. (ಹೀಗೆ ಮಾಡಿದರೆ) ಪ್ರಾಯಶಃ ಅವರು ಮರಳಿ ಬರುವರು.'" (3 : 73)

ಈ ಷಡ್ಯಂತ್ರವನ್ನು ಹೂಡಿದವರ ಹೆಸರುಗಳನ್ನು ಇಬ್ನು ಇಸ್‌ಹಾಖ್ ಹೀಗೆ ಬರೆದಿರುವರು:

"ಅಬ್ದುಲ್ಲಾ ಬಿನ್ ಸೈಫ್, ಅದಿಯ್ಯ್ ಬಿನ್ ಝೈದ್ ಮತ್ತು ಹಾರಿಸ್ ಬಿನ್ ಔಫ್ ಮುಹಮ್ಮದ್‌ರವರ(ಸ) ಸಂದೇಶವನ್ನು ಅಂಗೀಕರಿಸಿದಂತೆ

ನಟಿಸಲು ಮತ್ತು ಅನಂತರ ಅದನ್ನು ನಿರಾಕರಿಸಿ ಮುಹಮ್ಮದ್[ಸ] ಮತ್ತು ಅವರ ಶಿಷ್ಯರನ್ನು ತಬ್ಬಿಬ್ಬುಗೊಳಿಸಲು ತೀರ್ಮಾನಿಸಿದ್ದರು. ಅವರ ಉದ್ದೇಶ, ಇತರರು ಸಹ ತಮ್ಮ ಮಾದರಿಯನ್ನು ಅನುಕರಿಸಿ ಧರ್ಮತ್ಯಾಗ ಮಾಡುವವರು ಎಂದಾಗಿತ್ತು." (ಅದೇ ಗ್ರಂಥ - ಪುಟ 384)

ಮೇಲೆ ಹೆಸರಿಸಿದ ಯಹೂದಿಗಳಲ್ಲಿ ಯಾರನ್ನೂ ಶಿಕ್ಷೆಗೆ ಗುರಿಪಡಿಸಲಿಲ್ಲ.

ಧರ್ಮತ್ಯಾಗದ ಕುರಿತು ಇನ್ನೊಂದು ಪ್ರಸ್ತಾಪ ಅನ್ನಿಸಾ ಎಂಬ ಅಧ್ಯಾಯದಲ್ಲಿದೆ. ಅದರಲ್ಲಿ ಹೀಗೆ ಹೇಳಲಾಗಿದೆ:

"ವಿಶ್ವಾಸವನ್ನು ಹೊಂದಿದ ಬಳಿಕ ಅವಿಶ್ವಾಸವನ್ನು ತಾಳಿ, ಪುನಃ ವಿಶ್ವಾಸ ಹೊಂದಿ, ಪುನಃ ಅವಿಶ್ವಾಸ ತಾಳಿ, ಅವಿಶ್ವಾಸದಲ್ಲಿಯೇ ಇನ್ನಷ್ಟು ಮುಂದುವರಿಯುವವರನ್ನು ಅಲ್ಲಾಹನು ಎಂದಿಗೂ ಕ್ಷಮಿಸಲಾರ. ಅವರಿಗೆ ಅವನು (ಮೋಕ್ಷ) ಮಾರ್ಗವನ್ನೂ ತೋರಿಸಿಕೊಡಲಾರ." (4 : 138)

ಧರ್ಮತ್ಯಾಗಕ್ಕೆ ನಿಜವಾಗಿಯೂ ಮರಣದಂಡನೆಯ ಶಿಕ್ಷೆಯು ಇದ್ದರೆ ಒಬ್ಬ ಧರ್ಮತ್ಯಾಗಿ ಪುನಃ ಪುನಃ ಧರ್ಮತ್ಯಾಗ ಮಾಡಲು ಮತ್ತು ಪುನಃ ಪುನಃ ವಿಶ್ವಾಸಿಯಾಗಲು ಹೇಗೆ ತಾನೆ ಸಾಧ್ಯ? ಮರಣದಂಡನೆಗೆ ಪಾತ್ರನಾದವನು ಮೃತನಾಗುತ್ತಾನೆ. ಅವನು ಹೇಗೆ ತಾನೆ ಪುನಃ ವಿಶ್ವಾಸಿಯಾಗಲು ಮತ್ತು ಪುನಃ ಧರ್ಮತ್ಯಾಗ ಮಾಡಲು ಸಾಧ್ಯ?

ಸುನ್ನತ್ ಅಥವಾ ಪ್ರವಾದಿಯ[ಸ] ನಡೆವಳಿಕೆ ದೇವ ಪ್ರೇರಣೆ ಮೂಲಕವಾಗಿತ್ತು. ಅದು ಇಸ್ಲಾಮಿಕ ನಿಯಮ ಸಂಹಿತೆ (ಶರೀಅತ್)ಗೆ ಎರಡನೆಯ ಮೂಲಾಧಾರವಾಗಿದೆ. ಪ್ರವಾದಿಯವರ[ಸ] ಸುನ್ನತ್ ದಾಖಲೆಗಳನ್ನು ಪರಿಶೀಲಿಸಿದರೆ ಧರ್ಮತ್ಯಾಗಕ್ಕಾಗಿ ಮರಣದಂಡನೆ ನೀಡಿದುದನ್ನು ನಾವು ಕಾಣಲಾರೆವು. ಪ್ರವಾದಿಯವರಿಂದ[ಸ] ಮರಣದಂಡನೆಯ ಶಿಕ್ಷೆಗೆ ವಿಧಿಸಲ್ಪಟ್ಟವರ ಹೆಸರುಗಳು ಮತ್ತು ಇಸ್ಲಾಮ್ ಧರ್ಮವನ್ನು ತ್ಯಜಿಸಿದವರ ಹೆಸರುಗಳು ಹದೀಸ್ ಗ್ರಂಥಗಳಲ್ಲಿ ಮತ್ತು ಸೀರತ್ (ಜೀವನ ಚರಿತ್ರೆ) ಗ್ರಂಥಗಳಲ್ಲಿ ಬರೆದಿಡಲ್ಪಟ್ಟಿವೆ. ಒಬ್ಬ ಗ್ರಾಮೀಣ ಅರಬಿ ಪ್ರವಾದಿಯವರಿಂದ[ಸ] ಇಸ್ಲಾಮ್ ಧರ್ಮಕ್ಕೆ ಸೇರಿಸಲ್ಪಟ್ಟಿದ್ದನು. ಅನಂತರ ಸ್ವಲ್ಪ ಸಮಯದೊಳಗೆ ಅವನು ಜ್ವರಪೀಡಿತನಾದನು. ತನ್ನನ್ನು ನಿಷ್ಠೆಯ ಪ್ರತಿಜ್ಞೆ (ಬೈಅತ್)ಯಿಂದ ಮುಕ್ತನನ್ನಾಗಿ ಮಾಡಲು ಅವನು ಪ್ರವಾದಿಯವರನ್ನು[ಸ] ಮೂರು ಬಾರಿ ಕೇಳಿದರೂ ಅವನ ಅಪೇಕ್ಷೆ ಮೂರು ಬಾರಿಯೂ ನಿರಾಕರಿಸಲ್ಪಟ್ಟಿತು. ಹೀಗಿದ್ದರೂ ಅವನು ಯಾವುದೇ ಹಿಂಸೆಗೆ ಗುರಿಯಾಗದೆ ಮದೀನವನ್ನು ಬಿಟ್ಟು ಹೋದನು. ಅವನು ಹೊರಟು ಹೋದ ಸಂಗತಿಯನ್ನು ತಿಳಿದಾಗ ಪ್ರವಾದಿ[ಸ] ಹೀಗೆ ಹೇಳಿದರು:

"ಮದೀನ ಒಂದು ಕುಲುಮೆಯ ಹಾಗಿದೆ. ಅದು ಕಿಲುಬನ್ನು ಶುದ್ಧ ವಸ್ತುವಿನಿಂದ ಪ್ರತ್ಯೇಕಿಸುತ್ತದೆ." (ಬುಖಾರಿ)

ಇಬ್ನು ಇಸ್‌ಹಾಖ್ ಹೀಗೆ ವರದಿ ಮಾಡಿದ್ದಾರೆ: "ತಮ್ಮನ್ನು ಎದುರಿಸಿದವರ ವಿರುದ್ಧ ಮಾತ್ರ ಹೋರಾಡಲು ತನ್ನ ಸೇನೆಯ ನಾಯಕರಿಗೆ ಪ್ರವಾದಿಯವರು[ಸ] ಮಕ್ಕವನ್ನು ಪ್ರವೇಶಿಸಿದ ಸಂದರ್ಭದಲ್ಲಿ ಆದೇಶಿಸಿದ್ದರು. ಆದರೆ ಈ ಕೆಳಗೆ ಹೆಸರಿಸಿದ ಅಪರಾಧಿಗಳನ್ನು ಅವರು ತಮ್ಮನ್ನು ಕಅ್‌ಬದ ಹೊದಿಕೆಯಿಂದ ಸುತ್ತಿಕೊಂಡಿದ್ದರೂ ಕೊಲ್ಲಬೇಕೆಂದು ಹೇಳಿದ್ದರು. ಆ ಅಪರಾಧಿಗಳ ಹೆಸರು ಹೀಗಿವೆ:

1. ಅಬ್ದುಲ್ಲಾ ಬಿನ್ ಸಾದ್ ಬಿನ್ ಅಬೀಸಾರ

2,3,4. ಅಬ್ದುಲ್ಲಾ ಬಿನ್ ಖತಲ್ ಬಿನ್ ತಯಮ್ ಬಿನ್ ಗಾಲಿಬ್ ಮತ್ತು ಅವನ ಜೊತೆಗಾರ್ತಿಗಳಾಗಿದ್ದ ಇಬ್ಬರು ನರ್ತಕಿಯರು. ಅವರು ಇಸ್ಲಾಮಿನ ವಿರುದ್ಧ ವಿಡಂಬನಾತ್ಮಕ ಹಾಡುಗಳನ್ನು ಹಾಡುತ್ತಿದ್ದರು. ಒಬ್ಬಳ ಹೆಸರು ಫರ್ತಾನಾ. (ಮತ್ತೊಬ್ಬಳ ಹೆಸರನ್ನು ಸೂಚಿಸಿಲ್ಲ.)

5. ಅಲ್ ಹುವೈರಿಸ್ ಬಿನ್ ನುಖೈದ್ ಬಿನ್ ವಹ್‌ಬ್ ಬಿನ್ ಅಬ್‌ದ್ ಬಿನ್ ಖುಸಯ್ಯ್.

6. ಮಖೀಸ್ ಬಿನ್ ಸುಬಾಬಾಹ್

7. ಸಾರ - ಈಕೆ ಅಬ್ದುಲ್ ಮತ್ತಲಿಬ್‌ರವರ ಒಬ್ಬ ಮಗನಿಂದ ವಿಮೋಚಿತ ದಾಸಿ.

8. ಇಕ್ರಿಮ ಬಿನ್ ಅಬೂ ಜಹ್ಲ್.

(ಇಬ್ನು ಹಿಶಾಮ್)

ಪ್ರವಾದಿಯವರು[ಸ] ತನಗೆ ಅವತೀರ್ಣವಾದ ದೇವ ಸಂದೇಶಗಳನ್ನು ಅಬ್ದುಲ್ಲಾ ಬಿನ್ ಸಾದ್‌ಗೆ ಹೇಳಿ ಬರೆಸುತ್ತಿದ್ದರು. ಅವನು ಧರ್ಮತ್ಯಾಗ ಮಾಡಿ ಮಕ್ಕದ ಅವಿಶ್ವಾಸಿಗಳೊಂದಿಗೆ ಸೇರಿಕೊಂಡನು. ಅವನು ಪ್ರವಾದಿಯವರಿಗೆ[ಸ] ವಿಶ್ವಾಸ ದ್ರೋಹ ಮಾಡಿ ಶತ್ರು ಪಕ್ಷದೊಂದಿಗೆ ಸೇರಿದ ಕಾರಣ ಮಕ್ಕದ ಖುರೈಶಿ ಗೋತ್ರದಲ್ಲಿ ದೇವ ಸಂದೇಶಗಳ ವಿಶ್ವಾಸಾರ್ಹತೆಯ ಬಗ್ಗೆ ಸಂಶಯದ ಬೀಜ ಬಿತ್ತುವುದಕ್ಕೆ ಹೇತುವಾಗಿದ್ದನು. ಮಕ್ಕದಲ್ಲಿ ಶಾಂತಿ ನೆಲಸಿದ ಬಳಿಕ ಅವನ ಮಲ ಸಹೋದರ ಉಸ್ಮಾನ್ ಬಿನ್ ಅಫ್ಫಾನ್[ರ] ಅವನ ಪರವಾಗಿ ಕ್ಷಮೆ ಯಾಚಿಸಿದ ಕಾರಣ ಅವನನ್ನು ಕ್ಷಮಿಸಲಾಯಿತು. (ಇಬ್ನು ಹಿಶಾಮ್ ನೋಡಿರಿ.) ಧರ್ಮತ್ಯಾಗಕ್ಕಾಗಿ ಮರಣದಂಡನೆಯ ಶಿಕ್ಷೆಯನ್ನು ಪವಿತ್ರ ಖುರ್‌ಆನ್ ವಿಧಿಸಿದ್ದರೆ ಪ್ರವಾದಿಯವರು[ಸ] ಅವನನ್ನು ಕ್ಷಮಿಸಲು ಸಾಧ್ಯವಿರಲಿಲ್ಲ. ಪವಿತ್ರ ಖುರ್‌ಆನ್ ವಿಧಿಸಿದ ಶಿಕ್ಷೆಯ ವಿಧಾನದಲ್ಲಿ ಹಸ್ತಕ್ಷೇಪ ನಡೆಸುವ ಬಗ್ಗೆ ಪ್ರವಾದಿಯವರ[ಸ] ಧೋರಣೆ ಹೇಗಿತ್ತೆಂಬುದನ್ನು ಈ ಕೆಳಗಿನ ಪ್ರಕರಣದಿಂದ ತಿಳಿಯಬಹುದು. ಮಖ್‌ಝೂಮಿ ಗೋತ್ರದ ಒಬ್ಬ ಮಹಿಳೆಯ ವಿರುದ್ಧ ಕಳ್ಳತನದ ಅಪರಾಧ ಸಾಬೀತಾದಾಗ ಉಸಾಮ ಬಿನ್ ಝೈದ್ ಆಕೆಯ ಪರವಾಗಿ ವಾದಿಸಿದರು. ಆಗ ಪ್ರವಾದಿಯವರು[ಸ] ಅವರ ವಾದವನ್ನು ತಿರಸ್ಕರಿಸಿ ಹೇಳಿದರು: "ಅಲ್ಲಾಹನು ನಿಗದಿ ಪಡಿಸಿದ ಶಿಕ್ಷೆಯ ಬಗ್ಗೆ ನೀವು ಮಧ್ಯಸ್ಥಿಕೆ ಮಾಡಬಯಸುವಿರೋ? ನೀವು ತಿಳಿದುಕೊಳ್ಳಿರಿ. ಮುಹಮ್ಮದನ ಮಗಳು ಫಾತಿಮ ಕೂಡ ಕಳ್ಳತನ ಮಾಡಿದರೆ ನಾನು ಆಕೆಯ ಕೈಯನ್ನು ನಿಶ್ಚಯವಾಗಿಯೂ ಕಡಿದು ಹಾಕುವೆನು."

ಅಬ್ದುಲ್ಲಾ ಬಿನ್ ಖತಲ್‌ನನ್ನು ಅವನ ಸೇವಕನಾದ ಮದೀನದ ಒಬ್ಬ ಮುಸ್ಲಿಮನೊಂದಿಗೆ ಝಕಾತ್ ವಸೂಲಿಗಾಗಿ ಕಳುಹಿಸಲಾಗಿತ್ತು. ಒಂದೆಡೆ ತಂಗಿದ್ದಾಗ, ಅವನು ನಿದ್ರೆ ಮಾಡುವ ಮೊದಲು, ಒಂದು ಆಡನ್ನು ವಧಿಸಿ ಆಹಾರ ಸಿದ್ಧಗೊಳಿಸಬೇಕೆಂದು ಸೇವಕನಿಗೆ ಹೇಳಿದ್ದನು. ಅವನು ನಿದ್ರೆಯಿಂದ ಎಚ್ಚೆತ್ತಾಗ ಅವನು ಸೇವಕನು ಏನನ್ನೂ ತಯಾರಿಸಿರದ ಕಾರಣ ಸಿಟ್ಟಿನಿಂದ ಅವನನ್ನು ಕೊಂದನು. ಅವನು ಧರ್ಮತ್ಯಾಗ ಮಾಡಿ ಖುರೈಶಿಗಳೊಂದಿಗೆ ಸೇರಿದನು. ಅವನು ಮದೀನದ ಮುಸ್ಲಿಮನನ್ನು ಕೊಂದ ಅಪರಾಧಕ್ಕಾಗಿ ಅವನನ್ನು ಸೈದ್ ಬಿನ್ ಹುರೈತ್ ಅಲ್ ಮಖ್‌ಝೂಮಿ ಮತ್ತು ಅಬೂ ಬರ್‌ಝುಲ್ ಅಸ್‌ಲಮಿ ಕೊಂದರು. (ಇಬ್ನು ಹಿಶಾಮ್)

ಅಬ್ದುಲ್ಲಾ ಬಿನ್ ಖತಲ್‌ನ ಇಬ್ಬರು ಹಾಡುವ ಹುಡುಗಿಯರಲ್ಲಿ ಒಬ್ಬಳನ್ನು ಅವಳು ಅಪಹಾಸ್ಯಕರ ಹಾಡುಗಳನ್ನು ಹಾಡುತ್ತಾ ಗಲಭೆ

ಗೊಂದಲಗಳನ್ನು ಬಡಿದೆಬ್ಬಿಸುತ್ತಿದ್ದ ಕಾರಣದಿಂದ ಕೊಲ್ಲಲಾಯಿತು. ಇನ್ನೊಬ್ಬಳನ್ನು ಕ್ಷಮಿಸಲಾಯಿತು. (ಇಬ್ನು ಹಿಶಾಮ್)

ಪ್ರವಾದಿಯವರ(ಸ) ಮಗಳು ಝೈನಬ್(ರ) ಮಕ್ಕದಿಂದ ಮದೀನಕ್ಕೆ ಒಂಟೆಯನ್ನೇರಿ ಸಂಚರಿಸುತ್ತಿದ್ದಾಗ ಅಲ್‌ಹುವೈರಿಸ್ ಬಿನ್ ನುಖೈದ್ ಬೆನ್ನಟ್ಟಿ ಅವರ ಒಂಟೆಯನ್ನು ಮೊನೆಗೋಲಿನಿಂದ ಚುಚ್ಚಿದನು. ಈ ಆಕ್ರಮಣದಿಂದ ಗರ್ಭಿಣಿಯಾಗಿದ್ದ ಝೈನಬ್‌ರವರಿಗೆ(ರ) ಗರ್ಭಸ್ರಾವವಾಯಿತು. ಆಕೆಗೆ ಮಕ್ಕಕ್ಕೆ ಹಿಂದಿರುಗಬೇಕಾಯಿತು. ಈ ಕಾರಣದಿಂದ ಅಲ್ ಹುವೈರಿಸ್‌ನನ್ನು ಕೊಲ್ಲಬೇಕಂದು ಆಜ್ಞಾಪಿಸಲಾಗಿತ್ತು. ಆದರೆ ಅವನು ತಪ್ಪಿಸಿಕೊಂಡನು.

ಇನ್ನೊಂದು ವರದಿ ಹೀಗಿದೆ: ಪ್ರವಾದಿಯವರ(ಸ) ಪುತ್ರಿಯರಾದ ಫಾತಿಮ ಮತ್ತು ಉಮ್ಮುಕುಲ್‌ಸುಮ್ ಮದೀನದಿಂದ ಮಕ್ಕಕ್ಕೆ ಒಂಟೆಯನ್ನೇರಿ ಸಂಚರಿಸುತ್ತಿದ್ದಾಗ ಅಲ್‌ಹುವೈರಿಸ್ ಒಂಟೆಗೆ ಮೊನೆಗೋಲಿನಿಂದ ಚುಚ್ಚಿದನು. ಅವರಿಬ್ಬರೂ ಒಂಟೆಯ ಮೇಲಿನಿಂದ ಬಿದ್ದರು. ಕೊನೆಗೆ ಅಲಿ(ರ) ಅವನನ್ನು ಮಕ್ಕದಲ್ಲಿ ಕೊಂದರು. (ಇಬ್ನು ಹಿಶಾಮ್)

ಮಖೀಸ್ ಬಿನ್ ಸುಬಾಬಾಹ್ ಮಕ್ಕದಿಂದ ಮದೀನಕ್ಕೆ ಬಂದು ಹೇಳಿದನು: "ನಾನು ನಿಮ್ಮ ಬಳಿಗೆ ಮುಸ್ಲಿಮನಾಗಿ ಬಂದಿದ್ದೇನೆ. ನನ್ನ ಸಹೋದರನನ್ನು ಅನ್ಯಾಯದಿಂದ ಕೊಲ್ಲಲಾಗಿದೆ. ಆ ಬಗ್ಗೆ ಪರಿಹಾರವನ್ನು ಅಪೇಕ್ಷಿಸುತ್ತೇನೆ." ಅವನ ಸಹೋದರನಾದ ಹಿಶಾಮನನ್ನು ಕೊಂದುದಕ್ಕಾಗಿ ಅವನಿಗೆ ಪರಿಹಾರ ನೀಡಬೇಕೆಂದು ಪ್ರವಾದಿಯವರು(ಸ) ಆಜ್ಞಾಪಿಸಿದರು. ಪರಿಹಾರ ಪಡೆದ ಮಖೀಸ್ ಸ್ವಲ್ಪ ಕಾಲ ಪ್ರವಾದಿಯ(ಸ) ಜೊತೆ ತಂಗಿದನು. ಅವನು ಸಂದರ್ಭ ನೋಡಿ, ತನ್ನ ಸಹೋದರನನ್ನು ಹತ್ಯೆ ಮಾಡಿದವನನ್ನು ಕೊಂದನು. ಅನಂತರ ಅವನು ಧರ್ಮತ್ಯಾಗ ಮಾಡಿ ಮಕ್ಕಕ್ಕೆ ಓಡಿಹೋದನು. ಮಖೀಸ್‌ನಿಗೆ ಪರಿಹಾರ ಧನ ದೊರೆತ ನಂತರ ಸಹ ಅವನು ಒಬ್ಬ ಮದೀನದ ನಿವಾಸಿಯನ್ನು ಕೊಂದ ಕಾರಣದಿಂದ ಅವನನ್ನು ನುಮೈಲ ಬಿನ್ ಅಬ್ದುಲ್ಲಾ ಕೊಂದರು. (ಇಬ್ನು ಹಿಶಾಮ್)

ಸಾರ ಗಲಭೆ ಗೊಂದಲಗಳನ್ನು ಬಡಿದೆಬ್ಬಿಸುತ್ತಾ ಇದ್ದರೂ ಅವಳನ್ನು ಪ್ರವಾದಿಯವರು(ಸ) ತನ್ನ ಜೀವಿತ ಕಾಲದಲ್ಲಿ ಕೊಲ್ಲಲಿಲ್ಲ.

ಇಕ್ರಿಮ ಬಿನ್ ಅಬೂ ಜಹ್ಲ್ ಯಮನ್‌ಗೆ ಓಡಿ ಹೋಗಿದ್ದರು. ಅವರ ಪತ್ನಿ ಉಮ್ಮು ಹಕೀಂ ಇಸ್ಲಾಮ್ ಧರ್ಮ ಸ್ವೀಕರಿಸಿ ತನ್ನ ಪತಿಯ ಪರವಾಗಿ ಕ್ಷಮೆಯನ್ನು ಯಾಚಿಸಿದಾಗ ಅವರನ್ನು ಕ್ಷಮಿಸಲಾಯಿತು. (ಇಬ್ನು ಹಿಶಾಮ್)

ಇಸ್ಲಾಮ್ ಧರ್ಮವನ್ನು ತ್ಯಜಿಸಿದ ಕಾರಣದಿಂದ ಯಾರನ್ನಾದರೂ ಪ್ರವಾದಿಯವರು(ಸ) ಶಿಕ್ಷಿಸಿದ ಕುರಿತು ಯಾವ ಸಾಕ್ಷ್ಯಾಧಾರವೂ ದೊರಕುವುದಿಲ್ಲ.

ಪ್ರವಾದಿ(ಸ) ಹಿಜರಿ 11ನೇ ವರ್ಷದಲ್ಲಿ (ಕ್ರಿ.ಶ.632) ಮೃತರಾದಾಗ ಬಾಲ್ಯಾವಸ್ಥೆಯ ಮುಸ್ಲಿಮ್ ರಾಜ್ಯಾಡಳಿತೆ ಬಹಳ ದೊಡ್ಡ ಸಂಕಟಮಯ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ದೇಶದ ಅನೇಕ ಭಾಗಗಳಲ್ಲಿ ವಿದ್ರೋಹ ತಲೆದೋರಿತು. ಅನೇಕ ಗೋತ್ರಗಳು ಝಕಾತ್ ನೀಡಲು ನಿರಾಕರಿಸಿ ತಮ್ಮನ್ನು ಮದೀನದ ಆಡಳಿತೆಯಿಂದ ಬೇರ್ಪಡಿಸಲು ಪ್ರಯತ್ನಿಸಿದವು. ಅವರ ಈ ವಿದ್ರೋಹವನ್ನು "ರಿದ್ದ" ಎಂದು ಕರೆಯಲಾಗಿದೆ. ಪ್ರವಾದಿಯವರ(ಸ) ಉತ್ತರಾಧಿಕಾರಿಯಾಗಿದ್ದ ಅಬೂಬಕರ್‌ರವರ(ರ) ಮುಖ್ಯ ಕೆಲಸ ಈ ವಿದ್ರೋಹವನ್ನು ಬಗ್ಗು ಬಡಿಯುವುದಾಗಿತ್ತು. ಆದರೆ ಅವರು ಕೈಗೊಂಡ ಮೊದಲನೆಯ ಕೆಲಸ ಪ್ರವಾದಿ(ಸ) ತಾನು ನಿಧನ ಹೊಂದುವುದಕ್ಕೆ ಮೊದಲು ಆಜ್ಞಾಪಿಸಿದ್ದ ಸೈನ್ಯವನ್ನು ಕಳುಹಿಸುವುದಾಗಿತ್ತು. ಅವರು ಖಲೀಫರಾಗಿ ಅಧಿಕಾರ ವಹಿಸಿಕೊಂಡ ನಂತರ ಮರುದಿನವೇ ಈ ಸೈನ್ಯವನ್ನು ಉಸಾಮ ಬಿನ್ ಝೈದ್ ಬಿನ್ ಹಾರಿಸ್‌ರವರ ಸೇನಾಧಿಪತ್ಯದಲ್ಲಿ ಸಿರಿಯದ ಗಡಿಗೆ ಕಳುಹಿಸಲಾಯಿತು.

ಉಸಾಮ ಮತ್ತು ಸೈನ್ಯವು ಹೊರಟುಹೋದ ನಂತರ ಬಹುತೇಕ ಗೋತ್ರಗಳು ಮದೀನದ ಆಡಳಿತೆಯಿಂದ ತಮ್ಮನ್ನು ಕಳಚಿಕೊಂಡವು. ಮಕ್ಕ, ಮದೀನ ಮತ್ತು ಅವುಗಳ ಸುತ್ತಮುತ್ತಲಿನ ಪ್ರದೇಶಗಳು ಮಾತ್ರ ಮದೀನದ ಕೇಂದ್ರ ಆಡಳಿತೆಗೆ ವಿಧೇಯವಾಗಿದ್ದುವು. ವಿದ್ರೋಹ ಮಾಡಿದ ಗೋತ್ರಗಳ ಮೇಲ್ವಿಚಾರಣೆಗೆ ಹಿಂದೆ ನೇಮಿಸಲಾದ ಅಧಿಕಾರಿಗಳು ತಮ್ಮ ಸ್ಥಾನ ಬಿಟ್ಟು ಮದೀನಕ್ಕೆ ಓಡಿ ಬರಲು ನಿರ್ಬಂಧಿತರಾದರು. ಆಗ ಅಲ್ಲಿ ಸಂಪೂರ್ಣ ವಿದ್ರೋಹ ತಲೆದೋರಿತ್ತು.

ವಿದ್ರೋಹಿಗಳ ವಿರುದ್ಧ ಹೋರಾಡಲು ನಿರ್ಧರಿಸಿದ ಅಬೂಬಕರ್‌ರವರು(ರ) ನಿಷ್ಠಾವಂತ ಕೆಲವು ಗೋತ್ರಗಳಿಗೆ ತನ್ನ ಪ್ರತಿನಿಧಿಗಳನ್ನು ಕಳುಹಿಸಿ ತನ್ನ ಸಹಾಯಕ್ಕೆ ಬರಲು ಕೋರಿದರು. ಅಬೂಬಕರ್‌ರವರು(ರ) ಸಹಾಯವನ್ನು ಪ್ರತೀಕ್ಷಿಸುತ್ತಾ ಇದ್ದಾಗ ಖಾರ್‌ಜ ಬಿನ್ ಹಿಸ್ನ್ ಗೋತ್ರವು ಉಯೈನ ಬಿನ್ ಹಿಸ್ನ್ ಮತ್ತು ಅಖ್ರ ಬಿನ್ ಹಬಿಸ್ ನಾಯಕತ್ವದಲ್ಲಿ ಹಠಾತ್ತಾಗಿ ಮುಸ್ಲಿಮರನ್ನು ಸೈನ್ಯ ಸಮೇತ ಆಕ್ರಮಿಸಿದರು. ಮುಸ್ಲಿಮರು ಗಾಬರಿಗೊಂಡು ಓಡಿಹೋದರೂ ಅನಂತರ ಪುನಃ ಒಗ್ಗೂಡಿ ಖಾರ್‌ಜ ಸೈನಿಕರನ್ನು ಸೋಲಿಸಿದರು.

ಝಖಲ್ ಖಸ್ಸದ ಹೋರಾಟದ ಮೊದಲು ಅರಬಿ ಗೋತ್ರಗಳ ಒಂದು ಪ್ರತಿನಿಧಿ ಸಂಘ ಮದೀನಕ್ಕೆ ಹೋಗಿ ಅಬೂಬಕರ್‌ರವರೊಂದಿಗೆ(ರ) ಝಕಾತ್ ಕುರಿತು ಚರ್ಚಿಸಲು ಬಯಸಿದರೂ ಅವರು ಅದನ್ನು ನಿರಾಕರಿಸಿದರು. ಝಕಾತ್ ಕೊಡದವರ ವಿರುದ್ಧ ಹೋರಾಡುವ ಅಬೂಬಕರ್‌ರವರ(ರ) ನಿರ್ಧಾರದ ಬಗ್ಗೆ ಕೆಲವು ಪ್ರತಿಷ್ಠಿತ ಮತ್ತು ಮೊದಲಿಗರಾದ ವಲಸೆಗಾರರು (ಮುಹಾಜಿರೀನ್) ಭಿನ್ನಾಭಿಪ್ರಾಯ ಹೊಂದಿದ್ದರು. ಈ ಗೋತ್ರಗಳು ಒಮ್ಮತಕ್ಕಾಗಿ ವಿಚಾರ ವಿನಿಮಯಕ್ಕೆ ಸಿದ್ಧರಾದುದರಿಂದ ಅವರು ಧರ್ಮತ್ಯಾಗ ಮಾಡಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ ಮತ್ತು ಮದೀನದೊಂದಿಗೆ ಸಂಪೂರ್ಣ ಸಂಬಂಧ ವಿಚ್ಛೇದಿಸಲು ಸಿದ್ಧರಿರಲಿಲ್ಲವೆಂದು ತಿಳಿಯುತ್ತದೆ. ಹೀಗಿದ್ದರೂ ಅವರು ತಮ್ಮ ಮೇಲೆ ಮದೀನವು ಪರಮಾಧಿಕಾರ ಹೊಂದುವುದನ್ನು ಒಪ್ಪಲು ಸಿದ್ಧರಿರಲಿಲ್ಲ. ಅಲ್ಲಿ ನಿರ್ಧರಿಸಬೇಕಾದುದು ಅಲ್ಲಾಹನನ್ನು ಮತ್ತು ಸಂದೇಶವಾಹಕರನ್ನು ನಂಬುವುದಾಗಿರಲಿಲ್ಲ. ಝಕಾತ್ ಬಗ್ಗೆ ಮಾತ್ರ ನಿರ್ಧಾರ ಕೈಗೊಳ್ಳಲಿಕ್ಕಿತ್ತು. ಉಮರ್‌ರವರ(ರ) ಮುಂದಾಳತ್ವದಲ್ಲಿ ಸ್ನೇಹಿತರ ಒಂದು ಗುಂಪು ಅಬೂಬುಕರ್‌ರವರು(ರ) ವಿದ್ರೋಹಿಗಳ ವಿರುದ್ಧ ಯುದ್ಧ ಮಾಡಲು ನಿರ್ಧರಿಸಿದುದನ್ನು ಆಕ್ಷೇಪಿಸಿದರು. ಉಮರ್(ರ) ಹೀಗೆ ಹೇಳಿದುದಾಗಿ ವರದಿಯಾಗಿದೆ: "ಈ ಜನರ ವಿರುದ್ಧ ಯುದ್ಧ ಮಾಡಲು ನಿಮಗಿರುವ ಅಧಿಕಾರವಾದರೂ ಏನು? ಪ್ರವಾದಿ(ಸ) ಹೇಳಿರುವರು: ಅಲ್ಲಾಹನ ಹೊರತು ಅನ್ಯ ದೇವನಿಲ್ಲ ಎಂದು ಜನರು ಹೇಳುವ ತನಕ ಯುದ್ಧ ಮಾಡಲು ನನಗೆ ಆಜ್ಞಾಪಿಸಲಾಗಿದೆ. ಅವರು ಹೀಗೆ ಹೇಳಿದರೆ ಅವರು ತಮ್ಮನ್ನು ಮತ್ತು ತಮ್ಮ ಸ್ವತ್ತುಗಳನ್ನು ನನ್ನಿಂದ ಸಂರಕ್ಷಿಸಿಕೊಳ್ಳುತ್ತಾರೆ." (ಕಿತಾಬುಲ್ ಉಮ್ಮ್ - ಸಂಪುಟ VIII ಪುಟ 256)

ಗೋತ್ರಗಳ ಪ್ರತಿನಿಧಿ ಸಂಘ ಮದೀನವನ್ನು ಬಿಟ್ಟು ತೆರಳಿದ ನಂತರ ಅಬೂಬಕರ್(ರ) ಮದೀನದ ಮುಸ್ಲಿಮರನ್ನು ಜಮಾಯಿಸಿ ಹೀಗೆ ಹೇಳಿದರು:

"ಮದೀನದಲ್ಲಿ ನಾವು ಎಷ್ಟು ಕಡಿಮೆ ಸಂಖ್ಯೆಯಲ್ಲಿ ಇದ್ದೇವೆಂಬುದನ್ನು

ಗೋತ್ರಗಳ ಪ್ರತಿನಿಧಿ ಸಂಘ ನೋಡಿದೆ. ಅವರು ನಮ್ಮನ್ನು ರಾತ್ರಿ ಆಕ್ರಮಣ ಮಾಡುವರೋ ಹಗಲಲ್ಲಿ ಆಕ್ರಮಣ ಮಾಡುವರೋ ಎಂದು ತಿಳಿಯದು. ಅವರ ಪಡೆ ನಮ್ಮಿಂದ ಒಂದು ಕಲ್ಲೆಸೆತದ ದೂರದಲ್ಲಿದೆ. ಅವರು ತಮ್ಮ ಪ್ರಸ್ತಾಪಗಳನ್ನು ನಮ್ಮಿಂದ ಅಂಗೀಕರಿಸುವಂತೆ ಮಾಡಿ ಒಂದು ಒಪ್ಪಂದ ಮಾಡ ಬಯಸಿದ್ದರು. ಆದರೆ ನಾವು ಅವರ ಕೋರಿಕೆಯನ್ನು ತಿರಸ್ಕರಿಸಿದೆವು. ಆದುದರಿಂದ ಅವರ ಆಕ್ರಮಣವನ್ನು ಎದುರಿಸಲು ಸಿದ್ಧರಾಗಿರಿ." ಮೂರು ದಿನಗಳೊಳಗೆ ಅವರು ಮದೀನವನ್ನು ಆಕ್ರಮಣ ಮಾಡಿದರು. (ತಬರಿ - ತಾರೀಕ್ ಅಲ್ ರಸೂಲ್ ವಲ್ ಮುಲುಕ್ - ಸಂಪುಟ IV ಪುಟ 1874)

"ರಿದ್ದ" ಯುದ್ಧಗಳಿಂದ ಬಹಳ ರಕ್ತಪಾತವಾಯಿತು. ಪ್ರವಾದಿಯವರ[ಸ] ನಿಧನದ ನಂತರ ಅಷ್ಟೆಲ್ಲಾ ಯುದ್ಧಗಳು ಅರಬ್ ದೇಶದಲ್ಲಿ ನಡೆದುದರ ಅವಶ್ಯಕತೆಗಳನ್ನು ಅರ್ಥ ಮಾಡಿಕೊಳ್ಳಲು ಅನಂತರದ ಚರಿತ್ರೆಗಾರರಿಗೆ ಅಸಾಧ್ಯವಾಯಿತು. ಅವರು ಇದಕ್ಕೆಲ್ಲಾ ಇಸ್ಲಾಮಿನ ವಿರುದ್ಧವಾದ "ರಿದ್ದ" ಚಳುವಳಿ ಕಾರಣವೆಂದು ಪ್ರತಿಪಾದಿಸಿದರು. ಅವಿಶ್ವಾಸದ ಅವಲಂಬನೆ (ಕುಫ್ರ್) ಮತ್ತು ಮುಸ್ಲಿಮ್ ರಾಜಕೀಯ ಶತ್ರುಗಳ ವಿರುದ್ಧ ಯುದ್ಧ ಮಾಡುವ ಮುಸ್ಲಿಮರಿಗೆ ಮರಣ ದಂಡನೆ ವಿಧಿಸುವ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಾಗಲಿ ಪ್ರವಾದಿಯವರ[ಸ] ನಡೆವಳಿಕೆ(ಸುನ್ನ)ಯಲ್ಲಾಗಲೀ ಯಾವುದೇ ಸಾಕ್ಷ್ಯಾಧಾರವನ್ನು ಕಂಡುಹಿಡಿಯಲು ಸಮರ್ಥರಾಗದ ನ್ಯಾಯಶಾಸ್ತ್ರ ಪಂಡಿತರು ಹೆಚ್ಚು ಹೆಚ್ಚಾಗಿ ಈ ಬಗ್ಗೆ ಸಂಶೋಧನೆ ನಡೆಸದೆ ಮರಣದಂಡನೆಯ ತತ್ವವನ್ನು ಅಂಗೀಕರಿಸಿದರು.

ಮುಸ್ಲಿಮ್ ವಿದ್ರೋಹಿಗಳ ವಿರುದ್ಧ ಅಬೂಬಕರ್[ರ] ಮಾಡಿದ ಯುದ್ಧವು ನ್ಯಾಯಬದ್ಧವೋ ಎಂದು ವಿಮರ್ಶಿಸಿದ ಇಮಾಮ್ ಶಾಫೀ ಹೀಗೆ ಹೇಳಿದರು: "ರಿದ್ದ ಎಂದರೆ ಹಿಂದೆ ಅಂಗೀಕರಿಸಿದ ಧರ್ಮದಿಂದ ಅವಿಶ್ವಾಸಕ್ಕೆ ಹಿಂದೆ ಸರಿಯುವುದಾಗಿದೆ ಮತ್ತು ಹಿಂದೆ ಒಪ್ಪಿಕೊಂಡ ಹೊಣೆಗಾರಿಕೆಗಳನ್ನು ಈಡೇರಿಸುವುದನ್ನು ನಿರಾಕರಿಸುವುದಾಗಿದೆ." (ಕಿತಾಬುಲ್ ಉಮ್ಮ್ - ಪುಟ 255-6)

ಬರೇ ಧರ್ಮತ್ಯಾಗ ಸಾಕಾಗಲಾರದು. ಅದರೊಂದಿಗೆ ಒಪ್ಪಂದಕ್ಕೆ ಭಂಗವನ್ನುಂಟು ಮಾಡಿದ ಆರೋಪ ಸಹ ಹೆಚ್ಚುವರಿಯಾಗಿ ಹೊರಿಸಬೇಕು.

ಇಬ್ನು ಅಬೀಯುಲ್ ಹದೀದ್ ಬೇರೆಯೇ ಅಭಿಪ್ರಾಯ ಹೊಂದಿದವರೊಂದಿಗೆ ಸೇರಿದ್ದರು. ಅವರು ನಹ್‌ಜಲ್ ಬಲಾಘ ಎಂಬ ಗ್ರಂಥಕ್ಕೆ ಬರೆದ ವ್ಯಾಖ್ಯಾನದಲ್ಲಿ ಹೀಗೆ ಬರೆಯುತ್ತಾರೆ:

"ಝಕಾತ್ ಕೊಡಲು ನಿರಾಕರಿಸಿದ ಗೋತ್ರಗಳು ಧರ್ಮ ತ್ಯಾಗಿಗಳಾಗಿರಲಿಲ್ಲ. ಅವರನ್ನು ಪ್ರವಾದಿಯ[ಸ] ಶಿಷ್ಯರು ಹಾಗೆ ಕರೆದುದು ಆಲಂಕಾರಿಕವಾಗಿದೆ." (ಶರಹ್ ನಹ್‌ಜಲ್ ಬಲಾಘ - ಸಂಪುಟ XIII ಪುಟ 187)

"ರಿದ್ದ"ವು ಮದೀನದ ನಾಯಕತ್ವದಿಂದ ಬೇರ್ಪಡಿಕೆಯಾಗಿತ್ತಲ್ಲದೆ ಇಸ್ಲಾಮಿನಿಂದ ಬೇರ್ಪಡಿಕೆಯಾಗಿರಲಿಲ್ಲವೆಂದು ವೆಲ್‌ಹೌಸೆನ್ ಹೇಳುತ್ತಾರೆ. ಝಕಾತ್ ಕೊಡದೆ ಅಲ್ಲಾಹನನ್ನು ಆರಾಧಿಸಲು ಅನೇಕ ಗೋತ್ರಗಳು ಬಯಸಿದ್ದವು. ಕೇತಾನಿ ಸಹ ವೆಲ್‌ಹೌಸೆನ್‌ರೊಂದಿಗೆ ಸಹಮತವನ್ನು ಹೊಂದಿದ್ದಾರೆ. ಅವರು ಹೇಳುವುದು ಹೀಗೆ: "ರಿದ್ದವು ಇಸ್ಲಾಮ್ ಧರ್ಮತ್ಯಾಗದ ಚಳುವಳಿಯಾಗಿರಲಿಲ್ಲ. ಅವು ರಾಜಕೀಯ ಯುದ್ಧಗಳಾಗಿದ್ದವು." ಬೆಕರ್‌ರವರು ವೆಲ್‌ಹೌಸೆನ್ ಮತ್ತು ಕೇತಾನಿಯನ್ನು ಅನುಸರಿಸಿ ಹೀಗೆ ಹೇಳುತ್ತಾರೆ:

"ಮುಹಮ್ಮದ್‌ರವರು ಹಠಾತ್ತಾಗಿ ಮೃತರಾದಾಗ ಕೇಂದ್ರದ ಆಡಳಿತೆಯಿಂದ ದೂರ ಸರಿಯುವ ಶಕ್ತಿಗಳಿಗೆ ಹೊಸ ಬೆಂಬಲ ದೊರಕಿತು. ಆ ಚಳುವಳಿಯ ಸ್ವರೂಪವು ಚರಿತ್ರೆಗಾರನ ಗಮನವನ್ನು ಸೆಳೆಯುವುದಾಗಿದ್ದರೂ ಆ ಕಾಲದ ಜನರಿಂದ ಅದು ಮರೆಯಾಗಿತ್ತು. ಕೇಂದ್ರದಿಂದ ಬೇರ್ಪಡುವ 'ರಿದ್ದ' ಚಳುವಳಿಯು ಮದೀನದ ಸರಕಾರದಲ್ಲಿ ಅದನ್ನು ಎದುರಿಸುವವರ ವಿರುದ್ಧ ಹೋರಾಡುವ ಶಕ್ತಿ ಉಂಟುಮಾಡದೆ ಇರುತ್ತಿದ್ದರೆ ಅರಬ್ ದೇಶವು ಹಲವು ಸ್ವಾಯತ್ತ ಆಡಳಿತೆಗಳಿಗೆ ತಳ್ಳಲ್ಪಡುತ್ತಿತ್ತು. 'ರಿದ್ದ'ದ ವಿರುದ್ಧ ಹೋರಾಟವು ಧರ್ಮತ್ಯಾಗಿಗಳ ವಿರುದ್ಧವಾದ ಹೋರಾಟವಾಗಿರಲಿಲ್ಲ. ವಿರೋಧಿಗಳಿಗೆ ಆಕ್ಷೇಪಕರವಾಗಿದ್ದುದು ಇಸ್ಲಾಮ್ ಧರ್ಮವಾಗಿರಲಿಲ್ಲ. ಮದೀನದ ಆಡಳಿತೆಗೆ ತೆರಿಗೆ ಕೊಡುವುದಕ್ಕೆ ಅವರು ವಿರುದ್ಧವಾಗಿದ್ದರು. ಹೋರಾಟ ನಡೆದುದು ಅರಬ್ ದೇಶದಲ್ಲಿ ರಾಜಕೀಯ ಪರಮಾಧಿಕಾರ ಸ್ಥಾಪಿಸಲಿಕ್ಕಾಗಿತ್ತು." (ದಿ ಕ್ಯಾಂಬ್ರಿಡ್ಜ್ ಮಿಡೀವಲ್ ಹಿಸ್ಟರಿ - ಪುಟ 335)

ಬರ್ನಾರ್ಡ್ ಲೂಯಿಸ್ ಹೀಗೆ ಹೇಳುತ್ತಾರೆ:

"ಸಂಭವಗಳ ನಿಜವಾದ ಸ್ವರೂಪವನ್ನು ಧಾರ್ಮಿಕ ಮನೋಭಾವದ ಚರಿತ್ರೆಗಾರರಿಂದ ರಿದ್ದಕ್ಕೆ ಸಂಬಂಧಿಸಿ ವಿರೂಪಗೊಳಿಸಲಾಯಿತು."

ಅವರು ಹೀಗೆ ಮುಂದುವರಿಯುತ್ತಾರೆ:

"ಅಬೂಬಕರ್‌ರವರ ಉತ್ತರಾಧಿಕಾರವನ್ನು ಅಂಗೀಕರಿಸಲು ನಿರಾಕರಿಸಿದ ಗೋತ್ರಗಳು ಇಸ್ಲಾಮ್ ಧರ್ಮಕ್ಕೆ ಪರಿವರ್ತನೆ ಹೊಂದಿದ ಅವಸ್ಥೆಯಿಂದ ತಮ್ಮ ಹಿಂದಿನ ಬಹುದೇವಾರಾಧನೆಗೆ ಮರಳಿ ಹೋಗಿರಲಿಲ್ಲ. ಅವರು ಉದ್ದೇಶಿಸಿದುದು ತಾವು ಮಾಡಿದ ರಾಜಕೀಯ ಒಪ್ಪಂದ ತಮ್ಮೊಂದಿಗೆ ಒಪ್ಪಂದ ಮಾಡಿದ ಪಕ್ಷಕ್ಕೆ ಸೇರಿದ ವ್ಯಕ್ತಿಯ ನಿಧನದಿಂದ ತಾನಾಗಿಯೇ ಕೊನೆಗೊಂಡಿತು ಎಂದಾಗಿತ್ತು. ಮದೀನಕ್ಕೆ ಸಮೀಪವಾಗಿರುವ ಗೋತ್ರಗಳು ಧರ್ಮ ಪರಿವರ್ತನೆ ಮಾಡಿದ್ದುವು. ಅವರ ಹಿತಾಸಕ್ತಿಗಳು ಮುಸ್ಲಿಮ್ ಸಮುದಾಯದ ಇತರರ ಹಿತಾಸಕ್ತಿಗಳೊಂದಿಗೆ ಬಹಳ ನಿಕಟವಾಗಿದ್ದುವು ಮತ್ತು ಅವರ ಬಗ್ಗೆ ಬೇರೆಯೇ ಚರಿತ್ರೆ ಬರೆಯಲಾಗಿಲ್ಲ. ಉಳಿದ ಗೋತ್ರಗಳಿಗೆ ಸಂಬಂಧಿಸಿ ಹೇಳುವುದಾದರೆ, ಮುಹಮ್ಮದರ ನಿಧನದಿಂದ ಆ ಮದೀನದೊಂದಿಗಿದ್ದ ಅವರ ಸಂಬಂಧ ತಾನಾಗಿಯೇ ವಿಚ್ಛೇದಿಸಲ್ಪಟ್ಟಿತು. ಅವರು ತಮಗಿಷ್ಟ ಬಂದಂತೆ ವರ್ತಿಸಲು ತೊಡಗಿದರು. ತಾವು ಭಾಗವಹಿಸದೆ ಚುನಾಯಿಸಲ್ಪಟ್ಟ ಅಬೂಬಕರ್‌ರವರ ಆಜ್ಞೆಗಳಿಗೆ ಬದ್ಧರಾಗುವುದು ಆವಶ್ಯಕವೆಂದು ಅವರು ಗಣಿಸಲಿಲ್ಲ. ಅವರು ತೆರಿಗೆ ಕೊಡುವುದನ್ನು ಮತ್ತು ಒಪ್ಪಂದವನ್ನು ಸ್ಥಗಿತಗೊಳಿಸಿದರು. ಮದೀನದ ಪರಮಾಧಿಕಾರವನ್ನು ಪುನಃ ಸ್ಥಾಪಿಸಲಿಕ್ಕಾಗಿ ಅಬೂಬಕರ್‌ರವರು ಹೊಸ ಒಪ್ಪಂದಗಳನ್ನು ಮಾಡಬೇಕಾಯಿತು." (ದಿ ಅರಬ್ಸ್ ಇನ್ ಹಿಸ್ಟರಿ - ಪುಟ 51-2)

ಹಝ್ರತ್ ಅಲಿ[ರ] ಕ್ರಿ.ಶ.661ರಲ್ಲಿ ಹತ್ಯೆಗೀಡಾದರು. ಅವರ ನಿಧನದೊಂದಿಗೆ ಧರ್ಮ ಮತ್ತು ರಾಜ್ಯದ ಒಗ್ಗೂಡಿದ ನೇತೃತ್ವ ವಹಿಸುವ ಮುಸ್ಲಿಮ್ ದೊರೆಯ ಕಲ್ಪನೆಯು ಕೊನೆಗೊಂಡಿತು. ಅನಂತರ ಉಮಯ್ಯ ವಂಶದ ವಂಶಾಡಳಿತೆಯ ರಾಜ್ಯಭಾರವು ಮುಆವಿಯರವರಿಂದ[ರ] ಆರಂಭಿಸಲ್ಪಟ್ಟಿತು. 661ರಿಂದ 750ರ ತನಕ ಈ ವಂಶದವರು ಆಳಿದರು.

ಇಸ್ಲಾಮಿನ ಆರಂಭ ಕಾಲದ ದೇವ ಭಕ್ತರಾದ ಖಲೀಫರಿಗಿದ್ದ ಧಾರ್ಮಿಕ ಮನೋಭಾವನೆ ಅವರಿಗೆ ಇರಲಿಲ್ಲ ಮತ್ತು ಅವರು ಹೆಚ್ಚು ಕಡಿಮೆ ಜಾತ್ಯತೀತ ಅರಸರ ಹಾಗೆಯೇ ಗಣಿಸಲ್ಪಟ್ಟರು. ರೋಮಿನಲ್ಲಿ ಕೋನ್‌ಸ್ಟೆನ್‌ಟೈನ್ ಚಕ್ರವರ್ತಿಯು ಕ್ರೈಸ್ತ ಧರ್ಮಕ್ಕೆ ಪರಿವರ್ತನೆ ಹೊಂದಿದ ನಂತರ ಕ್ರೈಸ್ತ ಪಾದರಿಗಳು ಪಡೆದಂತಹ ಸ್ಥಾನಮಾನಗಳಿಗೆ ಸರಿ ಹೋಲುವಂತಹ ಪದವಿಗಳನ್ನು ಇಸ್ಲಾಮಿನ ಶರೀಅತಿನ ಸಂರಕ್ಷಕರಾಗಿ ಮುಸ್ಲಿಮ್ ವಿದ್ವಾಂಸರು ಗಳಿಸಿದರು. ಮಧ್ಯಕಾಲೀನ ಯುರೋಪಿನಲ್ಲಿ ಕ್ರೈಸ್ತ ಪಾದರಿಗಳು ಗೌರವಿಸಲ್ಪಡುತ್ತಿದ್ದ ಹಾಗೆಯೇ ಮುಸ್ಲಿಮ್ ವಿದ್ವಾಂಸರು ಅವರ ಜ್ಞಾನಕ್ಕಾಗಿ ಮತ್ತು ಭಯ ಭಕ್ತಿಗಾಗಿ ಗೌರವಿಸಲ್ಪಡುತ್ತಿದ್ದರಲ್ಲದೆ ನಿರಂಕುಶ ಮತ್ತು ಜನಪ್ರಿಯನಲ್ಲದ ಅರಸನ ರಾಜಕೀಯ ಅಧಿಕಾರವನ್ನು ನ್ಯಾಯಬದ್ಧಗೊಳಿಸಲು ಅವರ ಸಹಕಾರವನ್ನು ಯಾಚಿಸಲಾಗುತ್ತಿತ್ತು. ಅವರು ವಿರೋಧಿ ಪಕ್ಷದ ನಾಯಕರಾಗಿ ಸಹ ವರ್ತಿಸಿ ಅವರು ಸ್ವತಃ ಅಧಿಕಾರ ವಹಿಸದಿದ್ದರೂ ಅಧಿಕಾರಶಾಹಿಗಳ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಾ ಇದ್ದರು.

ರಾಜಕೀಯ ಮತ್ತು ಸಾಮಾಜಿಕ ವಿದ್ರೋಹಗಳನ್ನು ಧಾರ್ಮಿಕ ಪದಗಳನ್ನು ಬಳಸಿ ನ್ಯಾಯಬದ್ಧಗೊಳಿಸಲಾಯಿತು. ರಾಜಕೀಯ ಅಧಿಕಾರಕ್ಕೆ ನಡೆಸಲಾದ ವಂಶೀಯ ಹೋರಾಟಗಳು ಧಾರ್ಮಿಕ ನಂಬಿಕೆಗಳಲ್ಲಿ ಆಳವಾದ ಒಡಕನ್ನುಂಟುಮಾಡುವಷ್ಟು ಕಾಠಿಣ್ಯವನ್ನು ಬೇಗನೆ ಹೊಂದಿದವು. ಕ್ರಿ.ಶ.644ರಲ್ಲಿ ಮೂರನೆಯ ಖಲೀಫರಾಗಿದ್ದ ಉಸ್ಮಾನ್‌ರವರ[ರ] ಹತ್ಯೆ ನಂತರ ಉತ್ತರಾಧಿಕಾರಕ್ಕಾಗಿ ಉಂಟಾದ ಹೋರಾಟದಿಂದಾಗಿ ಇಸ್ಲಾಮ್ ಧರ್ಮದ ಮೂಲ ಸ್ವರೂಪದಿಂದ ಖಾರಿಜೀ ಮತ್ತು ಶಿಯಾ ಎಂಬ ಎರಡು ಮುಖ್ಯ ಚಳುವಳಿಗಳು ಹೊರಹೊಮ್ಮಿದವು. ಗುರುತರವಾದ ಪಾಪಗಳನ್ನು ಮಾಡಿದವನು ಮುಸ್ಲಿಮನಾಗಿರುವುದಿಲ್ಲ ಎಂಬ ತತ್ವವನ್ನು ಮೊತ್ತ ಮೊದಲು ಪ್ರತಿಪಾದಿಸಿದವರು ಖಾರಿಜಿಗಳಾಗಿದ್ದರು.

ಮುಸ್ಲಿಮರ ವಿರುದ್ಧ ಜಿಹಾದ್ ಪ್ರಥಮವಾಗಿ ಘೋಷಿಸಿದವರು ಸಹ ಖಾರಿಜಿಗಳಾಗಿದ್ದರು. ಅವರ ಅಭಿಪ್ರಾಯ ಪ್ರಕಾರ, ಯಾವ ಮುಸ್ಲಿಮರ ವಿರುದ್ಧ ಜಿಹಾದನ್ನು ಅವರು ಘೋಷಿಸಿದರೋ ಆ ವಿರುದ್ಧ ಪಕ್ಷದವರು ಸತ್ಯ ವಿಶ್ವಾಸಿಗಳಾಗಿರಲಿಲ್ಲ. ಖಾರಿಜಿಗಳು ಮೂಲತಃ ಅಲಿಯವರ[ರ] ಪಕ್ಷಕ್ಕೆ ಸೇರಿದವರಾಗಿದ್ದರು. ಆದರೆ ಅಲಿ[ರ] ಮತ್ತು ಮುಆವಿಯ[ರ] ಮಧ್ಯೆ ಉಸ್ಮಾನ್‌ರವರ[ರ] ಹತ್ಯೆಯ ನಂತರ ನಡೆದ ಒಂದು ಸಂಧಾನದ ಮಾತುಕತೆಯಲ್ಲಿ ತಲೆದೋರಿದ ಭಿನ್ನಾಭಿಪ್ರಾಯದ ಕಾರಣದಿಂದ ಅವರು ಅಲಿಯವರ[ರ] ಪಕ್ಷವನ್ನು ಬಿಟ್ಟುಹೋದರು. ಅವರು ಹೇಳಿದರು: "ತೀರ್ಮಾನ ಅಲ್ಲಾಹನಿಗೆ ಮಾತ್ರ ಸೇರಿದುದಾಗಿದೆ." ಅದು ಮಾನವ ತೀರ್ಪುಗಾರರಿಗೆ ಸೇರಿದುದಲ್ಲ. ವಿಚಾರಕ್ಕೆಡೆಗೊಡದ ನಂಬಿಕೆ (dogma) ರೂಪಿಸುವುದರಲ್ಲಿ ಅವರು ಮುಖ್ಯಪಾತ್ರವಹಿಸಿದರು. ಒಬ್ಬ ಮುಸ್ಲಿಮನ ಗುಣಗಳ ಕುರಿತು ಮತ್ತು ಮುಸ್ಲಿಮ್ ಮತ್ತು ಅಮುಸ್ಲಿಮರಾದ ಇತರರೊಂದಿಗೆ ಅವನ ವರ್ತನೆ ಕುರಿತು ಅವರು ಖಂಡಿತ ಅಭಿಪ್ರಾಯಗಳನ್ನು ಹೊಂದಿದ್ದರು.

ಖಾರಿಜಿ ಪಂಥವು ಇಸ್ಲಾಮ್ ಧರ್ಮದಲ್ಲಿ ತಲೆದೋರಿದ ಪ್ರಥಮ ಭಿನ್ನ ಪಂಗಡವಾಗಿದೆ. ಒಬ್ಬನನ್ನು ಅವನ ವಿಶ್ವಾಸಕ್ಕೆ ಅನುಸಾರವಾಗಿ ತೀರ್ಮಾನಿಸಬೇಕು ಎಂಬ ತತ್ವವನ್ನು ತಿರಸ್ಕರಿಸಬೇಕೆಂದು ಪ್ರಥಮವಾಗಿ ಪ್ರತಿಪಾದಿಸಿದವರು ಅವರಾಗಿದ್ದಾರೆ. ಗುರುತರವಾದ ಪಾಪಕೃತ್ಯ ಮಾಡಿದವರು ಮುಸ್ಲಿಮನಾಗಿ ಉಳಿಯುವುದಿಲ್ಲ; ಅವನು ಧರ್ಮಕ್ಕೆ ಪುನಃ ಪ್ರವೇಶಿಸಲಾರ; ಅವನನ್ನು ಅವನ ಕುಟುಂಬದ ಜೊತೆಗೆ ಕೊಲ್ಲಬೇಕೆಂದು ಅವರು ಪ್ರತಿಪಾದಿಸಿದರು. ಖಾರಿಜಿ ಪಂಥಕ್ಕೆ ಹೊರಗಾಗಿರುವ ಎಲ್ಲರೂ ಬಹಿಷ್ಕೃತರೂ ಮುಸ್ಲಿಮೇತರರೂ ಆಗಿರುವರು ಎಂದು ಅವರು ಗಣಿಸಿದರು. ಆದರೆ ನಾವು ಈ ಮೊದಲು ನೋಡಿದ್ದೇವೆ. ಪ್ರವಾದಿಯವರಿಗೆ[ಸ] ಮದೀನದ ಕಪಟ ವಿಶ್ವಾಸಿಗಳ ಕುರಿತು ಮತ್ತು ಅವರ ನಾಯಕ ಅಬ್ದುಲ್ಲಾ ಬಿನ್ ಉಬಯ್ಯ ಎಂದೂ ತಿಳಿದಿತ್ತು. ಹೀಗಿದ್ದರೂ ಅವರು ಅವನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಒಬ್ಬ ಮುಸ್ಲಿಮನ ವಿಶ್ವಾಸ ಯಾವ ಮಟ್ಟದಲ್ಲಿದೆಯೆಂದು ಅವರು ತೀರ್ಪು ನೀಡಲು ಒಡಂಬಡಲಿಲ್ಲ.

ಖಾರಿಜಿ ಪಂಥದವರು ಪವಿತ್ರ ಖುರ್‌ಆನ್ ಮತ್ತು ಪ್ರವಾದಿ ನಡೆವಳಿಕೆಯ ತತ್ವಗಳಿಗೆ ತೀರಾ ವಿರುದ್ಧವಾಗಿದ್ದರು. "ತೀರ್ಮಾನ ಅಲ್ಲಾಹನಿಗೆ ಮಾತ್ರ ಸೇರಿದುದಾಗಿದೆ." (ಲಾ ಹುಕಮ ಇಲ್ಲಾ ಅಲ್ಲಾಹ್) ಎಂಬ ಘೋಷಣೆ ಪ್ರವಾದಿ ನಡೆವಳಿಕೆಗಳಿಗೆ ಸಂಪೂರ್ಣ ವಿರುದ್ಧವಾಗಿತ್ತು. ಬನೂ ಖುರೈಝ ಗೋತ್ರದ ಯಹೂದಿಯರ ಕುರಿತು ತೀರ್ಮಾನ ಮಾಡಲು ಸಅದ್ ಬಿನ್ ಮುಆದ್‌ರವರನ್ನು ಪ್ರವಾದಿಯವರು[ಸ] ನೇಮಿಸಿದ್ದರು. ಸಅದ್ ನೀಡಿದ ತೀರ್ಪನ್ನು ಜಾರಿಗೊಳಿಸಲಾಯಿತು. ಸಹೀಹ್ ಮುಸ್ಲಿಮ್‌ನಲ್ಲಿ ಉಲ್ಲೇಖಿಸಲ್ಪಟ್ಟ ಸಅದ್‌ರವರ ತೀರ್ಪನ್ನು ವಿಮರ್ಶಿಸುತ್ತಾ ನವವೀ (ಮರಣ: ಹಿಜರಿ 127/ ಕ್ರಿ.ಶ.676) ಹೀಗೆ ಹೇಳಿದರು: "ಮುಸ್ಲಿಮರು ತಮ್ಮ ವಿವಾದಗಳನ್ನು ನ್ಯಾಯಾಧೀಶರ ತೀರ್ಮಾನಗಳಿಗೆ ಒಪ್ಪಿಸುತ್ತಿದ್ದರು." (ಸಹೀಹ್ ಮುಸ್ಲಿಮ್ - ಶರಹ್ ಅಲ್‌ನವವಿ - ಸಂಪುಟ II, ಪುಟ 112-113 - ಲಾಹೋರ್: 1958, 62)

ವಾಸ್ತವಿಕ ಸಂಗತಿ ಏನೆಂದರೆ ಎರಡು ಮುಸ್ಲಿಮ್ ಗುಂಪುಗಳು ಹೋರಾಡುತ್ತಿದ್ದರೆ ಅವರ ಮಧ್ಯೆ ಶಾಂತಿ ಸ್ಥಾಪಿಸುವುದು ಇತರ ಮುಸ್ಲಿಮರ ಕರ್ತವ್ಯವಾಗಿದೆ. ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

"ಸತ್ಯವಿಶ್ವಾಸಿಗಳು (ಪರಸ್ಪರ) ಸಹೋದರರು. ಆದುದರಿಂದ ನಿಮ್ಮ ಸಹೋದರರ ಮಧ್ಯೆ ರಾಜಿ ಮಾಡಿಸಿರಿ. ನಿಮ್ಮ ಮೇಲೆ ಕೃಪೆ ಬೀರಲಿಕ್ಕೋಸ್ಕರ ಅಲ್ಲಾಹನಿಗೆ ಭಯ ಭಕ್ತಿ ತೋರಿಸಿರಿ." (49 : 11)

ಒಂದು ನಿರ್ದಿಷ್ಟ ಧಾರ್ಮಿಕ ಅಧಿಕೃತ ವ್ಯವಸ್ಥೆಯ ಅಭಿಪ್ರಾಯದಿಂದ ಬೇರೆಯಾದ ಅಭಿಪ್ರಾಯವನ್ನು ಹೊಂದಿದುದಕ್ಕಾಗಿ ಮುಸ್ಲಿಮರನ್ನು ಅವಿಶ್ವಾಸಿಗಳೆಂದು ಕರೆಯುವುದು ಮತ್ತು ಅವರನ್ನು ಶಿಕ್ಷಿಸುವುದು ಇಸ್ಲಾಮ್ ಧರ್ಮಕ್ಕೆ ಹೊರತಾಗಿರುವ ವಿಷಯವಾಗಿದೆ. ಅಲ್ಲಾಹನ ಏಕತ್ವ ಮತ್ತು ಮುಹಮ್ಮದ್‌ರವರ[ಸ] ಪ್ರವಾದಿತ್ವವನ್ನು ನಂಬುವವನೆಂದು ಘೋಷಿಸುವವನು ಮುಸ್ಲಿಮನೆಂದು ಪ್ರವಾದಿಯವರು[ಸ] ಸ್ವತಃ ವಿವರಿಸಿರುವರು. (ಸಹೀಹ್ ಬುಖಾರಿ, ಸಹೀಹ್ ಮುಸ್ಲಿಂ - 'ಕಿತಾಬುಲ್ ಈಮಾನ್' ನೋಡಿರಿ.) ಈ ವಿವರಣೆಯ ಮೂಲಕ ಮಾತ್ರ ಮುಸ್ಲಿಮ್ ಯಾರೆಂದು ತೀರ್ಮಾನಿಸಬಹುದಾಗಿದೆ. ಅವಿಶ್ವಾಸಿಗಳೆಂದು ಘೋಷಿಸುವ ಬಗ್ಗೆ (ತಕ್‌ಫೀರ್) ಬರ್ನಾರ್ಡ್ ಲೂವಿಸ್ ಹೀಗೆನ್ನುತ್ತಾರೆ:

"ಬಹಿರಂಗ ವಿದ್ರೋಹದಿಂದ ತಾನಾಗಿ ಅವಿಶ್ವಾಸ ಜಾರಿಯಾಗುವುದಿಲ್ಲ. ಕ್ರಿ.ಶ.923ರಲ್ಲಿ ಕಾರ್‌ಮೇಥಿಯಾ ಪಂಥದ ವಿದ್ರೋಹಿಗಳನ್ನು 'ಅವಿಶ್ವಾಸಿಗಳು' ಎಂದು ದೂಷಿಸಲು ಮುಖ್ಯ ಖಾಝಿಯಾಗಿದ್ದ ಇಬ್ನುಬುಹಾಲ್ ನಿರಾಕರಿಸಿದರು. ಏಕೆಂದರೆ ಆ ವಿದ್ರೋಹಿಗಳು ತಮ್ಮ ಪತ್ರಗಳನ್ನು ದೇವನಿಗೆ ಮತ್ತು ಪ್ರವಾದಿಯವರಿಗೆ ಪ್ರಾರ್ಥನೆಯರ್ಪಿಸುತ್ತಾ ಪ್ರಾರಂಭಿಸಿದ್ದರು;

ಆದುದರಿಂದ ಅವರು ಮುಸ್ಲಿಮರಾಗಿದ್ದರೆಂದು ಅವರು ಅಭಿಪ್ರಾಯಪಟ್ಟರು. ಶಾಫೀ ನಿಯಮಗಳ ಪ್ರಕಾರ ವಿದ್ರೋಹಿಯಾದ ಒಬ್ಬ ಪಂಥಾನುಯಾಯಿ ಸಹ ಮುಸ್ಲಿಮನೆಂದು ಗಣಿಸಲ್ಪಡಬೇಕು. ಅವನ ಕುಟುಂಬ ಮತ್ತು ಸ್ವತ್ತು ಗೌರವಿಸಲ್ಪಡಬೇಕು. ಅಂತಹ ವ್ಯಕ್ತಿ ಕೈದಿಯಾದರೆ ಅವನನ್ನು ಕೂಡಲೇ ಕೊಲ್ಲಬಾರದು ಅಥವಾ ಗುಲಾಮನಾಗಿ ವಿಕ್ರಯಿಸಬಾರದು." (ಇಸ್ಲಾಮ್ ಇನ್ ಹಿಸ್ಟರಿ - ಪುಟ 233)

ಅನ್ಯರನ್ನು ಅವಿಶ್ವಾಸಿಗಳೆಂದು ಘೋಷಿಸುವುದು (ತಕ್‌ಫೀರ್) ನ್ಯಾಯಶಾಸ್ತ್ರ ಪಂಡಿತರು ರೂಪಿಸಿದ ಕಲ್ಪನೆಯಾಗಿದೆ. ನಾವು ಈ ಹಿಂದೆ ನೋಡಿದಂತೆ ಅದು ಅಲಿಯವರನ್ನು[ರ] ನಿಂದಿಸಲು ಖಾರಿಜಿಗಳು ರೂಪಿಸಿದ ನೆವನವಾಗಿದೆ. ಆದರೆ ಖಾರಿಜಿಗಳ ಈ ಆವಿಷ್ಕಾರವನ್ನು ಎತ್ತಿಕೊಂಡ ನ್ಯಾಯಶಾಸ್ತ್ರ ಪಂಡಿತರಿಗೆ ಮುಸ್ಲಿಮ್ ಯಾರು? ಎಂಬ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯವಾಗಲಿಲ್ಲ.

ಕಳೆದ 1400 ವರ್ಷಗಳ ಇಸ್ಲಾಮಿಕ ಚರಿತ್ರೆಯನ್ನು ಪರಿಶೀಲಿಸಿ ಈ ಕಾಲಾವಧಿಯಲ್ಲಿ ಇಸ್ಲಾಮ್ ಧರ್ಮತ್ಯಾಗಕ್ಕಾಗಿ ಮರಣದಂಡನೆಗೆ ಗುರಿಯಾದವರ ಸಂಖ್ಯೆ ಎಷ್ಟೆಂದು ತಿಳಿಯಲು ಪ್ರಯತ್ನಿಸುವುದಾದರೆ ಆ ಪ್ರಯತ್ನವು ನಿಷ್ಪ್ರಯೋಜಕವಾಗುವುದು.

ಮೈಮೂನ್ ಪಂಥದವರನ್ನು ಕೈರೋದಲ್ಲಿ ಮತ್ತು ಮರೋನ್ ಪಂಥದ ಅಮೀರ್ ಯೂನಿಸ್‌ರನ್ನು ಲೆಬನಾನ್‌ನಲ್ಲಿ ಮರಣದಂಡನೆಗೆ ಗುರಿಪಡಿಸಲು ಹಾಗೂ ತಬ್ರೀಝ್‌ನಲ್ಲಿ ರಶೀದುದ್ದೀನ್‌ರನ್ನು ಹಿಂಸಿಸಲು ಪ್ರಯತ್ನಿಸಿದರೂ ಅದು ಫಲಕಾರಿಯಾಗಲಿಲ್ಲ. ಆದರೆ ಇಂತಹ ಪ್ರಕರಣಗಳು ಬಹಳ ವಿರಳವಾಗಿವೆ. ಮೊಘಲರ ಕಾಲದ ಭಾರತದಲ್ಲಿ ಒಬ್ಬ ಪೋರ್ಚುಗೀಸ್ ಕ್ರೈಸ್ತ ಸನ್ಯಾಸಿ ಇಸ್ಲಾಮ್ ಧರ್ಮಾವಲಂಬಿಯಾದ ನಂತರ ಪುನಃ ಕ್ರೈಸ್ತ ಧರ್ಮಕ್ಕೆ ಮರಳಿದಾಗ ಆತನನ್ನು ಔರಂಗಬಾದ್‌ನಲ್ಲಿ ಮರಣದಂಡನೆಗೆ ಗುರಿಪಡಿಸಲಾಯಿತು. (Sir Judanath Sarkar, Short History of Aurangzib - Calcutta, 1954 - pp 105-6.) ಆದರೆ ಆತನನ್ನು ಕೊಂದುದು ಧಾರ್ಮಿಕ ಕಾರಣಗಳಿಂದಾಗಿರದೆ ರಾಜಕೀಯ ಕಾರಣಗಳಿಂದಾಗಿತ್ತು. ಆತನು ಮುಸ್ಲಿಮನೆಂಬಂತೆ ನಟಿಸಿ ಪೋರ್ಚುಗೀಸರಿಗಾಗಿ ಗೂಢಚರ್ಯೆ ನಡೆಸುತ್ತಿದ್ದನೆಂಬ ಸಂಶಯವಿದ್ದಿತು.

ಜದ್ದ್ ಬಿನ್ ದಿರ್‌ಹಮ್‌ನನ್ನು ಹಿಶಾಮ್ ಬಿನ್ ಅಬ್ದುಲ್ ಮಾಲಿಕನ ಆಜ್ಞೆ ಪ್ರಕಾರ ಕೂಫದಲ್ಲಿ (ಅಥವಾ ವಾಸಿತ್‌ನಲ್ಲಿ) ಹಿಜರಿ 124ರಲ್ಲಿ (ಅಥವಾ 125ರಲ್ಲಿ) ಕೊಲ್ಲಲಾಯಿತು. (ಕ್ರಿ.ಶ.746 ಅಥವಾ 747ರಲ್ಲಿ.) ಅವನು ಮುಅತಝಿಲಿ ನಂಬಿಕೆಗಳಾದ "ಸೃಷ್ಟಿಸಲಾದ ಖುರ್‌ಆನ್" ಮತ್ತು "ಸ್ವತಂತ್ರ ಮನೋಭಾವ" ತತ್ವಗಳನ್ನು ಪ್ರತಿಪಾದಿಸುತ್ತಿದ್ದುದಾಗಿ ಆರೋಪಿಸಲ್ಪಟ್ಟಿದ್ದನು. ಹಿಜರಿ 167 ಅಥವಾ 168ರಲ್ಲಿ (ಕ್ರಿ.ಶ.788) ಇರಾಖಿನ ಕವಿ ಬಶೀರ್ ಬಿನ್ ಬುರ್‌ದನ ಮೇಲೆ ಪಾಖಂಡಿ ಎಂಬ ಆರೋಪ ಹೊರಿಸಿ ಹೊಡೆಯಲಾಯಿತು ಮತ್ತು ಅವನನ್ನು ಬತೀಹದ ಜವುಗು ಪ್ರದೇಶಕ್ಕೆ ಎಸೆಯಲಾಯಿತು. ಅಲ್‌ಹುಸೈನ್ ಬಿನ್ ಮನ್‌ಸೂರ್ ಅಲ್ ಹಲ್ಲಾಜ್ ತಾನು ದೇವನೊಂದಿಗೆ ಐಕ್ಯವನ್ನು (ಹುಲೂಲ್) ಹೊಂದಿರುವುದಾಗಿ ವಾದಿಸಿದುದರಿಂದ ದೇವನಿಂದೆಗಾಗಿ ಹಿಜರಿ 309ರಲ್ಲಿ (ಕ್ರಿ.ಶ.930) ಕೊಲ್ಲಲಾಯಿತು. ಶಿಹಾಬುದ್ದೀನ್ ಯಹ್‌ಯಾ ಅಲ್ ಸುಹ್ರವರ್ದಿಯನ್ನು ಮಲಿಕುಲ್ ಝಹಿರ್ (ಹಿಜರಿ 578 / ಕ್ರಿ.ಶ.1199) ಆಜ್ಞೆ ಪ್ರಕಾರ ಕೊಲ್ಲಲಾಯಿತು. ಎಲ್ಲಾ ಜೀವಂತವಾಗಿರುವ, ಚಲಿಸುವ ಅಥವಾ ಅಸ್ತಿತ್ವವನ್ನು ಹೊಂದಿದ ವಸ್ತುಗಳು ಸತ್ಯವೆಂದು ಆತನು ಗಣಿಸುತ್ತಿದ್ದುದು ಆತನ ಮೇಲೆ ಹೊರಿಸಲಾದ ಅಪರಾಧವಾಗಿತ್ತು. ಆತನು ಬೆಳಕನ್ನು ಆಧಾರವಾಗಿಟ್ಟುಕೊಂಡು ದೇವಾಸ್ತಿತ್ವದ ಸಾಕ್ಷ್ಯವನ್ನು ನೀಡಿದ್ದನು.

ಕ್ರಿ.ಶ. ಹದಿನೇಳನೇ ಶತಮಾನದ ಹುತಾತ್ಮ ಮುಹಮ್ಮದ್ ಸಯೀದ್ ಸರ್‌ಮದ್ ಆಗಿದ್ದರು. ಅವರು ಕಾಶಾನ್‌ನಲ್ಲಿ ಯಹೂದಿ ತಂದೆ ತಾಯಿಗಳ ಮಗನಾಗಿ ಜನಿಸಿದ್ದರು. ಇಸ್ಲಾಮ್ ಧರ್ಮ ಸ್ವೀಕರಿಸುವ ಮೊದಲು ಅವರು ಯಹೂದಿ ಪುರೋಹಿತರಾಗಿದ್ದರು. ಮಹಾ ಪರ್ಶಿಯನ್ ಕವಿಯಾಗಿದ್ದ ಅವರು ಏಕತತ್ವವಾದಿಯಾಗಿದ್ದು ಪದಾರ್ಥಗಳ ಅಸ್ತಿತ್ವವನ್ನು ನಿರಾಕರಿಸಿದ್ದರು. ಅವರನ್ನು ಔರಂಗಜೇಬರ ಆಡಳಿತೆಯ ಕಾಲದಲ್ಲಿ (1658-1707) ಮರಣದಂಡನೆಗೆ ಗುರಿಪಡಿಸಲಾಯಿತು. ಅವರ ಗೋರಿ ದೆಹಲಿ ಜುಮಾ ಮಸ್ಜಿದ್ ಮುಂಭಾಗದಲ್ಲಿದೆ. ಪ್ರತಿದಿನ ನೂರಾರು ಮುಸ್ಲಿಮರು ಅವರ ಗೋರಿಗೆ ಹೂಗಳನ್ನು ಅರ್ಪಿಸಿ ಫಾತಿಹ ಓದುತ್ತಾರೆ.

ಅಫ್ಘಾನಿಸ್ಥಾನದಲ್ಲಿ ಇಬ್ಬರು ಅಹ್ಮದಿಯರನ್ನು ಅವರು ಖಾದಿಯಾನಿನ ಮಿರ್ಝಾ ಗುಲಾಮ್ ಅಹ್ಮದ್‌ರವರನ್ನು[ಅ] ವಾಗ್ದತ್ತ ಮಸೀಹರೆಂದು ನಂಬಿದುದಕ್ಕಾಗಿ ಮರಣದಂಡನೆಗೆ ಗುರಿಪಡಿಸಲಾಯಿತು. ಅವರಲ್ಲಿ ಒಬ್ಬರಾದ ಸಾಹಿಬ್‌ಝಾದ ಅಬ್ದುಲ್ಲತೀಫ್‌ರವರು ಅಮೀರ್ ಹಬೀಬುಲ್ಲಾ ಖಾನರಿಗೆ ಕಿರೀಟಧಾರಣೆ ಮಾಡಿಸಿದವರಾಗಿದ್ದರು. ಅವರನ್ನು 1903ರಲ್ಲಿ ಕಲ್ಲೆಸೆದು ಕೊಲ್ಲಲಾಯಿತು. ಇನ್ನೊಬ್ಬರಾದ ಮೌಲವಿ ನಿಅ್‌ಮತುಲ್ಲಾರವರನ್ನು 1924ರಲ್ಲಿ ಕೊಲ್ಲಲಾಯಿತು. ತಮ್ಮ ವಿಶ್ವಾಸಗಳನ್ನು ತ್ಯಜಿಸಿ ಮಿರ್ಝಾ ಗುಲಾಮ್ ಅಹ್ಮದ್‌ರವರ[ಅ] ವಾದಗಳನ್ನು ನಿರಾಕರಿಸಲು ಅವರಿಗೆ ಸಂದರ್ಭ ಕೊಡಲಾಗಿತ್ತು. ಆದರೆ ಅವರು ಆ ಕೊಡುಗೆಯನ್ನು ತಿರಸ್ಕರಿಸಿದರು.

ಸೂಡಾನ್‌ನಲ್ಲಿ ಮುಹಮ್ಮದ್ ಮಹ್‌ಮೂದ್ ತಾಹರನ್ನು 1958ರಲ್ಲಿ ಮರಣದಂಡನೆಗೆ ಗುರಿಪಡಿಸಲಾಯಿತು. ಮದೀನದಲ್ಲಿ ಅವತೀರ್ಣವಾದ ಪವಿತ್ರ ಖುರ್‌ಆನಿನ ನಿಯಮಗಳು ಈಗ ಅನ್ವಯಿಸುವುದಿಲ್ಲ ಎಂದು ಅವರು ನಂಬಿದ್ದರು.

ಒಟ್ಟೋಮನ್ ಸಾಮ್ರಾಜ್ಯದ ಚಕ್ರವರ್ತಿಯೂ ಮುಸ್ಲಿಮರ ಧಾರ್ಮಿಕ ಸರ್ವೋನ್ನತ ನಾಯಕರೂ ಆಗಿದ್ದ ಟರ್ಕಿಯ ಸುಲ್ತಾನರು ಬಹಾವುಲ್ಲಾರವರನ್ನು (1817-1892) ಧರ್ಮತ್ಯಾಗಕ್ಕಾಗಿ ಶಿಕ್ಷಿಸಲಿಲ್ಲ ಎಂಬುದು ಗಮನಾರ್ಹವಾಗಿದೆ. ಬಹಾವುಲ್ಲಾ ತಾನು ಬಾಬ್‌ರಿಂದ ಮುಂಚಿತವಾಗಿ ತಿಳಿಸಲ್ಪಟ್ಟ ವಾಗ್ದತ್ತ ಮಹಾಪುರುಷನೆಂದು ವಾದಿಸಿ ಬಹಾಯಿ ಧರ್ಮವನ್ನು ಸ್ಥಾಪಿಸಿದರು. ಬಹಾಯಿ ಧರ್ಮ ಇಸ್ಲಾಮಿನಿಂದ ಬೇರೆಯೇ ಆದ ಧರ್ಮವಾಗಿದೆ. ಬಹಾವುಲ್ಲಾ ಆಗಮಿಸಿದ ನಂತರ ಪವಿತ್ರ ಖುರ್‌ಆನ್ ಮತ್ತು ಮುಹಮ್ಮದ್ ಪೈಗಂಬರರ[ಸ] ಉಪದೇಶಗಳು ರದ್ದುಗೊಳಿಸಲ್ಪಡುತ್ತವೆ ಎಂದು ಬಹಾಯಿ ಧರ್ಮ ಘೋಷಿಸುತ್ತದೆ. ಬಹಾವುಲ್ಲಾರನ್ನು ಹೈಫದ ಸಮೀಪ ಅಕ್ಕ(ಅಕ್ರೆ) ಎಂಬಲ್ಲಿ ಸೆರೆಮನೆಯಲ್ಲಿಡಲಾಯಿತು. ಅಕ್ಕ ಆಗ ಪ್ಯಾಲೆಸ್ತೀನ್ ರಾಜ್ಯಕ್ಕೆ ಸೇರಿತ್ತು. ಈಗ ಅದು ಇಸ್ರಾಯೇಲ್ ದೇಶದ ಆಡಳಿತೆಗೊಳಗಾಗಿದೆ.

ಸಬ್ಬತಾಯಿ ಝೆವಿ (1627-76) ಎಂಬ ಯಹೂದಿ ಸನ್ಯಾಸಿ ತಾನು ಮಸೀಹನೆಂದು 1648ರಲ್ಲಿ ವಾದಿಸಿದಾಗ ಒಟ್ಟೋಮನ್ ಸಾಮ್ರಾಜ್ಯದ

ಶೈಖುಲ್ ಇಸ್ಲಾಮ್ (ಅತ್ಯುನ್ನತ ಧಾರ್ಮಿಕ ಅಧಿಕಾರಿ) ಆತನನ್ನು ಕೊಲ್ಲಬೇಕೆಂದು ಆದೇಶಿಸಿದಾಗ ಆತನನ್ನು ಕೈದು ಮಾಡಲಾಯಿತು. ಆತನು ಮರಣದಂಡನೆಯಿಂದ ಮುಕ್ತನಾಗಲಿಕ್ಕಾಗಿ ತನ್ನ ವಾದವನ್ನು ನಿರಾಕರಿಸಿದನು ಮತ್ತು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದನು. ಬಹಾವುಲ್ಲಾ ತನ್ನನ್ನು ದೇವನ "ಹೊಸ ಪ್ರಕಟಣೆ" ಎಂದು ಘೋಷಿಸಿ, ಇಸ್ಲಾಮ್ ಧರ್ಮತ್ಯಾಗ ಮಾಡಿದರೂ ಅವರನ್ನು ಧರ್ಮತ್ಯಾಗಕ್ಕಾಗಿ ಮರಣದಂಡನೆಗೆ ಗುರಿಪಡಿಸಲಿಲ್ಲ. ಏಕೆಂದರೆ ಅವರು ಒಟ್ಟೋಮನ್ ಸಾಮ್ರಾಜ್ಯದ ಕಾನೂನು ಕಾಯಿದೆ ವ್ಯವಸ್ಥೆಗೆ ಭಂಗ ಉಂಟುಮಾಡುವ ಅಪಾಯಕಾರಿ ವ್ಯಕ್ತಿಯಾಗಿರಲಿಲ್ಲ.

ನಾವು ಈ ಮೊದಲು ವಿವರಿಸಿದ ಹಾಗೆ ಧರ್ಮತ್ಯಾಗ ದಂಡನಾರ್ಹ ಅಪರಾಧವೆಂಬ ಕಲ್ಪನೆ ಇಸ್ಲಾಮ್ ಧರ್ಮಕ್ಕೆ ಹೊರತಾದುದಾಗಿದೆ. ಧರ್ಮತ್ಯಾಗಿಗೆ ಇಸ್ಲಾಮ್ ಧರ್ಮ ಇಹಲೋಕದ ಶಿಕ್ಷೆ ವಿಧಿಸುವುದಿಲ್ಲ. ಆದರೆ ಪಾಕಿಸ್ತಾನ್ ಪಂಜಾಬಿನ ಕೋರ್ಟ್ ಆಫ್ ಇನ್‌ಕ್ವಯರಿ (ಪಂಜಾಬ್ ಕಾನೂನು II 1954 ಪ್ರಕಾರ ನೇಮಿಸಲ್ಪಟ್ಟದ್ದು) ಮುಂದೆ ಹಾಜರಾದ ಈ ಕೆಳಗಿನ ಮುಸ್ಲಿಮ್ ವಿದ್ವಾಂಸರು "ಧರ್ಮತ್ಯಾಗಕ್ಕೆ ಇಸ್ಲಾಮೀ ರಾಷ್ಟ್ರದಲ್ಲಿ ಮರಣದಂಡನೆಯ ಶಿಕ್ಷೆ ಇದೆ" ಎಂದು ಖಂಡಿತವಾಗಿ ಹೇಳಿದರು:

ಮೌಲಾನ ಅಬ್ದುಲ್ ಹಸನಾತ್ ಸಯ್ಯದ್ ಮುಹಮ್ಮದ್ ಅಹ್ಮದ್ ಖಾದ್ರಿ (ಪ್ರೆಸಿಡೆಂಟ್ ಜಮಿಯತುಲ್ ಉಲಮಾ ಪಾಕಿಸ್ತಾನ್, ಪಂಜಾಬ್), ಮೌಲಾನ ಅಹ್ಮದ್ ಅಲಿ (ಸದರ್ ಜಮೀಯತುಲ್ ಉಲಮಾ ವೆಸ್ಟ್ ಪಾಕಿಸ್ತಾನ್), ಮೌಲಾನ ಅಬುಲ್ ಆಲಾ ಮೌದೂದಿ (ಸ್ಥಾಪಕ ಅಮೀರ್ ಜಮಾಅತೆ ಇಸ್ಲಾಮೀ ಪಾಕಿಸ್ತಾನ್), ಮುಫ್ತೀ ಮುಹಮ್ಮದ್ ಇದ್ರೀಸ್ (ಜಾಮೀ ಅಶ್ರಫಿಯ ಲಾಹೋರು), ಮೌಲಾನ ದಾವೂದ್ ಗಝ್ನವಿ (ಪ್ರೆಸಿಡೆಂಟ್ ಜಮಾಅತ್ ಅಹ್ಲೆ ಹದೀಸ್, ಪಶ್ಚಿಮ ಪಾಕಿಸ್ತಾನ), ಮೌಲಾನ ಅಬ್ದುಲ್ ಹಲೀಮ್ ಖಾಸಿಮೀ (ಜಮಿಯತುಲ್ ಉಲಮಾಯೆ ಇಸ್ಲಾಮ್, ಪಂಜಾಬ್) ಮತ್ತು ಇಬ್ರಾಹೀಮ್ ಅಲಿ ಚಿಶ್ತಿ.

(ಮುನೀರ್ ಕಮಿಶನ್ ರಿಪೋರ್ಟ್ - ಪುಟ 218, 219)

ಮತಪಂಡಿತರ ಈ ಹೇಳಿಕೆಯ ಕುರಿತು ಕೋರ್ಟ್ ಆಫ್ ಇನ್‌ಕ್ವಯರಿ ಹೀಗೆ ಹೇಳಿತು:

"ಮತಪಂಡಿತರು ಹೇಳುವ ತತ್ವದ ಪ್ರಕಾರ ಚೌಧರಿ ಝಫರುಲ್ಲಾ ಖಾನರು ತಮ್ಮ ವಿಶ್ವಾಸವನ್ನು ವಾರೀಸುದಾರಿಕೆಯಿಂದ ಪಡೆದಿಲ್ಲವಾದರೆ ಮತ್ತು ಅವರು ಸ್ವತಃ ಅಹ್ಮದಿ ವಿಶ್ವಾಸವನ್ನು ಸ್ವಂತ ಇಷ್ಟದಿಂದ ಸ್ವೀಕರಿಸಿದ್ದರೆ ಅವರನ್ನು ಕೊಲ್ಲಬೇಕಾಗುತ್ತದೆ. ದೇವ್‌ಬಂದಿಗಳ ಮತ್ತು ವಹಾಬಿಗಳ ಮೇಲೂ ಇದೇ ವಿಧಿ ಬಂದೆರಗಲಿದೆ. [ಹೀಗೆ ಈ ವಿಧಿಗೆ ಪಾತ್ರರಾಗಲಿರುವವರಲ್ಲಿ ಮೌಲಾನ ಮುಹಮ್ಮದ್ ಶಾಫೀ ದೇವ್‌ಬಂದಿ, ಪಾಕಿಸ್ತಾನ ಸಂವಿಧಾನ ಸಭೆಗೆ ಸಂಬಂಧಿಸಿದ ಬೋರ್ಡ್ ಆಫ್ ತಲ್‌ಲೀಮಾತೆ ಇಸ್ಲಾಮಿಯ ಸದಸ್ಯ) ಮತ್ತು ಮೌಲಾನ ದಾವೂದ್ ಗಝ್ನವಿ ಸೇರದ್ದಾರೆ.] ಫತ್ವ (EX.D.E.14) ನೀಡಿದ ಮತಪಂಡಿತರು ಸುಂದರ ವೃಕ್ಷದ ಪ್ರತಿಯೊಂದು ಎಲೆಯ ಮೇಲೆ ಕುಳಿತಿದ್ದಾರೆ. ಇಂತಹ ಮತಪಂಡಿತರಲ್ಲಿ ಯಾರಾದರೊಬ್ಬ ಇಸ್ಲಾಮೀ ರಾಷ್ಟ್ರದ ಮುಖ್ಯಸ್ಥನಾದರೆ ಅವರ ಗತಿ ಹೀಗೆಯೇ ಆಗುವುದು. ಆದರೆ ಮೌಲಾನ ಮುಹಮ್ಮದ್ ಶಫೀ ದೇವ್‌ಬಂದಿ ಇಸ್ಲಾಮೀ ರಾಷ್ಟ್ರದ ಅಧ್ಯಕ್ಷನಾದರೆ, ದೇವ್‌ಬಂದಿಗಳು ಯಾರನ್ನು ಕಾಫಿರರೆಂದು ಘೋಷಿಸಿರುವರೋ ಅವರ ಮೇಲೆ ಶಿಕ್ಷೆ ಜಾರಿಗೊಳಿಸಲ್ಪಡುವುದು. ಯಾರಾದರೂ ವಾರೀಸುದಾರಿಕೆಯಿಂದ ತಮ್ಮ ವಿಶ್ವಾಸವನ್ನು ಗಳಿಸಿರದೆ ಸ್ವತಃ ವಿಶ್ವಾಸಗಳನ್ನು ಅಂಗೀಕರಿಸಿದ್ದರೆ ಮುರ್‌ತದ್ದ್ (ಧರ್ಮತ್ಯಾಗಿ) ಎಂದು ವಿಧಿಸಲ್ಪಟ್ಟು ಮರಣದಂಡನೆಗೆ ಗುರಿಪಡಿಸಲಾಗುವುದು.

"ಇಸ್ನಾ ಅಶರಿ ಶಿಯಾ ವಿಶ್ವಾಸಿಗಳು ಕಾಫಿರರೂ ಮುರ್‌ತದ್ದ್‌ಗಳೂ ಆಗಿರುವರೆಂದು ಘೋಷಿಸುವ ಫತ್ವ ಕ್ರಮಾಂಕ EX.D.E.13 ಇದರ ಸಾಚಾತನದ ಬಗ್ಗೆ ನಾವು ವಿಚಾರಣೆ ನಡೆಸುವಾಗ ಪ್ರಶ್ನಿಸಲಾಯಿತು. ಮೌಲಾನ ಮುಹಮ್ಮದ್ ಶಫೀ ದೇವ್‌ಬಂದ್ ಮದ್ರಸದಿಂದ ಫತ್ವದ ಪ್ರತಿಯನ್ನು ತರಿಸಿದರು. ಅದರಲ್ಲಿ ಮೌಲಾನ ಮುಹಮ್ಮದ್ ಶಫೀ ಸಹಿತ ದೇವ್‌ಬಂದ್ ಮದ್ರಸದ ಎಲ್ಲಾ ಅಧ್ಯಾಪಕರು ಸಹಿ ಮಾಡಿದ್ದರು. ಆ ಫತ್ವದಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ಅಬೂಬಕರ್‌ರವರನ್ನು(ರ) ಸಹಾಬಿ ಎಂದು ಗೌರವಿಸದವರು, ಆಯಿಶಾರವರ(ರ) ಮೇಲೆ ಸುಳ್ಳು ದೋಷಾರೋಪ ಮಾಡುವವರು ಮತ್ತು ಪವಿತ್ರ ಖುರ್‌ಆನಿನ ಗೌರವಕ್ಕೆ ಭಂಗ ತಂದವರು ಕಾಫಿರರು ಆಗಿದ್ದಾರೆ. ಈ ವಿಷಯದ ಕುರಿತು ಅಧ್ಯಯನದ ನಡೆಸಿದ ಇಬ್ರಾಹೀಮ್ ಅಲಿ ಚಿಶ್ತಿ ಸಹ ಈ ಬಗ್ಗೆ ಒಮ್ಮತಾಭಿಪ್ರಾಯ ಹೊಂದಿದ್ದಾರೆ. ಶಿಯಾ ಪಂಥದವರು ಅಲಿಯವರ(ರ) ಕುರಿತು ಅವರು ಪ್ರವಾದಿತ್ವದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭಾಗೀದಾರರಾಗಿದ್ದರು ಎಂದು ನಂಬುವ ಕಾರಣ ಕಾಫಿರರಾಗಿದ್ದಾರೆ ಎಂದು ಅವರು ಭಾವಿಸುತ್ತಾರೆ. ಒಬ್ಬ ಸುನ್ನಿ ತನ್ನ ವಿಶ್ವಾಸಗಳನ್ನು ಬದಲಾಯಿಸಿ ಶಿಯಾರೊಂದಿಗೆ ಸೇರಿದರೆ ಅವನು ಮುರ್‌ತದ್ದ್ ಆಗುತ್ತಾನೋ ಹಾಗೂ ಮರಣದಂಡನೆಗೆ ಗುರಿಯಾಗುತ್ತಾನೋ ಎಂಬ ಪ್ರಶ್ನೆಗೆ ಅವರು ಉತ್ತರ ಕೊಡಲಿಲ್ಲ. ಶಿಯಾ ನಂಬಿಕೆ ಪ್ರಕಾರ ಎಲ್ಲಾ ಸುನ್ನಿಗಳು ಕಾಫಿರರಾಗಿದ್ದಾರೆ. ಅಲ್ಲದೆ ಹದೀಸುಗಳು ನಂಬಿಕೆಗ ನರ್ಹವಾದುದರಿಂದ ಅವುಗಳ ಆಜ್ಞೆಗಳನ್ನು ಪಾಲಿಸಬೇಕಾಗಿಲ್ಲ ಎಂಬ ವಿಶ್ವಾಸವನ್ನು ಹೊಂದಿದ ಅಹ್ಲೆ ಖುರ್‌ಆನ್ ಪಂಥದವರನ್ನು ಅವರು ಕಾಫಿರರೆಂದು ಹೇಳುತ್ತಾರೆ. ಇದೇ ರೀತಿ ಸ್ವತಂತ್ರ ಚಿಂತಕರೂ ಕಾಫಿರರಾಗಿದ್ದಾರೆ. ಇವುಗಳೆಲ್ಲದರ ಒಟ್ಟು ಪರಿಣಾಮವೇನೆಂದರೆ ಶಿಯಾಗಳು, ಸುನ್ನಿಗಳು, ದೇವ್‌ಬಂದಿಗಳು, ಅಹ್ಲೆ ಹದೀಸ್‌ಗಳು, ಬರೇಲ್ವಿಗಳು - ಇವರಲ್ಲಿ ಯಾರೂ ಸಹ ಮುಸ್ಲಿಮರಾಗಿರುವುದಿಲ್ಲ. ಆದುದರಿಂದ ಇತರರನ್ನು ಕಾಫಿರರೆಂದು ಭಾವಿಸುವ ಒಂದು ಪಕ್ಷದ ಜನರ ಆಡಳಿತೆಯು ಜಾರಿಯಲ್ಲಿದ್ದರೆ ಒಂದು ವಿಶ್ವಾಸದಿಂದ ಇನ್ನೊಂದು ವಿಶ್ವಾಸಕ್ಕೆ ಪರಿವರ್ತನೆ ಹೊಂದುವುದು ಮರಣದಂಡನೆಯ ಶಿಕ್ಷೆಗೆ ಅರ್ಹವಾಗುತ್ತದೆ.

"ಮುಸ್ಲಿಮನ ಸರಿಯಾದ ವಿವರಣೆ ಏನೆಂಬುದರ ಕುರಿತು ಯಾವುದೇ ಇಬ್ಬರು ಮತಪಂಡಿತರು ಒಮ್ಮತಾಭಿಪ್ರಾಯ ಹೊಂದದೆ ಇರುವಾಗ ಮೇಲಿನ ತತ್ವದ ಪಾಲನೆಯ ಪರಿಣಾಮ ಏನಾಗಬಹುದೆಂಬುದರ ಕುರಿತು ತೀರ್ಮಾನಿಸಲು ಹೆಚ್ಚು ಊಹಿಸಬೇಕಾಗಿಲ್ಲ. ಮತಪಂಡಿತರ ಎಲ್ಲಾ ವಿವರಣೆಗಳನ್ನು ಒಟ್ಟಾಗಿ ತೆಗೆದುಕೊಳ್ಳುವುದಾದರೆ ಒಬ್ಬನನ್ನು ಧರ್ಮತ್ಯಾಗಿ ಎಂದು ವಿಧಿಸಲು ಇರುವ ಕಾರಣಗಳು ಅಸಂಖ್ಯಾತವಾಗಿರುವುವು." (ಮುನೀರ್ ಕಮಿಶನ್ ರಿಪೋರ್ಟ್ - ಪುಟ 219)

**(ಮುಂದುವರಿಯುವುದು)**

ಇಂಗ್ಲಿಷ್‌ನಿಂದ ಭಾಷಾಂತರ: **A. ಅಬ್ದುಸ್ಸಲಾಮ್**

# ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ 2008

## ಹಝ್ರತ್ ಖಲೀಫತುಲ್ ಮಸೀಹ್ V ನಿರ್ದೇಶಿಸಿದ ಪ್ರಾರ್ಥನೆಗಳು ಮತ್ತು ಕರ್ಮಾನುಷ್ಠಾನಗಳು

1. ಪ್ರತಿ ಮಾಸ ಒಂದು ನಫಲ್ ಉಪವಾಸ ಅನುಷ್ಠಿಸಬೇಕು.
2. ಪ್ರತಿ ದಿನ ಎರಡು ರಕ್‌ಅತ್ ನಫಲ್ ನಮಾಝ್ ಮಾಡಬೇಕು.
3. ಪ್ರತಿ ದಿನ ಏಳು ಸಲ ಸೂರಃ ಫಾತಿಹ ಅರ್ಥಗ್ರಹಿಸಿಕೊಂಡು ಓದಬೇಕು:

☆ بِسْمِ اللّٰهِ الرَّحْمٰنِ الرَّحِيْمِ۔ اَلْحَمْدُ لِلّٰهِ رَبِّ الْعٰلَمِيْنَ ۔اَلرَّحْمٰنِ الرَّحِيْمِ ۔ مٰالِكِ يَوْمِ الدِّيْنِ ۔اِيَّاكَ نَعْبُدُوَاِيَّا كَ نَسْتَعِيْنُ۔

اِهْدِ نَاالصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ ۔غَيْرِ الْمَغْضُوْبِ عَلَيْهِمْ وَلَاالضَّآلِيْنَ۔

ಅರ್ಥ: ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ನ್ಯಾಯ ತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ. (ಓ ದೇವಾ,) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

4. ☆ اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ .

☆ اَللّٰهُمَّ بَارِكْ عَلٰى مُحَمَّدٍ وَّعَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ۔

ಅರ್ಥ: ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು- ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ವಿಶೇಷ ಕರುಣೆ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ಅನುಗ್ರಹವನ್ನು ದಯಪಾಲಿಸು - ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ಅನುಗ್ರಹ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. (ದಿನಂಪ್ರತಿ 33 ಸಲ)

5. ☆ رَبَّنَا لَا تُزِغْ قُلُوْبَنَا بَعْدَاِذْ هَدَيْتَنَا وَهَبْ لَنَامِنْ لَّدُنْكَ رَحْمَةً ۔اِنَّكَ اَنْتَ الْوَهَّابُ۔

ಅರ್ಥ: ನಮ್ಮ ಪ್ರಭೂ ನೀನು ನಮಗೆ ಮಾರ್ಗದರ್ಶನ ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿ ದೊಡ್ಡ ಅನುಗ್ರಹದಾತ. (ದಿನಂಪ್ರತಿ 33 ಸಲ)

6. ☆ رَبَّنَااَفْرِغْ عَلَيْنَاصَبْرًا وَّثَبِّتْ اَقْدَامَنَاوَانْصُرْنَاعَلَى الْقَوْمِ الْكٰفِرِيْنَ۔

ಅರ್ಥ: ನಮ್ಮ ಪ್ರಭೂ, ನೀನು ನಮಗೆ ಸ್ಥೈರ್ಯವನ್ನು ಕರುಣಿಸು. ನಮ್ಮ ಪಾದಗಳನ್ನು ಸ್ಥಿರಗೊಳಿಸಿ ಅವಿಶ್ವಾಸಿಗಳಿಗೆ ವಿರುದ್ಧವಾಗಿ ನಮಗೆ ನೆರವು ನೀಡು. (ದಿನಂಪ್ರತಿ 11 ಸಲ)

7. ☆ اَللّٰهُمَّ اِنَّانَجْعَلُكَ فِيْ نُحُوْرِهِمْ وَ نَعُوْذُبِكَ مِنْ شُرُوْرِهِمْ ۔

ಅರ್ಥ: ಓ ಅಲ್ಲಾಹ್, ಅವರನ್ನು ಎದುರಿಸಲು ನಾವು ನಿನ್ನನ್ನು ಗುರಾಣಿಯನ್ನಾಗಿ ಮಾಡುತ್ತೇವೆ. ಅವರ ಎಲ್ಲಾ ಉಪದ್ರಗಳಿಂದ ಪಾರಾಗಲು ನಿನ್ನ ಅಭಯ ಯಾಚಿಸುತ್ತೇವೆ. (ದಿನಂಪ್ರತಿ 11 ಸಲ)

8 ☆ اَسْتَغْفِرُاللّٰهَ رَبِّيْ مِنْ كُلِّ ذَنْبٍ وَّاَتُوْبُ اِلَيْهِ۔

ಅರ್ಥ: ನನ್ನ ಪ್ರಭುವಾದ ಅಲ್ಲಾಹನೊಡನೆ ನಾನು ನನ್ನ ಎಲ್ಲ ಪಾಪಗಳಿಗೆ ಕ್ಷಮೆಕೋರುತ್ತೇನೆ ಮತ್ತು ನಾನು ಅವನೆಡೆಗೆ ಬಾಗುತ್ತೇನೆ. (ದಿನಂಪ್ರತಿ 33 ಸಲ)

9. ☆ سُبْحَانَ اللّٰهِ وَبِحَمْدِهٖ سُبْحَانَ اللّٰهِ الْعَظِيْمِ۔ اَللّٰهُمَّ صَلِّ عَلٰى مُحَمَّدٍ وَّاٰلِ مُحَمَّدٍ۔

ಅರ್ಥ: ಅಲ್ಲಾಹನು ಪರಿಶುದ್ಧನು ಮತ್ತು ಅವನಿಗೆ ಸಕಲ ಸ್ತುತಿಸ್ತೋತ್ರಗಳು. ಅಲ್ಲಾಹನು ಪರಿಶುದ್ಧನು ಮತ್ತು ಮಹಾಮಹಿಮನು. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು. (ದಿನಂಪ್ರತಿ 33 ಸಲ)

Registered with the Registrar of Newspapers for India No. R.N. 27354/75
YUGARASHMI Kannada Quarterly, December - 2007

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ

ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

Muslim Ahmadiyya International

**ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನ್ಯಾಷನಲ್**

# THE FIRST ISLAMIC SATELLITE CHANNEL

**BROADCASTING ROUND THE CLOCK**

SATELLITE : ASIASAT 3S
POSITION : 105.5° EAST
FREQUENCY : 3760 MHZ
MIN. DISH SIZE : 1.8 METRE

POLARISATION : HORIZONTAL
SYMBOL RATE : 26000 MBPS
FEC : 7/8

E-Mail : info@alislam.org
Website : http:www.alislam.org/mta.tv




ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ
ಪ್ರಕಟಿಸಲ್ಪಟ್ಟ

**ಪವಿತ್ರ ಖುರ್‌ಆನ್**

**ಕನ್ನಡ ಭಾಷಾಂತರ**

ಬೆಲೆ : ರೂ. 200/-

ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001